"ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಕಾದಂಬರಿ ಚಿಕ್ಕವೀರರಾಜೇಂದ್ರ"

(ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿದ ನಿಬಂಧ)

ಸಂಶೋಧನಾ ವಿದ್ಯಾರ್ಥಿ

ವಿದ್ಯಾವತಿ .ಎಸ್

ಮಾರ್ಗದರ್ಶಕರು

ಡಾ. ಚಂದ್ರು ಕಾಳೇನಹಳ್ಳಿ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು

ಚನ್ನರಾಯಪಟ್ಟಣ.

ಹಾಸನ ಜಿಲ್ಲೆ.

ಕರ್ನಾಟಕ ಸಂಘ (ರಿ), ಮಂಡ್ಯ.

ಎಂ.ಎಲ್. ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ

(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)

2013-14

"ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಕಾದಂಬರಿ

ಚಿಕ್ಕವೀರರಾಜೇಂದ್ರ"

(ಕನ್ನಡ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ
ಸಲ್ಲಿಸಿರುವ ಸಂಶೋಧನಾ ನಿಬಂಧದ ಸಾರಲೇಖ)

ಸಂಶೋಧನಾ ವಿದ್ಯಾರ್ಥಿ

ವಿದ್ಯಾವತಿ.ಎಸ್.

ಮಾರ್ಗದರ್ಶಕರು

ಡಾ. ಚಂದ್ರು ಕಾಳೇನಹಳ್ಳಿ
ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,
ಚನ್ನರಾಯಪಟ್ಟಣ,
ಹಾಸನ ಜಿಲ್ಲೆ.

ಕರ್ನಾಟಕ ಸಂಘ (ರಿ) ಮಂಡ್ಯ,
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ.
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)

ದೃಢೀಕರಣ ಪತ್ರ

2013–14 ನೇ ಸಾಲಿನಲ್ಲಿ ವಿದ್ಯಾವತಿ.ಎಸ್.ಎಂಬ ಎಂ.ಫಿಲ್.ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ "ಮಾಸ್ತಿ ವೆಂಕಟೇಶಅಯ್ಯಂಗಾರ್‌ರವರ ಕಾದಂಬರಿ–ಚಿಕವೀರರಾಜೇಂದ್ರ" ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ನಿಬಂಧನವನ್ನು ಸಿದ್ದಪಡಿಸಿರುತ್ತಾರೆ. ಇದನ್ನು ಇವರು ಈ ಮೊದಲು ಯಾವುದೇ ಪದವಿ ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ಚಂದ್ರು ಕಾಳೇನಹಳ್ಳಿ
ಶ್ರೀಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,
ಚನ್ನರಾಯಪಟ್ಟಣ,
ಹಾಸನ ಜಿಲ್ಲೆ.

Vidyawathi.S.

ಸಂಶೋಧನಾ ವಿದ್ಯಾರ್ಥಿ
ವಿದ್ಯಾವತಿ.ಎಸ್.
ಕನ್ನಡ ಎಂ.ಫಿಲ್. ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಘೋಷಣಾ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಫಿಲ್. ಸ್ನಾತಕೋತ್ತರ ಪದವಿಯಲ್ಲಿ ಐದನೇ ಪತ್ರಿಕೆಗೆ ಸಂಬಂಧಿಸಿದಂತೆ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಬರೆದಿರುವ ಕಾದಂಬರಿ 'ಚಿಕವೀರ ರಾಜೇಂದ್ರ' ಎಂಬ ಅಧ್ಯಯನ ನಿಬಂಧವನ್ನು ನಾನು ಸಿದ್ದಪಡಿಸಿರುತ್ತೇನೆ. ಈ ನಿಬಂಧವನ್ನು ಈ ಮೊದಲು ಪೂರ್ಣವಾಗಿಯೇ ಆಗಲಿ, ಆಂಶಿಕವಾಗಿಯೇ ಆಗಲಿ, ಯಾವುದೇ ಡಿಪ್ಲೋಮೋ ಇಲ್ಲದೆ ಇತರೆ ಪದವಿಗಳಿಗಾಗಿ ನಾನು ಒಪ್ಪಿಸಿಲ್ಲ.

ದಿನಾಂಕ –30-6-2014
ಸ್ಥಳ – ಕನ್ನಡ ವಿಶ್ವವಿದ್ಯಾನಿಲಯ ಹಂಪಿ.

vidyavathi. S.
ವಿದ್ಯಾರ್ಥಿಯ ಸಹಿ
ರಿ.ನಂ.KRSMKS-00704
ಐದನೇ ಪತ್ರಿಕೆ, ಕನ್ನಡ ವಿಭಾಗ.



ಅರಿಕೆ

ನೊಂದಣಿ ಸಂಖ್ಯೆ- KRSMKS-00704 ಆದ ನಾನು ಕನ್ನಡ ಎಂ.ಫಿಲ್. ಸ್ನಾತಕೋತ್ತರ ಪದವಿಯಲ್ಲಿ ಐದನೇ ಪತ್ರಿಕೆಗೆ ಸಂಬಂಧಿಸಿದಂತೆ ಒಂದು ಸಂಶೋದನಾ ನಿಬಂಧವನ್ನು ಸಿದ್ಧಪಡಿಸಬೇಕಾಗಿ ಬಂದಾಗ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ "ಚಿಕ ವೀರರಾಜೇಂದ್ರ" ಕಾದಂಬರಿಯನ್ನ ಅಧ್ಯಯನ ಎಂಬ ನಿಬಂಧವನ್ನು ಸಿದ್ಧಪಡಿಸಿರುತ್ತೇನೆ. ಈ ನಿಬಂಧ ರಚನೆಗೆ ಕಾರಣ ಕರ್ತರು ಹಾಗೂ ಮಾರ್ಗದರ್ಶಕರೂ ಆದ ಡಾ . ಚಂದ್ರು ಕಾಳೇನಹಳ್ಳಿ, ಅಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ ಕೇಂದ್ರ ಹಂಪಿ. ಇವರಿಗೆ ವಿನಯ ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಸಂಶೋಧನಾ ನಿಬಂಧ ರಚನೆಯಲ್ಲಿ ಉತ್ತಮ ಸಲಹೆಗಳನ್ನು ನೀಡಿದ ಕನ್ನಡ ವಿಭಾಗದ ನನ್ನ ಎಲ್ಲಾ ಗುರುವೃಂದದವರಿಗೂ ಹಾಗೂ ನನ್ನ ಸ್ನೇಹಿತರ ಬಳಗಕ್ಕೂ ಅಭಾರಿಯಾಗಿದ್ದೇನೆ. ಜೊತೆಗೆ ಈ ಸಂಶೋಧನಾ ನಿಬಂಧನೆಗೆ ಎಲ್ಲಾ ರೀತಿಯಿಂದಲೂ ಸಹಾಯ ಮಾಡಿ ಪ್ರೋತ್ಸಾಹ ನೀಡಿದ ನನ್ನ ಪೋಷಕರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಹಾಗೇಯೇ ಈ ನಿಬಂಧವನ್ನು ಅಂದವಾಗಿ ಮುದ್ರಿಸಿಕೊಟ್ಟ ಪೂರ್ಣಿಮಾ ಪ್ರಿಂಟರ್ಸ್, ಪಾಂಡವಪುರ ಇವರಿಗೂ ಹಾಗೂ ನನ್ನ ಸಂಶೋಧನಾ ರಚನೆಗೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ವಂದನೆಗಳು.

ದಿನಾಂಕ –30-6-2014

ಸ್ಥಳ – ಕನ್ನಡ ವಿಶ್ವವಿದ್ಯಾನಿಲಯ ಹಂಪಿ.

Vidyavathi. S.

ವಿದ್ಯಾರ್ಥಿಯ ಸಹಿ

ರಿ.ನಂ.KRSMKS-00704

ಐದನೇ ಪತ್ರಿಕೆ, ಕನ್ನಡ ವಿಭಾಗ.



ಪರಿವಿಡಿ

ಅಧ್ಯಾಯ:-1

ಪೀಠಿಕೆ, ಉದ್ದೇಶ ಮತ್ತು ವ್ಯಾಪ್ತಿ.

ಮಾಸ್ತಿರವರ ಜೀವನ ಚರಿತ್ರೆ

ಪೀಠಿಕೆ: ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಸಾಹಿತ್ಯವು ಅತ್ಯಂತ ಮೌಲಿಕ ಮತ್ತು ಜನಪ್ರಿಯವಾದ ಪ್ರಕಾರವಾಗಿದೆ. ಕಾದಂಬರಿಗಳು ಕೇವಲ ಮನರಂಜನೆ ಎನಿಸಿದೆ, ಬದುಕಿನ ಮಹಾಕಾವ್ಯಗಳೆನಿಸಿಕೊಂಡಿವೆ. ಇವು ಜನಪದ ಸಾಹಿತ್ಯದಂತೆ ಸಾಮಾನ್ಯ ಜನರ ಅಭಿರುಚಿಗಳ ಆಶೋತ್ತರಗಳನ್ನು ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿವೆ. ಕಾದಂಬರಿಗಳು ಸಮಕಾಲೀನ ಜೀವನಕ್ಕೆ ತೀರ ಯೋಗ್ಯವಾದ ಅಭಿವ್ಯಕ್ತಿ ರೂಪವಾಗಿದ್ದು ಇವುಗಳನ್ನು ಕುರಿತು ಒಮ್ಮೆ ಮರಿಯನ್ ಕ್ರಾಫರ್ಡ್‌ರವರು ಸೊಗಸಾಗಿ ಹೇಳಿದಂತೆ "ಅದೊಂದು ಕರತಲ ರಂಗಭೂಮಿ ಅದು ಸಂವಿಧಾನ ಮತ್ತು ಪಾತ್ರಗಳನ್ನು ಮಾತ್ರವಲ್ಲದೇ, ಉಡುಗೆ, ತೊಡುಗೆ ಹಾಗೂ ರಂಗದೃಶ್ಯಗಳನ್ನು ನಾಟಕ ಪ್ರಯೋಗದ ಇತರ ಪರಿಕರಗಳನ್ನು ತನ್ನೊಳಗೆ ಇರಿಸಿಕೊಂಡಿದ."[1]

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ಹತ್ತೊಂಬತ್ತನೇ ಶತಮಾನದಲ್ಲಿ ರೂಪತಳೆಯಿತು. ಮೊಟ್ಟಮೊದಲು ಪ್ರಕಟವಾದ ಆಧುನಿಕ ಸ್ವರೂಪ ಲಕ್ಷಣಗಳ ಕಾದಂಬರಿಯು ಬಿ. ವೆಂಕಟಚಾರ್ಯರು ಬಂಗಾಳಿಯಿಂದ ಅನುವಾದಿಸಿದ ದುರ್ಗೇಶ ನಂದಿನಿಯಾಗಿದೆ. ನಂತರ ಗುಲ್ವಾಡಿ ವೆಂಕಟಚಾರ್ಯರು, ಕೆರೂರು ವಾಸುದೇವಚಾರ್ಯರು, ಎಮ್.ಎಸ್.ಪುಟ್ಟಣ ಮೊದಲಾದವರು ಕನ್ನಡದಲ್ಲಿ ಸ್ವತಂತ್ರ ಕಾದಂಬರಿಗಳನ್ನು ರಚಿಸಿದರು. ಕನ್ನಡ ಕಾದಂಬರಿಯು ಸ್ವತಂತ್ರ ಅಸ್ತಿತ್ವ ಪಡೆಯುವಷ್ಟು ಹಿರಿಮೆ-ಗರಿಮೆಗಳನ್ನು ಪಡೆದು ರಚನೆಗೊಂಡಿದ್ದು, ಎರಡನೆಯ ಘಟ್ಟದಲ್ಲಿ ಶಿವರಾಮ ಕಾರಂತರು, ಶ್ರೀರಂಗ, ರಂ.ಶ್ರೀ.ಮುಗಳಿ,ಗೋಕಾಕ, ಕುವೆಂಪು ಮೊದಲಾದವರು ಜೀವಂತ ಜಗತ್ತನ್ನು ಚಿತ್ರಿಸುವ ಘಟ್ಟಿಯಾದ ಅನುಭವವುಳ್ಳ ಕಾದಂಬರಿಗಳನ್ನು ರಚಿಸಿ ಕಾದಂಬರಿ ಯುಗವನ್ನೇ ನಿರ್ಮಿಸಿದರು. ನಂತರ ಪ್ರಗತಿ ಶೀಲಘಟ್ಟದಲ್ಲಿ ಅ.ನ.ಕೃ, ತ.ರಾ.ಸು, ಕಟ್ಟಿಮನಿ, ನಿರಂಜನ, ಚದುರಂಗ ಮೊದಲಾದ ದಿಗ್ಗಜರು ಸಾಮಾಜಿಕ ಕಾದಂಬರಿಗಳನ್ನು ರಚಿಸಿದರು. ಕಾದಂಬರಿಗಳಲ್ಲಿ ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಹಾಗೂ ಪತ್ತೇದಾರಿ ಮುಂತಾದ ಹಲವು ಬಗೆಯ ಕಾದಂಬರಿ ಪ್ರಕಾರಗಳು ಕಾಣಿಸಿಕೊಂಡವು.

ಶ್ರೀನಿವಾಸರು ಬರೆದ ಎರಡು ಕಾದಂಬರಿಗಳಾದ ಚನ್ನಬಸವನಾಯಕ ಮತ್ತು ಚಿಕವೀರ - ರಾಜೇಂದ್ರ ಕಾದಂಬರಿಗಳು ಒಂದು ದುರಂತ ಐತಿಹಾಸಿಕ ಕಾದಂಬರಿಗಳಾಗಿವೆ. ಚನ್ನಬಸವನಾಯಕ ಕಾದಂಬರಿ ಹೊರಬಿದ್ದುದು 1949ರಲ್ಲಿ,ಆಗ ಅವರಿಗೆ 59ವರ್ಷವಾಗಿತ್ತು. ಎರಡನೆಯ ಕಾದಂಬರಿ ಚಿಕವೀರ ರಾಜೇಂದ್ರ 1956ರಲ್ಲಿ ಪ್ರಕಟವಾಯಿತು. ಕನ್ನಡ ನವೋದಯದ ಕಾಲದಲ್ಲಿ

ಸಣ್ಣಕತೆಗಳನ್ನು ಬರೆದವರೆಲ್ಲ ಸಾಮಾನ್ಯವಾಗಿ ಕಾದಂಬರಿ ಮಾಧ್ಯಮದತ್ತ ಬೇಗನೆ ತಿರುಗಿದರು. "ಕನ್ನಡ ಸಣ್ಣ ಕತೆಗಳ ಜನಕ" ಎಂದು ಕರೆಯುತ್ತಾರೆ ಇವರು ಐತಿಹಾಸಿಕ ಕಾದಂಬರಿಗಳಲ್ಲದೆ ಸಾಮಾಜಿಕ ಕಾದಂಬರಿಗಳನ್ನು ಬರೆದಿದ್ದಾರೆ. ಉದಾ:ಸುಬ್ಬಮ್ಮ, ಶೇಷಮ್ಮ,ಮತ್ತು ಮಾತುಗಾರ ರಾಮಣ್ಣ ಎಂಬ ಕಥನ ಕೃತಿಗಳನ್ನು ರಚಿಸಿದ್ದಾರೆ. ಇವರು 7-6-1986ರಂದು ಮರಣ ಹೊಂದಿದರು.

ಕನ್ನಡದಲ್ಲಿ ಕಾದಂಬರಿ ಹುಟ್ಟುವುದಕ್ಕಿಂತ ಮೊದಲು ಕನ್ನಡ ಗದ್ಯ ಪ್ರಕಾರವೊಂದು ಬೆಳೆದು ಬರಬೇಕಾಯಿತು. ತಿರುಮಲಾರ್ಯನ ಚಿಕ್ಕದೇವರಾಜಬಿನ್ನಪ ವಸ್ತು ಹಾಗೂ ಭಾಷೆ ಇವೆರಡು ದೃಷ್ಟಿಯಿಂದಲೂ ಪ್ರಾಚೀನ ಸಾಹಿತ್ಯ ರೂಪವಾಗಿದೆ. ಮುದ್ದಣನ 'ರಾಮಾಶ್ವಮೇಧ'ದ ನವೀನತೆ ಎಲ್ಲ ಶ್ರೇಷ್ಠ ಸಾಹಿತ್ಯಕ್ಕಿರುವ ಒಂದು ಲಕ್ಷಣವಾಗಿದೆ. ಅದರಲ್ಲಿ ಹೊಸ ಕಾದಂಬರಿಯ ರೂಪು-ರೇಷೆಗಳು ದೊರೆಯಲಾರವು ಮುದ್ದಣ 'ಗೋದಾವರಿ' ಎಂಬ ಕಾದಂಬರಿಯನ್ನು ಅರ್ಧ ಮುಗಿಸಿದ್ದಾಗಿ ತಿಳಿದು ಬಂದಿದೆ. ಕೆಂಪುನಾರಾಯಣನ 'ಮುದ್ರಾಮಂಜೂಷ'ದಲ್ಲಿಯ ಕಥನ ರೀತಿ ಕಾದಂಬರಿಗೆ ಹೆಚ್ಚು ಸಮೀಪವಾಗಿದೆಯೆನ್ನಬಹುದು. ಇವರ ಬಗ್ಗೆ ಸಮಗ್ರ ಅಧ್ಯಯನ ಈವರೆಗೆ ನಡೆದಂತಿಲ್ಲ.ಎಂ.ಫಿಲ್.ಅಧ್ಯಯನದ ಅಂಗವಾಗಿ ರಚಿಸಬೇಕಾದ ಸಂಶೋಧನಾ ನಿಬಂಧಕ್ಕೆ ಒಂದಾದ ಚಿಕವೀರ ರಾಜೇಂದ್ರವನ್ನು ತೆಗೆದುಕೊಂಡಿದ್ದು ಇದನ್ನು ಸಮಗ್ರವಾಗಿ ಪರಿಶೀಲಿಸುವ ಪ್ರಾಮಾಣಿಕ ಪ್ರಯತ್ನ ಮಾಡುವುದು ನನ್ನ ಈ ಅಧ್ಯಯನದ ಉದ್ದೇಶವಾಗಿದೆ.

ಈ ಹಿನ್ನಲೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಕಾದಂಬರಿ ಚಿಕವೀರ ರಾಜೇಂದ್ರ ಎಂಬ ಎಂ.ಫಿಲ್. ಸಂಶೋಧನ ಪ್ರಬಂಧವನ್ನು ಅನುಕೂಲಕ್ಕಾಗಿ ಈ ಕೆಳಕಂಡ ಅಧ್ಯಾಯಗಳಾಗಿ ವಿಭಾಗ ಮಾಡಿಕೊಳ್ಳಲಾಗಿದೆ.

ಉದ್ದೇಶ :- ದೈನಂದಿನ ಜೀವನದಲ್ಲಿ ಮಾನವ ಕೈಗೊಳ್ಳುವ ಪ್ರತಿಯೊಂದು ಕೆಲಸದ ಹಿಂದೆ ಒಂದು ಗುರಿ ಉದ್ದೇಶ ಮತ್ತು ಧ್ಯೇಯ ಇದ್ದೇ ಇರುತ್ತದೆ, ಇರಲೇಬೇಕು. ಏಕೆಂದರೆ 'ಗುರಿ ಇಲ್ಲದ ಜೀವನ ಅಂಬಿಗನಿಲ್ಲದ ಹರಿಗೋಲಿನಂತೆ ನಿರರ್ಥಕ' ಉದ್ದೇಶವಿಲ್ಲದೆ ಮಾಡುವ ಕೆಲಸ ಯಶಸ್ಸು ಗಳಿಸುತ್ತದೆಂದು ಹೇಳಲಾಗುವುದಿಲ್ಲ. ಗಳಿಸಿದರೂ ಅದು ಮೌಲಿಕವಾದ ಯಶಸ್ಸಾಗುವುದಿಲ್ಲ. ಸದುದ್ದೇಶ ಇಟ್ಟುಕೊಂಡು ವಿಸ್ತರಿಸಿ ನಡೆದರೆ ಆಯ್ದುಕೊಂಡ ವಿಚಾರದಲ್ಲಿ ಆಸಕ್ತಿ ಹೆಚ್ಚಾಗಿ ಅಂದಿನ ಎಲ್ಲೆಯೂ ವಿಸ್ತರಿಸಿ, ನಮ್ಮ ಕಾರ್ಯ ಪ್ರಮಾಣಾತ್ಮಕ ಮತ್ತು ಪರಿಣಾಮಾತ್ಮಕವೂ ಆಗುವಂತೆ ಮಾಡುತ್ತದೆ. ಆದುದ್ದರಿಂದ ನಾವು ಏನೇ ಕೈಗೊಂಡರು ಒಂದು ಉದ್ದೇಶವಿರಲೇಬೇಕು.

ಮಾಸ್ತಿರವರ 'ಚಿಕವೀರರಾಜೇಂದ್ರ' ಕಾದಂಬರಿಯಲ್ಲಿ ಚಿಕವೀರರಾಜೇಂದ್ರನ ಸ್ಥಾನ, ಆಡಳಿತ, ಗುಣ ದೋಷಗಳು, ಬ್ರಿಟಿಷರು ಅದನ್ನು ಬಳಸಿಕೊಂಡ ರೀತಿ ಕೊಡಗು ಪ್ರಾಂತ್ಯ ಮೈಸೂರು ಪ್ರಾಂತ್ಯದ ನಡುವಿನ ಸಂಬಂಧ ಅಲ್ಲಿಯ ಸನ್ನಿವೇಶ ಪ್ರಮುಖ ಮತ್ತು ಸಾಮಾನ್ಯ ವ್ಯಕ್ತಿಗಳ ಪಾತ್ರ ನವೋದಯದಲ್ಲಿ ಈ ಕಾದಂಬರಿ ಬೆಳೆದ ರೀತಿ, ಮೌಲ್ಯ, ನಿರ್ಣಯ, ಇದರ ಒಟ್ಟಾರೆ ಅವಲೋಕನ ಮುಂತಾದ ವಿಷಯವನ್ನು ತಿಳಿಸಿಕೊಡಲು ಪ್ರಯತ್ನಿಸಿದ್ದೇನೆ. ಚಿಕವೀರರಾಜೇಂದ್ರ ಬಗೆಗೂ ಸಾಕಷ್ಟು ಅಧ್ಯಯನಗಳೂ, ವಿಮರ್ಶೆಗಳೂ ಆಗಿಬಿಟ್ಟಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ತಕ್ಕ ಮಟ್ಟಿಗೆ ಅವುಗಳ ಸಂಕ್ಷಿಪ್ತ ರೂಪ ಕೊಡಲಾಗಿದೆ. ಕಾದಂಬರಿಯಲ್ಲಿ ಬರುವ ವಿಷಯವನ್ನು ಸಾಕಷ್ಟು ವಿವರವಾದ ಚರ್ಚೆಯನ್ನು ಮಾಡಲಾಗಿದೆ. ಇದುವರೆಗಿನ ಅಧ್ಯಯನಗಳೂ ವಿಮರ್ಶೆಗಳೂ ತಲುಪಿರುವ ನೆಲೆಗಳನ್ನು ಸಾಧ್ಯವಾದ ಮಟ್ಟಿಗೆ ಗ್ರಹಿಸಿಕೊಂಡು ಅವುಗಳ ಮುಂದುವರಿಕೆ ಇದಾಗುವಂತೆ ನೋಡಿಕೊಳ್ಳಲಾಗಿದೆ.

ಇಂತಹ ಅನೇಕ ಅಂಶಗಳಿಂದ ಮಾಸ್ತಿರವರ ಚಿಕವೀರರಾಜೇಂದ್ರ ಸದಾ ಅಧ್ಯಯನ ಯೋಗ್ಯವಾಗಿ ಉಳಿದಿದ್ದಾರೆ. ಸಾಹಿತ್ಯದಲ್ಲಿ ಕ್ರಮಬದ್ಧ ಅಧ್ಯಯನ ಪ್ರಾರಂಭವಾದಂದಿನಿಂದ ಇಂದಿನವರೆಗೆ ನೂರಾರು ಲೇಖಕರು ಅವರ ಕಾವ್ಯವನ್ನು ನೂರಾರು ದೃಷ್ಟಿಕೋನದಿಂದ ಅಧ್ಯಯನ ಮಾಡಿದ್ದಾರೆ, ವಿಮರ್ಶಿಸಿದ್ದಾರೆ. ಚಿಕವೀರರಾಜನ ಪಾತ್ರದ ಬಗೆಗೆ ಹೇಳಬೇಕಾದುದು ಇನ್ನೇನು ಉಳಿದಿಲ್ಲ ಎಂಬಷ್ಟರ ಮಟ್ಟಿಗೆ ಹಲವು ಗ್ರಂಥಗಳ ಲೇಖನಗಳು ಪ್ರಕಟವಾಗಿವೆ. ಇಷ್ಟಾಗಿಯೂ ಈ ಪಾತ್ರದ ಬಗೆಗೆ ಚಿಕವೀರರಾಜೇಂದ್ರ ಕಾದಂಬರಿಯ ಬಗೆ ಪುನ: ಅವಕಾಶವಿರುತ್ತದೆ. ಅಷ್ಟೇ ಅಲ್ಲ ಒಂದು ಸವಾಲಾಗಿ ನಿಲ್ಲುತ್ತದೆ. ಬೇರೇನೂ ಅಲ್ಲದಿದ್ದರೂ ಇವರ ಭಾಷೆ ಹೊಸ – ಹೊಸ ಪರಿಭಾವನೆಗಳಿಗೆ ತನ್ನನ್ನು ಒಡ್ಡಿಕೊಳ್ಳುತ್ತದೆ ಮತ್ತು ಕೊನೆಗೂ ಅಭೇಧ್ಯ ಕೋಟೆಯಾಗಿ ಉಳಿಯುತ್ತದೆ. ಇವೆಲ್ಲದರ ಸಾಧ್ಯತೆಯ ಜೊತೆಗೆ 'ಚಿಕವೀರರಾಜೇಂದ್ರ' ಕಾದಂಬರಿಯನ್ನು ಒಂದು ವಿಮರ್ಶೆಯ ಪ್ರಬಂಧವಾಗಿ ಅಧ್ಯಯನ ಮಾಡಲು ಕೈಗೊಳ್ಳಲಾಗಿದೆ.

ವ್ಯಾಪ್ತಿ :- ಯಾವುದೇ ವಿಷಯ ವಸ್ತುವನ್ನೊಳಗೊಂಡ ಕೃತಿಯಾಗಲಿ ಅದರದೇ ಆದ ಚೌಕಟ್ಟನ್ನು ಹೊಂದಿರುತ್ತದೆ. ಕಲಾಕೃತಿಯ ಅಚ್ಚುಕಟ್ಟುತನ ಈ ಚೌಕಟ್ಟನ್ನು ಹಾಕಿಕೊಳ್ಳುವುದರ ಮೂಲಕ ಸಾಧ್ಯವಾಗುತ್ತದೆ. ಮೂಲತ: ಈ ಕಾದಂಬರಿ ಐತಿಹಾಸಿಕ ವಸ್ತು ಆಧಾರಿತ ಕೃತಿಯಾಗಿದೆ. ಐತಿಹಾಸಿಕ ಎಂದರೆ ತಕ್ಷಣ ರಾಜನ ಕಲ್ಪನೆ ಬರುತ್ತದೆ. ಇವರ ಜೀವನ ಸಂಗತಿಗಳೆಲ್ಲ ಒಂದು ನಾಡಿನ ಚರಿತ್ರೆಯ ಗರ್ಭದಲ್ಲಿರುತ್ತದೆ. ಇಂತಹ ಚರಿತ್ರೆಯಲ್ಲಿ 'ಚಿಕವೀರರಾಜನ' ಜೀವನವು ಒಂದು ಪ್ರಸ್ತುತ ಸಂಶೋಧನೆಯ ಪ್ರಬಂಧವಾಗಿ ಅಧ್ಯಯನದಲ್ಲಿ ರಾಜ ರಾಣಿಯ ಮತ್ತು ಅವರ ಪರಿವಾರದವರ ಇತಿಹಾಸ ಚರಿತ್ರೆಯ ವೈಭವೀಕರಣಕ್ಕೆ ಸೀಮಿತವಾಗಿರದೆ ರಾಜ್ಯದ ಉಳಿವಿಗೆ ಹೋರಾಡಿ ಮಾಸ್ತಿಯವರ ಕಾದಂಬರಿಯಲ್ಲಿ ಪ್ರಮುಖವಾಗಿ 'ಚಿಕವೀರರಾಜೇಂದ್ರನ' ಆಡಳಿತ, ಸ್ಥಾನದ ಬಗೆಗೆ ಚಿತ್ರಣವನ್ನು ಕೊಡಲಾಗಿದೆ.

ಇತಿಹಾಸದ ವಸ್ತುವಾಗಲಿ, ರಾಜಕೀಯ ವಸ್ತುವಾಗಲಿ, ಸಾಮಾಜಿಕ ವಸ್ತುವಾಗಲಿ ಕವಿ ಕಲಾವಿದನ ಬರವಣಿಗೆಗೆ ಒಳಪಟ್ಟಾಗ ಸಹಜವಾಗಿಯೇ ಕಲಾಲಕ್ಷಣದ ಚೌಕಟ್ಟಿಗೆ ಒಳಗಾಗುತ್ತದೆ. ಕಲಾತತ್ವ ಪಾಲಿಸದೆ ಯಾವ ಕಥೆ, ಕಾವ್ಯವೂ ಇರಲಾರದು ಹಾಗೇಯೇ ಪ್ರಸ್ತುತ ನವೋದಯದ ಮಹಾಕವಿ ತಮ್ಮ ಕಾದಂಬರಿಯನ್ನು ಹದವರಿತು ಬರೆಯುವಲ್ಲಿ ವಸ್ತುನಿಷ್ಟ ತತ್ವದೊಂದಿಗೆ ವ್ಯಕ್ತಿನಿಷ್ಟ ತತ್ವಗಳಿಗೂ ಇಲ್ಲಿ ಸ್ಥಾನ ಕೊಟ್ಟಿದ್ದಾರೆ.

ಸ್ವರೂಪ :- ಜೀವನ ಮತ್ತು ಸಾಹಿತ್ಯದಲ್ಲಿ ಅವರು ಗಳಿಸಿದ ಪ್ರೌಢತೆ ಮತ್ತು ಅನುಭವಗಳು ಅವರನ್ನು ಅವರ ಹಿಂದಿನ ಕೃತಿಗಳಲ್ಲಿಯದಕ್ಕಿಂತ ಗಾಢವಾದ ಸ್ವರೂಪದ ಬೌದ್ಧಿಕ ಮತ್ತು ಕಲಾತ್ಮಕ ಸಾಹಸದಲ್ಲಿ ತೊಡಗುವಂತೆ ಮೂಡಿದವು. ಆಗಲೇ ಅವರು ಐತಿಹಾಸಿಕ ಕಾದಂಬರಿಯತ್ತ ಲಕ್ಷ್ಯಹರಿಸಿದರು. ತಮಗೆ ಗೊತ್ತಿಲ್ಲದಂಥ ಒಂದು ಐತಿಹಾಸಿಕ ಸಂದರ್ಭದಲ್ಲಿ ಮಾನವೀಯ ಸಂಬಂಧಗಳನ್ನು ಅನ್ವೇಷಿಸುವಲ್ಲಿ, ಮಾನವ ಮೌಲ್ಯಗಳನ್ನು ಶೋಧಿಸುವಲ್ಲಿ, ವಿಧಿಯ ವೈವಿಧ್ಯ ಪರಿಗಳನ್ನು ಗುರುತಿಸುವಲ್ಲಿ, ಸಾಮಾಜಿಕ ಮತ್ತು ಐತಿಹಾಸಿಕ ಕಾದಂಬರಿ ಅವಕಾಶ ಕೊಡುವಷ್ಟು ಬೇರೆ ಪ್ರಕಾರಕ್ಕೆ ಕೊಡುವುದಿಲ್ಲ. ಎಂಬ ಮಾತು ಮಾಸ್ತಿಯವರಿಗೆ ಮನದಟ್ಟಾಗಿರಬೆಕು. ಅಂತೇ ಅವರು ಒಂದಲ್ಲ ಎರಡು ದೊಡ್ಡ ಐತಿಹಾಸಿಕ ಕಾದಂಬರಿಗಳನ್ನು ಬರೆದರು. ಒಂದು (ಸುಮಾರು – 400 ಪುಟಗಳ) 'ಚನ್ನಬಸವನಾಯಕ' ಇನ್ನೊಂದು (ಸುಮಾರು 500 ಪುಟಗಳ) 'ಚಿಕವೀರ ರಾಜೇಂದ್ರ' ಕೃತಿ ದುರಂತದ ಕಥೆಯನ್ನು ಬರೆದರು. ಅದು ಒಮ್ಮೆಗೇ ಒಂದರೊಳಗೊಂದು ತಳಕಗೊಂಡು ಎರಡು ಮಾನವೀ ವಿದ್ಯಾಮಾನಗಳನ್ನು ಪರಿಶೋಧಿಸುತ್ತದೆ. ಒಂದು ವೈಯುಕ್ತಿಕ, ಇನ್ನೊಂದು ರಾಜಕೀಯ,ರಾಜಕೀಯ ಮಟ್ಟದಲ್ಲಿ ಹೈದರಾಲಿಯ ರಾಜ್ಯ ವಿಸ್ತರಣೆ ಬಿದನೂರಿನ ಪತನವನ್ನು ಅನಿವಾರ್ಯಗೊಳಿಸಿತು. ಮೂಲಭೂತ ಮೌಲ್ಯಗಳನ್ನು ಪ್ರತಿಪಾದಿಸುವುದೆ, ಈ ಐತಿಹಾಸಿಕ ಕಾದಂಬರಿಯ ಪರಿಶೋಧನೆಯ ಮುಖ್ಯ ಉದ್ದೇಶವೆಂದು ಹೇಳಬಹುದು.

ಚಿಕವೀರ ರಾಜೇಂದ್ರ ಹಿಂದಿನ ಕಾದಂಬರಿಗಿಂತ ಬಹಳ ಮುಂದೆ ಹೋಗಿದೆಯೆಂದು ಹೇಳಬಹುದು. "ಅದು ಕೊಡಗು ರಾಜ್ಯದ ಅವನತಿ ಮತ್ತು ಪತನವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿ ಭಾರತವನ್ನು ಆಕ್ರಮಿಸಿದ ರೀತಿಯನ್ನು ಅತ್ಯಂತ ಪ್ರಭಾವಿಯಾಗಿ ಚಿತ್ರಿಸುವ ಕಾದಂಬರಿಯಾಗಿದೆ. ಐತಿಹಾಸಿಕ ಕಾದಂಬರಿಗೆ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಇತಿಹಾಸ ಮತ್ತು ಐತಿಹಾಸಿಕ ಕಾದಂಬರಿಗಳಿಗೆ ಇರುವ ವ್ಯತ್ಯಾಸಗಳೆಂದರೆ ಆಧಾರಗಳನ್ನು ಅನುಸರಿಸಿ ಕ್ರಮಬದ್ದವಾಗಿ ಮಾನವಜೀವನ ಬೆಳವಣಿಗೆಯನ್ನು ಇತಿಹಾಸ ವಿವರಿಸಿದೆ. ಐತಿಹಾಸಿಕ ಕಾದಂಬರಿಕಾರನ್ನು ಐತಿಹಾಸದ ವಸ್ತುವನ್ನು ಆಧಾರವಾಗಿಟ್ಟುಕೊಂಡು,ತನಗೆ ಬೇಕಾದ ಪಾತ್ರಗಳನ್ನು ಪ್ರಸಂಗಗಳನ್ನು ಸೃಷ್ಟಿಸಿಕೊಂಡು ಕಲಾತ್ಮಕವಾದ ಕಥೆಯೊಂದನ್ನು ಹೆಣೆದಿದ್ದಾರೆ."[2] (ಪುಟ–600–601) ಇಲ್ಲಿ ಬಂದಿರುವ ಮೂಲ ಐತಿಹಾಸಿಕ ವಸ್ತು ಸಂಗತಿಗಳ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅವೆಲ್ಲ ಕೊಡಗಿನ ಇತ್ತೀಚಿನ ಇತಿಹಾಸದ ಭಾಗವಾಗಿದ್ದು, ಜನಮನದಲ್ಲಿ ಬೇರೂರಿವೆ ಮತ್ತು 'ಇಂಪಿರಿಯಲ್ ಗೆಜೆಟೀರ್ ಆಫ್ ಇಂಡಿಯಾ' ಸಂಪುಟದಲ್ಲಿ ದಾಖಲಾಗಿವೆ. ಇಲ್ಲಿ ಪ್ರಮುಖವಾದುದೆಂದರೆ ಐತಿಹಾಸಿಕ ಪ್ರಕ್ರಿಯೆಯ ದರ್ಶನ ನೀಡಲು ಹೇಗೆ ಐತಿಹಾಸಿಕ ಸಾಮಗ್ರಿಯನ್ನು ಎರಕಹಾಲಾಗಿದೆ ಎಂಬುದು.

ಸ್ವಾತಂತ್ರ್ಯಪೂರ್ಣ ಕಾಲದಲ್ಲಿ ಬ್ರಿಟಿಷರ ಮತ್ತು ಸಂಸ್ಥಾನದ ಆಡಳಿತದ ಬಗ್ಗೆ ಮಾಸ್ತಿಯವರಿಗೆ ಸ್ವಂತ ಅನುಭವ ಇದ್ದದರಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿ ಉದಿಸುದ ಮತ್ತು ವಿಸ್ತರಿಸಿದ ಬಗ್ಗೆ ಅವರಿಗೆ ಪೂರ್ಣ ಕಲ್ಪನೆ ಇತ್ತು. ಐತಿಹಾಸಿಕ ಕಾದಂಬರಿ ನೀಡುವ ಚಿತ್ತಸ್ಯಕ್ಕೆ ದೂರವಾದುದೆಂದೇ ಭಾವಿಸಬೇಕಾಗಲ್ಲಿ. ಕೆಲವು ವೇಳೆ ಚಾರಿತ್ರಿಕ ಕಾದಂಬರಿಯನ್ನು ರಚಿಸುವಾಗ ಇತಿಹಾಸದಲ್ಲಿನ ಅನೇಕ ಕೊರತೆಗಳನ್ನು ಅಸ್ಪಷ್ಟ ಸಂಗತಿಗಳನ್ನು ತನ್ನ ಕಲ್ಪನೆಯಾದ ಸರಿಪಡಿಸಿಕೊಂಡು ಲೇಖಕ ಹೆಚ್ಚು ಸಮಗ್ರವೂ ಸುಸಂದ್ದವೂ ಆದ ಚಿತ್ರವನ್ನು ನೀಡಲು ಸಾಧ್ಯವಿದೆ. ಆದರೆ ಐತಿಹಾಸಿಕ ಕಾದಂದರಿಯ ರಚನೆ ಬಹು ಕಷ್ಟಕರವಾದುದು. ಸಾಧಾರಣವಾಗಿ ಉತ್ತಮ ನಾಟಕ–ಕಥೆ ಕಾದಂಬರಿಗಳ ಬೆಳವಣಿಗೆ ಹೀಗೆ ಇರುತ್ತದೆ. ಶುರುವಿನಲ್ಲಿ ಘರ್ಷಣೆಯ ಪ್ರಾರಭ ಅನಂತರ ಕಾರ್ಯ ಕಾರಣ ಸಂಬಂಧದಿಂದ ಘರ್ಷಣೆಯ ತೀವ್ರತೆ ಹೆಚ್ಚಾಗುತ್ತ ಶಿಖರವನ್ನು ಮುಟ್ಟುತ್ತದೆ. ಅನಂತರ ಮತ್ತೆ ಅದರ ತೀವ್ರತೆಕಮ್ಮಿಯಾಗುತ್ತಾ ಕೊನೆಗೆ ಒಂದು ನಿರ್ಣಾಯಕ ಸ್ಥಿತಿಗೆ ಬಂದು ನಿಲ್ಲುತ್ತದೆ.

ರಾಜ ತನ್ನ ಸೋದರಿಯನ್ನು ಸೆರೆಮನೆಯಲ್ಲಿಟ್ಟು ಅಪಮಾನಿಸುತ್ತಿರುತ್ತಾನೆ. ಅಪ್ಪಾಜಿ ತನ್ನ ಮಗನಿಗೆ ರಾಜ್ಯವನ್ನು ದೊರಕಿಸಲು ಮಡಿಕೇರಿಗೆ ಬರುತ್ತಾನೆ. ತನ್ನ ಹೆಂಡತಿಯನ್ನು ಹುಡುಕಿಕೊಂಡು ಬಂದ ಪಾಣಿ ಸೂರ್ಯನಾರಾಯಣ ಮಂತ್ರಿ ಲಕ್ಷ್ಮೀನಾರಾಯಣಯ್ಯನ ಮರೆ ಹೋಗುತ್ತಾನೆ; ಕೊಡಗರ ಪ್ರಮುಖ ಉತ್ತಯ್ಯತಕ್ಕನ ಪಡಿತಪ್ಪಿ ಅವನು ಅದನ್ನು ಮರಳಿ ಪಡೆಯಲು ಮಂತ್ರಿ ಬೋಪಣ್ಣನ ಮನೆಗೆ ಬರುತ್ತಾನೆ ಮತ್ತು ಮೂವತ್ತು ವರ್ಷಗಳ ಅನಂತರ ಭಗವತಿ ಮತ್ತೆ ಕೊಡಗಿಗೆ ತನ್ನ ಮಗನನ್ನು ರಾಜನನ್ನಾಗಿ ಮಾಡಲು ಬರುತ್ತಾಳೆ. ಈ

ಸಂದರ್ಭ ಎಷ್ಟು ಉತ್ಕಟವಾಗಿದೆಯೆಂದರೆ ರಾಜನ ವಿರುದ್ಧ ಘರ್ಷಣೆ ಅರಮನೆಯೊಳಗಡೆ, ಗುರುಮನೆ, ಪೇಟೆ ಮತ್ತು ಒಳನಾಡಿನಲ್ಲಿ ಎಷ್ಟು ತೀವ್ರವಾಗಿದೆಯೆಂದರೆ ದೈನಂದಿನ ಊಟದಂಥ ವೈಯಕ್ತಿಕ ಕ್ರಿಯೆ ಕೂಡ ಸಲೀಸಾಗಿ ಸಾಗದಂಥ ಪರಿಸ್ಥಿತಿ ಮೂಡಿರುತ್ತದೆ. ಈ ವಿಧವಾಗಿ ಆರಂಭವಾದ ಕೃತಿ ಮುಂದುವರಿದಂತೆಲ್ಲಾ ಅವರ ಘರ್ಷಣೆ ಓದುಗರ ನಿರೀಕ್ಷೆಯಂತೆ ಹೆಚ್ಚಾಗುತ್ತಾ ಶಿಖರವನ್ನು ಮುಟ್ಟುವ ಬದಲು ಕಮ್ಮಿಯಾಗುತ್ತಾ ಬಂದು ಕಾದಂಬರಿಯ ಮಧ್ಯ ಭಾಗದಲ್ಲಿ ಇಲ್ಲವೇ ಇಲ್ಲದಂತಾಗುತ್ತದೆ. ದೇವಮ್ಮಾಜಿ ಸೆರೆಯಿಂದ ಬಿಡುಗಡೆಯಾಗಿ ತನ್ನ ಅರಮನೆಗೆ ಹೋಗುತ್ತಾಳೆ. ಪಾಣಿ ಸೂರ್ಯನಾರಾಯಣನ ಹೆಂಡತಿ ಗಂಡನನ್ನು ಮತ್ತೆ ಸೇರುತ್ತಾಳೆ. ಉತ್ತಯತಕ್ಕನ ಪಡಿ ಮತ್ತೆ ಶುರುವಾಗುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ರಾಜನ ಅಥಿತಿಗಳಾಗಿ ಮಡಕೇರಿಗೆ ಬಂದ ಆಂಗ್ಲರಿಗೂ ರಾಜನ ಮೇಲೆ ಗೌರವ ಉಂಟಾಗಿ ಈಗ ಸದ್ಯಕ್ಕೆ ರಾಜನನ್ನು ಗಾದಿಯಿಂದಿಳಿಸಲು ಕಾರಣವೇನೂ ಇಲ್ಲ 'ಕಾರಣ ತಾನಾಗಿ ಹುಟ್ಟಿ ನಾವು ಹೋಗಬೇಕು' ಎಂದು ಅರಿವಾಗುತ್ತದೆ. ಕಾದಂಬರಿಯ ಸ್ವರೂಪದಲ್ಲಿ ಹೀಗೆ ಹೇಳಬಹುದು.

- ಈ ಕೃತಿ ಬೇರೆ ಕೃತಿಗಳಿಂದ ಭಿನ್ನವಾದ ರೀತಿಯಲ್ಲಿ ಉತ್ಕಟತೆಯಲ್ಲಿ ಪ್ರಾರಂಭವಾಗಿ ಸಮತೋಲನ ಸ್ಥಿತಿಗೆ ಬಂದು ಮತ್ತೆ ಉತ್ಕಟತೆಯತ್ತ ಬೆಳೆಯುತ್ತದೆ.
- ಕೃತಿಯ ಎರಡು ಭಾಗಗಳು ಪರಸ್ಪರ ವಿರುದ್ಧ ಗತಿಯಲ್ಲಿ ನಡೆಯುತ್ತದೆ.
- ಇದರಿಂದಾಗಿ ಎರಡೂ ಭಾಗಗಳಿಗೂ ಮಧ್ಯ ಬರುವ ಘಟನೆಗಳಿಗೆ ಬ್ರಿಟಿಷರಿಗೆ ಸಿಕ್ಕುವ ಆತಿಥ್ಯ, ಬೇಟೆ, ಕೈಲು ಹಬ್ಬ, ನಾಟಕಗಳು ಹೆಚ್ಚು ಒತ್ತು ಬೀಳುತ್ತದೆ.
- ಎಲ್ಲದಕ್ಕಿಂತ ಮುಖ್ಯವಾಗಿ ಎರಡನೆಯ ಭಾಗದಲ್ಲಿ ಶುರುವಾಗುವ 'ಅಣಕು ನಾಟಕ' ಕೃತಿಕಾರರ ಜೀವನ ದರ್ಶನದ ರೂಪಕವಾಗುತ್ತದೆ.

ವೀರರಾಜೇಂದ್ರನ ದುಷ್ಕೃತ್ಯಗಳು ಮತ್ತು ಅವು ತನ್ನವರ ,ಸುತ್ತಲಿನವರ ಹಾಗೂ ಇಡೀ ರಾಜ್ಯದ ಮೇಲೆ ಉಂಟುಮಾಡುವ ಪರಿಣಾಮಗಳೇ ಇಲ್ಲಿಯ ಕಥೆಯ ಸಾಮಾಗ್ರಿ, ನಡೆದ ಘಟನೆಗಳು ಬದುಕಿನ ಯಾವ ಮೈಯ ಮೇಲೆ ಎಂಥ ಬೆಳಕನ್ನು ಬೀರುತ್ತವೆ. ಎಂಥ ಯೋಚನೆಗಳನ್ನು ನಮ್ಮಲ್ಲಿ ಮೂಡಿಸುತ್ತವೆ ಎನ್ನುವುದನ್ನು ವಿಶ್ಲೇಷಿಸಿ ನೋಡಬೇಕಾದಾಗ ನಡೆದುದೆಲ್ಲರ ಸ್ಫೂರವಾದ ಪರಿಚಯವಾದರು ಅಗತ್ಯವೆಂಬ ದೃಷ್ಟಿಯಿಂದ ಕಥಾಭಾಗವನ್ನು ಸ್ವಲ್ಪದರಲ್ಲಿ ಸಂಗ್ರಹಿಸಬಹುದು. ವೀರರಾಜೇಂದ್ರ ಹದಿನಾಲ್ಕು ವರ್ಷ ರಾಜ್ಯವಾಳಿದ ಹದಿನಾಲ್ಕನೆಯ ವರ್ಷ ಕೊಡಗು ಆಂಗ್ಲರ ಕೈವಶವಾಯಿತು. ಕೊನೆಯ ವರ್ಷದ ಆಳ್ವಿಕೆಯನ್ನು ಕಾದಂಬರಿ ಚಿತ್ರಿಸುತ್ತದೆ. ಕೊನೆಯ ವರ್ಷದಲ್ಲಿಯ ಘಟನೆಗಳಿಗೆ ಪೋಷಕವಾಗಿ ಆತನ ಆಳ್ವಿಕೆಯಲ್ಲಿ ಮೊದಲು ನಡೆದಿದ್ದ ಘಟನೆಗಳನ್ನು

'ಕಥಾಮುಖ' ಮತ್ತು 'ಪೂರ್ವಕಥೆ' ಎಂಬ ಎರಡು ಭಾಗಗಳಲ್ಲಿ ವಿವರಿಸಲಾಗಿದ್ದು 'ಕಥಾಗರ್ಭ' ಮತ್ತು 'ಕಥಾ ಪುರಾಣ' ಭಾಗಗಳಲ್ಲಿ ಹಿಂದಿನ ಘಟನೆಗಳೆಲ್ಲವೂ ಪರಿಣಾಮ ಮುಖವಾಗಿ ಮುಕ್ತಾಯವನ್ನು ತಲುಪುತ್ತವೆ.

ಚಿಕ ವೀರರಾಜೇಂದ್ರ ಕಾದಂಬರಿಯ ಪ್ರಾಮುಖ್ಯತೆ ಎಂದರೆ ಚಿಕ ವೀರರಾಜೇಂದ್ರ ಹಾಲೇರಿ ವಂಶದ ಕಡೆಯ ದೊರೆ. ಈ ರಾಜವಂಶ ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ಸ್ಥಾಪಿತವಾಯಿತು. ಇದರ ಸ್ಥಾಪಕ ವೀರರಾಜ ಇಕ್ಕೇರಿ ನಾಯಕರ ವಂಶಕ್ಕೆ ಸೇರಿದವನು ಎಂದು ನಂಬಲಾಗಿದೆ. ವೀರರಾಜ ಪ್ರಾರಂಭದಲ್ಲಿ ಜಂಗಮನಾಗಿದ್ದನು. ಕೊಡಗಿನ ಜನರು ಅವನಿಗೆ ಧೂಳಿಭತ್ತವನ್ನು ಅವನ ರಕ್ಷಣೆಗಾಗಿ ಕಾವಲು ಪಡೆಯನ್ನು ಕೊಡುತ್ತಾ ಬಂದಿದ್ದರು. ಕಡೆಗೆ ವೀರರಾಜ ತಾನು ರಾಜನೆಂದು ಘೋಷಿಸಿಕೊಂಡ ಈ ವೇಳೆಗೆ ಕೊಡಗಿನಲ್ಲಿದ್ದ ನಾಯಕರು ದುರ್ಬಲರಾಗಿದ್ದುದರಿಂದ ವೀರರಾಜ ಸಿಂಹಾಸನವೇರುವುದು ಸುಲಭವಾಯಿತು. ವೀರರಾಜನ ನಂತರ ತನ್ನ ಮಗಳನ್ನು ಗಾದಿಗೇರಿಸಿದರು. ಆದರೆ ಅವಳನ್ನು ಚಿಕವೀರರಾಜ ಗಾದಿಯಿಂದ ಕೆಳಗಿಳಿಸಿ ತಾನೇ ರಾಜನಾದನು. ಇಡಿ ಕೊಡಗನ್ನೇ ತನ್ನ ಕೊಡಗಿನ ಆಡಳಿತವನ್ನು ತನ್ನ ವಶದಲ್ಲಿಟ್ಟುಕೊಂಡು ಆಡಳಿತ ನಡೆಸುತಿದ್ದನು. ಕೆಲವು ಜನರಂತು ಈ ರಾಜನನ್ನು ಕಂಡರೆ ತುಂಬಾ ಭಯಭೀತರಾಗಿದ್ದರು. ಚಿಕವೀರರಾಜ ನಿಜದಲ್ಲಿ ಇದ್ದುದರ ಪರಿ, ತನ್ನ ಬಾಳು ನಡೆಸಿದ ರೀತಿ ಎರಡು ಬಹಳ ದುಷ್ಟವಾದದ್ದು ಅನೇಕ ಪುರುಷ ಸಹಜವಾದ ಬೇಟೆ ಮತ್ತು ಯುದ್ದ ಕೌಶಲ್ಯಗಳಲ್ಲಿ ನಿಸ್ಸೀಮನಾಗಿದ್ದು ರಾಜಕುಮಾರನಾಗಿದ್ದಾಗ ಸತ್ಸಂಗ ದೊರಕದೇ, ಅವನು ಅಧಿಕಾರ ಕೈಗೆ ಬಂದಾಗ ಒಬ್ಬ ನಿರಕುಂಶ, ಅಶಿಕ್ಷಿತ, ಕಾಮುಕ, ಯುವಕನಾಗಿ ಅಧೋಗತಿಗೆ ಇಳಿದ ಈ ಸನ್ನಿವೇಶ ಯಾವುದೇ ಒಂದು ಪ್ರತ್ಯೇಕ ಜಾತಿಗಾಗಿಲಿ ಅವಲಂಭಿಸಿತ್ತು ಮತ್ತು ಅವನನ್ನು ರಾಜನಾಗಿ ಈ ಸನ್ನಿವೇಶ ಯಾವುದೇ ಒಂದು ಪ್ರತ್ಯೇಕ ಜಾತಿಗಾಗಲಿ ಮತಕ್ಕಾಗಲಿ, ಪಂಗಡಕ್ಕಾಗಲಿ ಸಂಬಂಧ ಹೊಂದಿಸಿದಲ್ಲ. ಅದು ವ್ಯಕ್ತಿಯೊಬ್ಬನ ಚಾರಿತ್ರೆಯ ಮೇಲೆಯೇ ಅವಲಂಭಿಸಿತ್ತು, ಮತ್ತು ಅವನನ್ನು ರಾಜನಾಗಿ ಪಡೆದ ಆ ನಾಡ ದೌರ್ಭಾಗ್ಯವೇ ಹೊರತು ಒಂದು ಕೋಮನ್ನೇ ಹಳಿಯುವ ಸನ್ನಿವೇಶ ಖಂಡಿತ ಅಲ್ಲ ಎಂಬುದನ್ನು ಈ ಮೇಲಿನ ಅಂಶಗಳಿಂದ ತಿಳಿಯಬಹುದು.

ದೊಡ್ಡ ವೀರರಾಜೇಂದ್ರ ಎಂಬ ಈ ವಂಶದ ಅರಸ ರಾಜ್ಯವನ್ನು ಆಳಿ ತನ್ನ ಕಾಲದ ಜೊತೆಯ ಅರಸರುಗಳ ಗೌರವವನ್ನು ಗಳಿಸಿದನು. ದೊಡ್ಡ ವೀರರಾಜನಿಗೆ ತನ್ನ ಮಗಳು ದೇವಮ್ಮಾಜಿ ಆಳಬೇಕೆಂದು ಇಚ್ಛೆ ದೇವಮ್ಮಾಜಿ ಗಾದಿಯನ್ನೇರಿದಳು. ಆದರೆ ಅವನ ತಮ್ಮ ಲಿಂಗರಾಜ ಇದು ಕೂಡದೆಂದು ಹಠಮಾಡಿ ಮೊದಲು ತಾನು ದಿವಾನನಾಗಿ ಆಮೇಲೆ ದೇವಮ್ಮಾಜಿಯನ್ನು ಗಾಂದಿಯಿಂದಿಳಿಸಿ ತಾನೆ ರಾಜನಾದನು. 9 ವರ್ಷ ಆಳಿ ತೀರಿಕೊಂಡನು ಈಗ ಅವನ ಮಗ ಇಪ್ಪತ್ತು ವರ್ಷ ವಯಸ್ಸಿನ ಚಿಕವೀರರಾಜ ದೊರೆಯಾದನು. ಕೊಡಗಿನ ಈ

ರಾಜವಂಶದಲ್ಲಿ ಇವನು ಕೊನೆಯ ಅರಸು ಇವನ ಆಳ್ವಿಕೆಯು 14 ವರ್ಷದಲ್ಲಿ ಕೊಡಗು ಆಂಗ್ಲರ ಕೈವಶವಾಯಿತು.

ಅಂದರೆ ವೀರರಾಜ ಹುಟ್ಟಿನಿಂದಲೇ ದುಷ್ಟನೇನೂ ಅಲ್ಲ ಆದರೆ ಅವನು ಬಾಳಿದ್ದ ಸುಮಾರು 33 ವರ್ಷದಲ್ಲಿ ಅವನು ಬಹು ಜನರಲ್ಲಿ ತನ್ನಂಥ ದುಷ್ಟ ಇನ್ನೊಬ್ಬನಿರಲಾರ ಎಂಬ ಅಭಿಪ್ರಾಯಕ್ಕೆ ಎಡೆಮಾಡಿ ಕೊಟ್ಟಿದ್ದನು. ರಾಜನ ಎಲ್ಲ ದುಷ್ಟತನದಲ್ಲಿ ಮಂತ್ರಿಯಾಗಿ ಸಹಾಯ ಮಾಡುತ್ತಿದ್ದ ಕುಂಟ ಬಸವ. ವೀರರಾಜನ ಅದೃಷ್ಟ ಒಳ್ಳೆಯದಲ್ಲ ಅರಸನ ಮನೆತನದಲ್ಲಿ ಹುಟ್ಟಿದ ಹುಡುಗ ಹಿರಿಯ ಮಗನಾಗಿ ಹುಟ್ಟಿದ್ದರೆ ಇವನು ರಾಜನಾಗುವ ನಿರೀಕ್ಷೆಯಲ್ಲಿ ಬೆಳೆಯುತ್ತಿದ್ದನು. ಆದರೆ ಅವನ ತಮ್ಮ ಲಿಂಗರಾಜ ಅಣ್ಣನ ಕನಿಕರದಿಂದ ಒಬ್ಬ ಮನುಷ್ಯನಾಗಿದ್ದ ತನ್ನ ಮಗನನ್ನು ದತ್ತು ಮಾಡಿಕೊಳ್ಳುವನೆಂಬ ಆಸೆ ಇತ್ತು. ಆದರೆ ದತ್ತು ಮಾಡಿಕೊಳ್ಳಲಿಲ್ಲ. ಅಷ್ಟರಲ್ಲಿಯೇ ವೀರರಾಜ ಪ್ರಭಾವಶಾಲಿಯಾದ ರಾಜನಾಗಿದ್ದನು. ಅವನ ಪರಾಕ್ರಮ, ಧರ್ಮ ಪಕ್ಷಪಾತ, ಒಳ್ಳೆಯ ಆಡಳಿತ ಅವನಿಗೆ ಜನರ ಪ್ರೇಮ ಗೌರವಗಳನ್ನು ಸಂಪಾದಿಸಿದ್ದವು. ಬೇರೆ ರಾಜರ ಮನ್ನಣೆಯನ್ನು ತಂದಿದ್ದವು. ಆಂಗ್ಲ ಕಂಪನಿಯ ಅಧಿಕಾರಿಗಳ ಗೌರವವನ್ನು ಗಳಿಸಿದ್ದನು. ಆರು ವರ್ಷದ ಹುಡುಗನಾಗಿ ಇತರ ಹುಡುಗರೊಂದಿಗೆ ಒಡನಾಡಬಹುದಾದ ದಿನಕ್ಕೆ ಇವನಿಗೆ ಲಾಯದ ಮನೆಯ ಬಸವ ಜೊತೆಗಾರನಾದ ಬಸವ ಯಾರು ಎಲ್ಲಿಯವನು ಇದು ಯಾರಿಗೂ ತಿಳಿದಿರಲಿಲ್ಲ. ಬಸವ ವೀರರಾಜನಿಗಿಂತ ಹಲವು ವರ್ಷ ಹಿರಿಯವನು. ಬಹು ಚೂಟಿಯಾದ ಹುಡುಗ ಅವನ ಕಣ್ಣಿನ ಹೊಳಪು ಸುಂದರವಾಗಿತ್ತು. ಅವನ ಕಾಲಿಗೆ ಏನೋ ತಾಕಿ ಬಲಗಾಲು ತಿರಿಚಿಕೊಂಡಿತ್ತು. ಇದರಿಂದ ಸ್ವಲ್ಪ ಕುಂಟಿ ನಡೆಯುತ್ತಿದ್ದರಿಂದ ಜನರೆಲ್ಲ ಇವನನ್ನು ಕುಂಟ ಎಂದು ಕರೆಯುತ್ತಿದ್ದರು. ಇಂತಹವನು ವೀರರಾಜನಿಗೆ ಜೊತೆಗಾರನಾಗಿದ್ದನು. ತಾನು ಹೋದ ಕಡೆಗೆ ಕರೆದುಕೊಂಡು ಹೋಗಿ ತಾನು ಮಾಡಿದ ಪ್ರಾಣಿಗಳ ಸ್ನೇಹವನ್ನು ಮಾಡಿಸಿದನು. ವೀರರಾಜನಿಗೆ ಬಸವ ಎಂದರೆ ತುಂಬ ಪ್ರಿಯ ಗೆಳೆಯನಾಗಿದ್ದನು.

ವೀರರಾಜನ ತಾಯಿ ಆರೋಗ್ಯದಿಂದ ಇರಲಿಲ್ಲ ಆದ್ದರಿಂದ ರಾಜ ದಾದಿಯ ಕೈಯಲ್ಲಿ ಬೆಳೆಯಬೇಕಾಯಿತು. ಅವನ ತಂದೆ ಲಿಂಗರಾಜ ಆಡಳಿತದ ಕಡೆಗೆ ಗಮನಕೊಟ್ಟಿದ್ದರಿಂದ ಇವನನ್ನು ಸರಿಯಾಗಿ ಗಮನಿಸಲು ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ದೊಡ್ಡ ವೀರರಾಜ ತೀರಿಕೊಂಡರು ದೇವಮ್ಮಾಜಿಯನ್ನು ಪಟ್ಟದಿಂದ ಕೆಳಗಿಳಿಸಿ ಲಿಂಗರಾಜ ಅರಸನಾದನು. ವೀರರಾಜ ಯುವರಾಜನಾದನು ತನ್ನ ತಂದೆ ಮಗನ ಕಡೆಗೆ ಗಮನ ಹರಿಸಿ ತನ್ನ ಮಗನನ್ನು ರಾಜನನ್ನಾಗಿ ಮಾಡಬೇಕು ಅದಕ್ಕಾಗಿ ಇಷ್ಟೆಲ್ಲಾ ಹೋರಾಟ ಮಾಡಬೇಕಾಗಿತ್ತು ಎಂದು ಕೊಂಡನು. ಕುಂಟ ಬಸವನ ಸಹವಾಸ ತಿಳಿದು ಇದರಿಂದ ಕೆಡುಕು ಕಾಣಬಹುದೆಂದು ಊಹಿಸಿ ಕುಂಟನಿಗೆ ಬುದ್ದಿ ಮಾತು ಹೇಳಿದನು. ಆದರೆ ಹೇಗೆ ಇತ್ತೋ ಹಾಗೆ ವೀರರಾಜನ ಮನಸ್ಸು ಇತ್ತು. ತಂದೆ ತೀರಿಕೊಂಡ

ಮೇಲೆ ವೀರರಾಜ ಒಬ್ಬ ಮನುಷ್ಯನಾಗಿದ್ದನು. ರಾಜ ಹಾಳಾಗದಂತೆ ರಕ್ಷಿಸುವುದಕ್ಕೆ ಇದ್ದ ಒಂದೇ ಸತ್ಯ ಎಂದರೆ ರಾಣಿಯಾಗಿರಲು ಲಿಂಗರಾಜ ತಂದು ಕೊಂಡಿದ್ದ ಗೌರಮ್ಮ ಒಬ್ಬಳೆ, ಸಂಸಾರ ಒಳ್ಳಿತಾದರೆ ಅದು ಪುಣ್ಯದ ಮಾತು ಆಗಲಿಲ್ಲ ಹಣೆಬರಹ ಎನ್ನುವುದಿದ್ದೇ ಇದೆ ಸಹಿಸಿಕೊಳ್ಳಬೇಕು ಎಂದುಕೊಂಡಳು.

ಕೆಲವು ದಿನ ವೀರರಾಜ ಹೆಂಡತಿಯನ್ನು ಒಂದು ರೀತಿಯ ಆಸೆಯಿಂದ ನೋಡಿಕೊಂಡನು. ಅವನಿಗೆ ಹೆಣ್ಣು ಎನ್ನುವುದು ಹೊಸದಲ್ಲ. ಮೂರು ವರ್ಷದ ದಿನಕ್ಕೆ ಇವರಿಗೆ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದಳು. ವೀರರಾಜನು ಮಗುವಿನ ಹತ್ತಿರ ಬಂದನೆಂದರೆ ಒಳ್ಳೆಯನಾಗುವನು ಎಂಥ ಕೋಪದಲ್ಲೂ ಅದನ್ನು ಕಂಡರೆ ಸಹಿಸಿಕೊಳ್ಳುವನು. ಲಿಂಗರಾಜ ವರುಷ ಬದುಕಿದ್ದರೆ ವೀರರಾಜ ತಕ್ಕಷ್ಟು ಪೋಲಿತನ, ಪುಂಡಾಟದ ರುಚಿಯನ್ನು ನೋಡಿ ಸಭ್ಯನೇ ಆಗಬಹುದಾಗಿತ್ತೇನೋ ಆದರೆ ಗೌರಮ್ಮ ಆ ಪುಣ್ಯವನ್ನು ಕೇಳಿಕೊಂಡು ಬಂದಿರಲಿಲ್ಲ. ತಂದೆ ಸತ್ತ ವರ್ಷವೇ ರಾಜನಾದನು ಅವನು ಹಾಡಿದ್ದೆ ಮಾತು ಹೋದದ್ದೆ ದಾರಿ ಆಗಿ ಎಂದಿಗಿಂತ ಹೆಚ್ಚು ದುಷ್ಟನಾದನು. ಈ ಮೇಲೆ ತಿಳಿಸಿರುವ ವಿಷಯ ಒಂದು ಸಾಮಾಜಿಕ ಕಾದಂಬರಿಗಿಂತ ಒಂದು ಐತಿಹಾಸಿಕ ಕಾದಂಬರಿಯಾಗಿ 'ಚಿಕವೀರರಾಜೇಂದ್ರ' ಹೇಗೆ ಪ್ರಮುಖ ಎಂಬುದನ್ನು ಆತನು ರಾಜನಾದ ಎಂಬ ಒಂದೇ ಕಾರಣದಿಂದ ತಿಳಿಯಬಹುದು.

ಚಿಕವೀರರಾಜೇಂದ್ರ ಇತಿಹಾಸವನ್ನು ನೋಡುವ ಬಗೆ ಕಾದಂಬರಿಯ ಪ್ರಸ್ತಾವನೆಯಲ್ಲಿ ಈ ಮಾತು ಬರುತ್ತದೆ. ಒಂದು ಪ್ರಾಂತವೆಂದು ಬಾಳಿನ ಭಾರತದ ಯಾವ ಭಾಗವನ್ನು ಕುರಿತು ನೋಡಿದರೂ ಅದರ ಇತಿಹಾಸ ಕೀರ್ತಿಯುಕ್ತವೊ, ಗಮನಾರ್ಹವೊ ಮತ್ತು ಮಾರ್ಗದರ್ಶಕವೊ ಆಗಿದೆ. ಈ ಕಾದಂಬರಿ ನಮ್ಮ ಇತಿಹಾಸದ ಕೀರ್ತಿಯುಕ್ತವಾದ ಕಾಲದ ಚಿತ್ರವನ್ನು ನಮ್ಮ ಮುಂದಿಡುವುದಿಲ್ಲ. ಪ್ರಜಾ ಪೀಡನೆಯಲ್ಲಿ ತನ್ನ ಕಾಲವನ್ನು ಕಳೆಯುವ ಒಬ್ಬ ಪ್ರಭುವಿನಿಂದ ಅವನ ವಂಶವೂ ಅಳಿದು ಅವನ ರಾಜ್ಯವೂ ಪಾರತಂತ್ರಕ್ಕೆ ಈಡಾಗುವ ದುರಂತ ಚಿತ್ರ ಇಲ್ಲಿದೆ. ಚಿಕವೀರರಾಜೇಂದ್ರ ದುರ್ವ್ಯಸನಿ, ದುಷ್ಟ, ನಿರಂಕುಶ ಇವನಿಂದ ಹಾಲೇರಿ ಮನೆತನ ಹಾಳಾದುದಲ್ಲದೆ ಕೊಡಗು ಸ್ವತಂತ್ರ ರಾಜ್ಯವಾಗಿದ್ದುದು ಈಸ್ಟ್ ಇಂಡಿಯಾ ಕಂಪನಿಯ ವಶವಾಯಿತು.

ಕಾದಂಬರಿಯ ಕಡೆಯಲ್ಲಿ ಆಂಗ್ಲರ ಆಳ್ವಿಕೆಯೂ ಅಳಿದು ಹೋಗುವುದರ ಸೂಚನೆಯೊಂದಿಗೆ ಒಂದು ಸಾರ್ವತ್ರಿಕ ಸರ್ವಕಾಲಿಕ ಸತ್ಯವೂ ಘೋಷಿತವಾಗುತ್ತದೆ. ಚಿಕವೀರರಾಜೇಂದ್ರನನ್ನು ಗಾದಿಯಿಂದಿಳಿಸಿದ ಬೋಪಣ್ಣನಿಗೆ ಓಂಕಾರೇಶ್ವರನನ್ನು ಅರ್ಚಿಸುವ ಜ್ಯೋತಿಷಿ ದೀಕ್ಷಿತ ಹೇಳುತ್ತಾನೆ ಯಾವ ಆಡಳಿತವೂ ಒಂದೇ ಸಮನಾಗಿ ಧರ್ಮದಿಂದ ನಡೆಯುವುದಿಲ್ಲ. ನಾಲ್ಕು ದಿನ ಕೆಡುತ್ತದೆ ನಾಲ್ಕು ದಿನ ಜನರೊಂದಿಗೆ ಹೋರಾಡಿ ಕೆಳಕ್ಕೆ ಬೀಳುತ್ತದೆ. ಅವರು ಆಂಗ್ಲರ ಆಳ್ವಿಕೆಗೆ ಒಂದು ನೂರು ವರ್ಷದ ಅವಧಿಯನ್ನು ಮಾತ್ರ ಕೊಡುತ್ತಾರೆ. ಕಾದಂಬರಿಯ ಸಮಾರೋಪಕ ಭಾಗದಲ್ಲಿ ಆಗಲೇ ಭಾರತದ ಸ್ವಾತಂತ್ರ್ಯದ ಹೋರಾಟದ ವಿಷಯ ಎದ್ದಿರುತ್ತದೆ.

ಅಧರ್ಮದಿಂದ ಅಳಿವು ಎಂಬ ಸತ್ಯ ಎಲ್ಲ ರಾಜ್ಯಗಳಿಗೆ, ಎಲ್ಲ ರಾಜ ವಂಶಗಳಿಗೆ ಅನ್ವಯಿಸುವಂಥದು ಇದೊಂದು ಅನಿವಾರ್ಯ ಐತಿಹಾಸಿಕ ಪ್ರಕ್ರಿಯೆ. ಕೊಡಗಿನ ಹಾಲೇರಿ ಮನೆತನದ ಕೊನೆಯ ಅರಸನ ಅಧಃಪತನದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಆಧಿಪತ್ಯದಲ್ಲಿ ಕೊಡಗಿನ ವಿಲೀನೀಕರಣದಿಂದ ಈ ಪ್ರಕ್ರಿಯೆಯ ಪ್ರವೃತಿಯನ್ನು ಒಂದು ಕಾಲ ದೇಶದ ಚೌಕಟ್ಟಿನಲ್ಲಿ ಆದರೆ ಅದರ ಸಾರ್ವಕಾಲಿಕ ಅರ್ಥ ದ್ವನಿಸುವಂತೆ ಚಿಕವೀರರಾಜೇಂದ್ರ ಕೃತಿಯನ್ನು ಚಿತ್ರಿಸಲಾಗಿದೆ.

ಕಾದಂಬರಿಕಾರರಿಗಿರುವ ಆಸಕ್ತಿ, ದೃಷ್ಟಿ, ಧೋರಣೆ, ಮಾಸ್ತಿಯವರ ದರ್ಶನ ಮುಖ್ಯವಾಗಿ ನೈತಿಕವಾದುದು ಅವರ ಹೃದಯ ಪ್ರಾಮಾಣಿಕ, ವಾತ್ಸಲ್ಯ, ನೈಜನಿಷ್ಟೆ, ನಿಸ್ವಾರ್ಥ, ತ್ಯಾಗ ಮತ್ತು ತಾಳ್ಮೆಗಳಂತಹ ಜೀವನ ಮೌಲ್ಯಗಳ ಕಡೆಗೇ ಅವರ ಒಲವು ಅವರು ಈ ಕಾದಂಬರಿಯಲ್ಲಿ ಕೆಲವು ಆದರ್ಶ ಪಾತ್ರಗಳನ್ನು ಚಿತ್ರಿಸಿದ್ದಾರೆ. ಮಂತ್ರಿ ಬೋಪಣ್ಣ, ರಾಣಿ ಗೌರಮ್ಮ, ಉತ್ತಯ್ಯತಕ್ಕ ಮತ್ತು ಪುರೋಹಿತ ದೀಕ್ಷಿತ್ ಇನ್ನೂ ದುಷ್ಟ ಪಾತ್ರಗಳ ಸಾಲಿನಲ್ಲಿ ಚಿಕವೀರ, ಬಸವಯ್ಯ ಅವರ ಸಿಪಾಯಿಗಳು ಮತ್ತು ಸೇವಕರು ಇದ್ದಾರೆ. ಇವರ ಮಧ್ಯ ಮಾನವೀಯತೆಯ ಕಾಳಜಿ ಹೊಂದಿದ ಭಗವತಿ, ಚೆನ್ನಬಸವ, ಲಕ್ಷ್ಮಿನಾರಾಯಣಯ್ಯ ಮತ್ತಿತರರಿದ್ದಾರೆ. ಚಿಕವೀರನು ನಿರ್ದಯದಿಂದ ತನ್ನ ಎಳೆಯ ಸೋದರಳಿಯನ್ನು ಕೊಂದದ್ದು ಮತ್ತು ಆತ ಬಸವಯ್ಯನ ಒಳಸಂಚನ್ನು ಊಹಿಸಿ ಅವನನ್ನು ಕೊಂದದ್ದು ಹಾಗೂ ಬ್ರಿಟಿಷರಿಗೆ ಶರಣಾಗಲು ನಿಶ್ಚಯಿಸಿದ್ದು ಇವು ದುಷ್ಟ ಶಕ್ತಿಯ ಕೊನೆಗಾಲದ ಘಟನೆಗಳಾಗಿವೆ. ಆದ್ದರಿಂದ ನೈತಿಕ ಮಟ್ಟದಲ್ಲಿ ಕಥೆ ಉತ್ತುಂಗ ಸ್ಥಿತಿ ತಲುಪುವುದು ಇಲ್ಲಿಯೆ ಈ ದುಷ್ಟ ಶಕ್ತಿಯ ಅವನತಿಯಲ್ಲಿಯೆ ಈ ಕಾದಂಬರಿಯಲ್ಲಿ ನೈತಿಕ ಸ್ತರ, ರಾಜಕೀಯದೊಂದಿಗೆ ಎಲ್ಲೆಲ್ಲೊ ಹೆಣೆದುಕೊಂಡಿದೆ. ರಾಜಕೀಯವಾಗಿ ಕಾದಂಬರಿ ಎರಡು ಮುಖ್ಯ ಸಂಘರ್ಷಗಳನ್ನು ಮುಂದಿಡುತ್ತದೆ ಒಬ್ಬ ರಾಜ ಹಾಗೂ ಅವನ ಪ್ರಜೆಗಳ ನಡುವಿನ ಆಂತರಿಕ ಸಂಘರ್ಷ ಅದರಲ್ಲಿ ಅವನ ಸಹೋದರಿ, ಪತ್ನಿ, ಹಿರಿಯ ಸಚಿವರು ಹಾಗೂ 'ಕಾವೇರಿ ಮಕ್ಕಳು' ಎಂಬ ಹೆಸರಿನಲ್ಲಿ ಸಂಘಟಿತರಾಗಿದ್ದ ಕೊಡಗಿನ ಜನರೂ ಸೇರಿದ್ದಾರೆ. ಎರಡನೆಯದು, ರಾಜ ಹಾಗೂ ಬ್ರಿಟಿಷರ ನಡುವಿನ ಬಾಹ್ಯ ಸಂಘರ್ಷ ಮಾಸ್ತಿಯವರು ಆಂತರಿಕ ಸಂಘರ್ಷವನ್ನು ನಿಜವಾದ ಒಳದೃಷ್ಟಿ ಮತ್ತು ತಿಳಿವಳಿಕೆಯಿಂದ ಚಿತ್ರಿಸಿದ್ದಾರೆ. ಬಾಹ್ಯ ಸಂಘರ್ಷವನ್ನು ನೈಜ ಒಳದೃಷ್ಟಿಗಿಂತ ಹೆಚ್ಚಾಗಿ ಬೌದ್ಧಿಕ ತಿಳುವಳಿಕೆಯಿಂದ ರಚಿತವಾಗಿದೆ. ಆದರೆ ಈ ಬಾಹ್ಯ ಸಂಘರ್ಷದಲ್ಲಿ ರಾಜನ ನಿಲುವು ಬಹು ಪರಿಣಾಮಕಾರಿಯಾಗಿಯೂ ಮನನೀಯವಾಗಿಯೂ ಮೂಡಿ ಬಂದಿದೆ. ರಾಜ ತನ್ನ ರಾಷ್ಟೀಯ ಅಭಿಮಾನದಿಂದಲೂ ತನ್ನ ಸ್ವಾಭಾವಿಕ ಹಕ್ಕುಗಳ ಅರಿವಿನಿಂದಲೂ ಬ್ರಿಟಿಷರೊಡನೆ ವ್ಯವಹರಿಸುವ ರೀತಿ ಅತ್ಯಂತ ಪ್ರಭಾವಿಯಾಗಿ ರಚನೆಯಾಗಿದೆ. ರಾಜನ ದುರ್ಬಲತೆಯ ಬಗೆ ನಮಗೆ ಸಹಾನುಭೂತಿ ಅನಿಸದಿದ್ದರೂ ಅವನ ಪ್ರತಿಭಟನೆ ಮಾತ್ರ ನಮ್ಮ ಮೆಚ್ಚುಗೆಗೆ ಪಾತ್ರವಾಗುತ್ತದೆ.

ಈ ಬಾಹ್ಯ ಸಂಘರ್ಷದ ಇನ್ನೊಂದು ಮುಖವಾದ ಬ್ರಿಟಿಷರ ಪಕ್ಷವನ್ನು ಬೆಳೆಸುವಲ್ಲಿ ಮಾಸ್ತಿಯವರಿಗೆ ಒಳದೃಷ್ಟಿಯಿಂದಲೇ ನೋಡಿದ್ದರಿಂದ ಚಿತ್ರಣ ಸ್ವಲ್ಪ ಮೃದುವಾಗಿದೆಯೆನ್ನಬಹುದು. ಬ್ರಿಟಿಷರ ತಂತ್ರ – ಕುತಂತ್ರಗಳನ್ನು ಮುಖ್ಯವಾಗಿ ಪತ್ರಗಳ ಮುಖಾಂತರ ಮತ್ತು ಬಾಹ್ಯ ಘಟನೆಗಳ ಮುಖಾಂತರ ಈ ಗತ ಜೀವನದ ಚಿತ್ರಣದಲ್ಲಿ ಮಾಸ್ತಿರವರು ಒಬ್ಬ ಕಾದಂಬರಿಕಾರನಾಗಿ, ಒಬ್ಬ ವಿಮರ್ಶಕನಾಗಿ, ನಾಟಕಕಾರನಾಗಿ, ಒಬ್ಬ ಕತೆಗಾರನಾಗಿ ಈ ಐತಿಹಾಸಿಕ ಕಾದಂಬರಿಗಳಲ್ಲಿ ಒಂದಾದ ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಅವರ ಆಸಕ್ತಿ ತುಂಬಾ ಆಶಾದಾಯಕವಾದುದು ಅವರ ದೃಷ್ಟಿ ಕೊಡಗಿನ ಹಿಂದಿನ ಜೀವನ ಹೇಗೆ ಚಿತ್ರಿತವಾಗಿತ್ತು, ಅದರಲ್ಲಿ ಯಾವುದಾದರೂ ದುರಂತವಿದ್ದಂತೆ ಇಲ್ಲವೆ ಹಿಂದಿನ ಜೀವನ ಈಗಿನ ಕೊಡಗು ಹೇಗೆ ಎಂಬುವುದರ ಬಗೆ ಮಾಸ್ತಿರವರು ಕ್ರಮಬದ್ಧವಾದ ರೀತಿಯಲ್ಲಿ ಈ ಕಾದಂಬರಿಯನ್ನು ಚಿತ್ರಿಸಿದ್ದಾರೆ. ಇದರಿಂದ ಗೊತ್ತಾಗುತ್ತದೆ ಮಾಸ್ತಿರವರಿಗೆ ಈ ಕೊಡಗಿನ ಬಗೆ ಎಷ್ಟರ ಮಟ್ಟಿಗೆ ವ್ಯಾಮೋಹ ಇತ್ತು ಅದನ್ನು ಒಂದು ಐತಿಹಾಸಿಕ ಕಥೆಯಾಗಿ ಚಿತ್ರಿಸಿದ್ದಾರೆ ಎಂಬುದನ್ನು ಈ ಮೇಲೆ ವಿವರಿಸಿರುವ ವಿಷಯಗಳಿಂದ ತಿಳಿಯಬಹುದು . ಇನ್ನು ಕೆಲವು ವಿಷಯಗಳನ್ನು ಮುಂದಿನ ಅಧ್ಯಾಯಗಳಲ್ಲಿ ತಿಳಿದುಕೊಳ್ಳಬಹುದು.

<u>**ಮಾಸ್ತಿರವರ ಜೀವನ ಚರಿತ್ರೆ**</u> :– ಮಾಸ್ತಿಯವರು ಜೂನ್–08–1891 ರಂದು ಕರ್ನಾಟಕದ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಗ್ರಾಮದಲ್ಲಿ ಜನಿಸಿದರು. ಮಾಸ್ತಿರವರು ತುಂಬಾ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಅವರ ಮನೆತನಕ್ಕೆ 'ಪೆರಿಯಾತ್' ಎಂಬ ಹೆಸರಿನಿಂದ ಕರೆಯುತ್ತಿದ್ದರು. ಇದರ ಅರ್ಥ 'ದೊಡ್ಡ ಮನೆ' ಅದರ ಅರ್ಥ ಆ ಊರಿಗೆ ಮಾಸ್ತಿ ಎಂಬ ಹೆಸರು ಬರಲು ಕಾರಣವೆಂದರೆ ಈ ಮನೆತನದ ಇನ್ನೊಬ್ಬ ಹಿರಿಯರಾದ 'ವೆಂಕಟಕೃಷ್ಣಯ್ಯನವರ ಹೆಂಡತಿ ಮಹಾಸತಿಯಾಗಿ ಹೋದ ಕಾರಣದಿಂದಲೇ ಮಾಸ್ತಿಯವರು ಹುಟ್ಟಿದ ಊರಿಗೆ ಮಾಸ್ತಿ ಎಂಬ ಹೆಸರು ಬಂದಿತು'. ಹಿಂದೆ ದೊಡ್ಡ ಮನೆತನವೆಂದು ಹೆಸರು ಪಡೆದ ಮಾಸ್ತಿರವರ ಮನೆತನವು 300 ವರ್ಷಗಳ ಅವಧಿಯಲ್ಲಿ ಹಲವಾರು ಏಳು–ಬೀಳುಗಳನ್ನು ಕಂಡಿದೆ. ಆದರೆ ಮಾಸ್ತಿರವರ ತಾತ ರಾಯಪ್ಪನವರ ಕಾಲಕ್ಕೆ ಅವರ ಮನೆತನ ಸಂಪತ್ತಿನಿಂದ ಕೂಡಿತ್ತು. ಆದರೆ ಆ ಸಂಪತ್ತು ಬಹಳ ಕಾಲ ಉಳಿಯಲಿಲ್ಲ. ಅವನ ಕಣ್ಣೆದುರಿನಲ್ಲಿಯೇ ಅದು ಸಾಮಾನ್ಯ ಸ್ಥಿತಿಗೆ ಬಂದಿತು. ಆ ವೇಳೆಗೆ ತನ್ನ ಒಡಹುಟ್ಟಿದ ಅಣ್ಣನು ಸಹ ತೀರಿಕೊಂಡನು. ಅವರ ಮನೆತನ ಎಂದೂ ಕಾಣದ ಒಂದು ಮಟ್ಟದ ಬಡತನವನ್ನು ಮುಟ್ಟಿತು. ಮಾಸ್ತಿರವರು ಬ್ರಾಹ್ಮಣ ಹುಡುಗರೊಂದಿಗೆ ದಕ್ಷಿಣೆ ಪಡೆಯುವುದಕ್ಕಾಗಿ ಹೆರವರ ಮನೆಗಳಿಗೆ ಹೋದರು ಆದರೆ ಅವರು ದೊಡ್ಡ ಮನೆತನದ ಹುಡುಗ ಎಂದು ಅವರಿಗೆ ದಕ್ಷಿಣೆ ಕೊಡುವುದು ಸಮಂಜಸವಲ್ಲವೆಂದು ಕೊಂಡರು. ಆಗ ಮಾಸ್ತಿರವರು ಬರಿ ಕೈಯಿಂದ ಮನೆಗೆ ಬಂದರು. ಅಂದರೆ ಅವರ

ಜೀವನ ಸ್ಥಿತಿ ಹೇಗಿತ್ತು ಎಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಮೊದಲು ಮಾಸ್ತಿಯವರು 'ಯದಲೂರಿನ' ಶಾಲೆಯಲ್ಲಿ ಪ್ರವೇಶ ಪಡೆದರು. ನಂತರ ತನ್ನ ತಾಯಿಯ ತವರೂರು 'ಹೊಂಗೇನಹಳ್ಳಿ'ಯಲ್ಲಿ ಪ್ರವೇಶ ಪಡೆದರು. ಮಾಸ್ತಿ ಗ್ರಾಮ ಪ್ಲೇಗು ರೋಗದಿಂದ ಅವೃತ್ತವಾಗಿತ್ತು. ಜನ ರೋಗ ಭಯದಿಂದ ಹಳ್ಳಿಯನ್ನು ಬಿಟ್ಟು ಬೇರೆಡೆಗೆ ಹೊರಟು ಹೋದರು.

ಮಾಸ್ತಿರವರ ತಾಯಿ ತನ್ನ ತವರಿಗೆ ಮಗನನ್ನು ಕಳುಹಿಸಲು ನಿರಾಕರಿಸಿದರು. ಆಗ ಅವರ ತಂದೆ ನೋಡಮ್ಮ ನೀವು ಗುಡಿಸಲಲ್ಲಿ ಇದ್ದುಕೊಂಡು ಅವನಿಗೆ ವಿದ್ಯಾಭ್ಯಾಸ ಕೊಡಿಸುವುದು ಕಷ್ಟ ನನ್ನ ಜೊತೆಯಲ್ಲಿ ಕಳುಹಿಸಿಕೊಡು ಒಳ್ಳೆಯ ಶಾಲೆಯಲ್ಲಿಯಲ್ಲಿ ಉಪನ್ಯಾಸ ಕೊಡಿಸುತ್ತೇನೆ ಎಂದು ತನ್ನ ಮಗಳಿಗೆ ಹೇಳಿದರು. ಮಾಸ್ತಿರವರು ತನ್ನ ತಾತನ ಮನೆಗೆ ಹೋಗದಿದ್ದರೆ ಅವರ ಮುಂದಿನ ಜೀವನ ಏನಾಗುತ್ತಿತ್ತೋ , ಮಾಸ್ತಿರವರಿಗೆ ಅಜ್ಜಿ ತಾತನ ಅಕ್ಕರೆಯ ಜೊತೆಗೆ ಗುರುಗಳ ಅಕ್ಕರೆಯು ಸಿಕ್ಕಿತು. ಮಾಸ್ತಿರವರು ಮಳವಳ್ಳಿಯಲ್ಲಿ 1902 ರಲ್ಲಿ ಇಂಗ್ಲೀಷ್ ಶಾಲೆಗೆ ಸೇರಿದ್ದು , ಅವರ ಸೋದರ ಮಾವ ವೆಂಕಟರಾಮಅಯ್ಯಂಗಾರ್ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿದರು. ಅವರ ಮಾವನಿಗೆ ಕೃಷ್ಣರಾಜಪೇಟೆಗೆ ವರ್ಗವಾಯಿತು. ಆದರೆ ಅವರು ಮಾಸ್ತಿರವರನ್ನು ಮೈಸೂರಿನಲ್ಲಿ ವೆಸ್ಲಿಯನ್ ಮಿಷನ್ ಸ್ಕೂಲಿಗೆ ಸೇರಿಸಿದರು. 1907 ರಲ್ಲಿ 'ಮೇಟ್ರುಕ್ಯುಲೇಶನ್' ಮುಗಿಸಿದರು. ಇದರ ಫಲವಾಗಿ ಸರಕಾರವು ಅವರಿಗೆ 'ಸ್ಕಾಲರ್‌ಸಿಪ್' ನೀಡಿತು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಫ್.ಎ. ಓದಲಾರಂಭಿಸಿದರು. ಇದರಲ್ಲಿ ಪ್ರಥಮ ವರ್ಗದಲ್ಲಿ ಪಾಸಾದರು. ಇದೇ ಸಮಯದಲ್ಲಿ ಅಜ್ಜಿ-ತಾತನನ್ನು ಕಳೆದುಕೊಂಡ ದು:ಖ ಕಾಡುತ್ತಿತ್ತು. 1914ರಲ್ಲಿ ಎಂ.ಎ.ಪದವಿ ಪಡೆದರು. 1913ರಲ್ಲಿಯೇ ಮೈಸೂರು ಸಿವಿಲ್ ಪರೀಕ್ಷೆ ಪಾಸುಮಾಡಿ ಅದೇ ವರ್ಷ ಅಸಿಸ್ಟೆಂಟ್ ಕಮಿಷನರ್‌ರಾಗಿ ನೇಮಕಗೊಂಡರು. ಅವರು ಓದುತ್ತಿರುವಾಗಲೇ ವಿವಾಹ ಬಂಧನಕ್ಕೆ ಸಿಲುಕಿದರು. ಅವರ ಜೀವನವನ್ನು ಫಲಪ್ರದಗೊಳಿಸಬಂದವರು ಪಂಕಜಮ್ಮನವರು. ಇವರಿಗೆ ಆರು ಜನ ಹೆಣ್ಣುಮಕ್ಕಳಿದ್ದರು. ಆದರೆ ಗಂಡು ಸಂತಾನವಿರಲಿಲ್ಲ ಎಂದು ಅವರು ಕೊರಗಲಿಲ್ಲ. ಪತಿಯಂತೆ ಸತಿ ,ಸತಿಯತೆ ಪತಿ ಎಂದು ಕೊಂಡಿದರು. ಬಹಳ ಕಷ್ಟವೆನಿಸಿದಾಗ ಶ್ರೀನಿವಾಸ ಎಂದುಕೊಳ್ಳುತ್ತಿದ್ದರು.

ಆಡಳಿತಾಧಿಕಾರಿಗಳಾಗಿ ಮಾಸ್ತಿಯವರು ಹಲವಾರು ಸ್ಥಾನಗಳನ್ನು ಹೊಂದಿ ಸೇವೆ ಸಲ್ಲಿಸಿದರು. ಆದರೂ ಅವರಿಗೆ ಅಧಿಕಾರದ ಅಹಂಕಾರ- ದರ್ಪಗಳಿರಲಿಲ್ಲ. ನಾನು ವಿಶ್ರಾಂತನಾಗುವ ಮುನ್ನ ಸಂಸ್ಥಾನದ ದಿವಾನನಾಗುವೆನೆಂದು ಭಾವಿಸಿದ್ದರು. ಮುಂದೆ ದಿವಾನರಾದರು 1910-11 ರ ಸುಮಾರಿನಲ್ಲಿಯೇ ಕಥೆ ಬರೆಯುತ್ತಿದ್ದ ಮಾಸ್ತಿಯವರು ಮೊದಲು ಬರೆದ ಕಥೆ 'ರಂಗನ ಮದುವೆ' 1920 ರಲ್ಲಿ 'ಕೆಲವು ಸಣ್ಣ ಕಥೆಗಳು' ಎಂಬ ಪ್ರಥಮ ಪುಸ್ತಕ ಪ್ರಕಟವಾಯಿತು. ಇದು ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟವಾದ ಮೊದಲ

ಪುಸ್ತಕವೆನಿಸಿಕೊಂಡಿತು. ಮಾಸ್ತಿರವರು ಕನ್ನಡ ಸಾಹಿತ್ಯ ಪ್ರಪಂಚದ ಮಹಾ ಪುನರುತ್ಥಾನಕಾರರಲ್ಲಿ ಒಬ್ಬರು. ಅವರು ಬಿ.ಎಂ.ಶ್ರೀಕಂಠಯ್ಯ, ದ.ರಾ.ಬೇಂದ್ರೆ, ಕೆ.ವಿ.ಪುಟ್ಟಪ್ಪ ಮತ್ತು ಶಿವರಾಮ ಕಾರಂತರಷ್ಟೆ ಅತ್ಯಂತ ಪ್ರಮುಖರಾದವರು ಅವರೊಬ್ಬ ಸಮಗ್ರ ಪೂರ್ಣ ಬರಹಗಾರರು. ಮುಂದೆ ಸಾಹಿತ್ಯ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ದುಡಿದರು. ಹತ್ತು ಹಲವಾರು ಕಾರ್ಯಗಳನ್ನು ಮಾಡಿದರು. ಹಲವಾರು ವರ್ಷ ಪತ್ರಕರ್ತರಾಗಿ ದುಡಿದರು ಅವರು 'ಜೀವನ' ಪತ್ರಿಕೆಯ ಸಂಪಾದಕರಾಗಿ ಎರಡು ದಶಕಗಳ ಕಾಲ ನಡೆಸಿಕೊಂಡು ಬಂದರು. "ಕ್ರಿ.ಶ. 1939 ರಲ್ಲಿ 'ಜೀವನ' ಪತ್ರಿಕೆಯನ್ನು ಮೊದಲಿಗೆ ಧಾರವಾಡದಲ್ಲಿ ಬೇಂದ್ರೆಯವರು ಆರಂಭಿಸಿದರು ಅಷ್ಟೆ ಮಾಸ್ತಿಯವರು ಅದನ್ನು ಕೊನೆಯವರೆಗೆ ನಡೆಸಿಕೊಂಡು ಹೋದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಾಕ್ಷರಾಗಿ 1942 ರಲ್ಲಿ ಕಾರ್ಯ ನಿರ್ವಹಿಸಿದ್ದರು. ಕನ್ನಡಕ್ಕೆ, ಕನ್ನಡ ಜನಕ್ಕೆ, ಕನ್ನಡ ನಾಡಿನ, ಕನ್ನಡ ಜನತೆಯ ಬಾಳುವೆಗೆ ಅವು ಪೋಷಕವಾಗಿ ಬರಬೇಕೆಂಬುದು ಮಾಸ್ತಿರವರ ಆಸೆಯಾಗಿತ್ತು."[3]

ಮಾಸ್ತಿರವರು ನಾಡಿನಲ್ಲೆಲ್ಲ ಸಂಚಾರ ಮಾಡಿದರು. ತಮ್ಮ ಐದು ವರ್ಷಗಳ ಅಧಿಕಾರದ ಅವಧಿಯಲ್ಲಿ ಹಲವಾರು ಸುಧಾರಣೆಗಳನ್ನು ಕೈಗೊಂಡರು.

1.ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಹೆಚಿಸಿದರು.

2.ಪರಿಷತ್ತಿನ ಬಗೆ ಎಲ್ಲಾ ಜನರಲ್ಲೂ ಗೌರವ ಬೆಳೆಸಿದರು.

3.ಪರಿಷತ್ತಿನ ಬಗೆ ಜನರಲ್ಲಿದ್ದ ಉದಾಸೀನತೆಯನ್ನು ಹೊಗಲಾಡಿಸಿದರು.

4.ಆರ್ಥಿಕ ಸುಭದ್ರತೆಯನ್ನು ಹೆಚ್ಚಿಸಿದರು.

ಇಷ್ಟೆ ಅಲ್ಲದೆ ಅಪಾರ ದೈವಭಕ್ತರಾಗಿದ್ದರು. ತಾವು ಏನೇ ಕೆಲಸ ಮಾಡಿದರು ಅದು ದೇವರ ಕೃಪೆಯಿಂದ ಎಂದು ಹೇಳುತ್ತಿದ್ದರು. ಮಾಸ್ತಿರವರು ತಮ್ಮ ಜೀವನವನ್ನು ಉದ್ದಾರ ಮಾಡಿ ಎಂದು ಕೇಳಿಕೊಳ್ಳುತ್ತಿರಲ್ಲಿಲ್ಲ. ಎಲ್ಲಾರ ಜೀವನ ಉದ್ದಾರವಾಗಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತಿದ್ದರು.

ನಂತರ ಮಾಸ್ತಿರವರು ಸಾಹಿತಿಗಳಿಗೆ ಸಹಾಯ ಸಹಾಕರಗಳನ್ನು ನೀಡಿದರು. ಮಾಸ್ತಿರವರನ್ನು ವಿಮರ್ಶಕರು "ಕನ್ನಡದ ಆಸ್ತಿ" ಎಂದು ಶ್ಲಾಘಿಸಿರುವರು. "ಮಾಸ್ತಿ ಕನ್ನಡದ ಆಸ್ತಿ" ಎಂತಲೂ ಕರೆಯತ್ತಾರೆ. ಅವರನ್ನು "ಸಣ್ಣ ಕಥೆಗಳ ಜನಕ" ಎಂದು ಹೇಳಬಹುದು. ಇವು ಬರೀ ಹೇಳಿಕೆಗಳಲ್ಲ. ಕನ್ನಡ ಸಾಹಿತ್ಯಕೆ ಮೊಟ್ಟ ಮೊದಲಿಗೆ ಸಣ್ಣ ಕಥೆಗಳ ಸುಗ್ಗಿಯನ್ನು ತಂದವರು ಮಾಸ್ತಿಯವರು: ಸಣ್ಣ ಕಥೆಗಳಲ್ಲಿದೆ. ಅವರು ನಾಟಕ-ಕಾವ್ಯ ಕಾದಂಬರಿ-ವಿಮರ್ಶೆ ಮುಂತಾದ ಪ್ರಕಾರಗಳಲ್ಲಿ ಬರೆದಿದ್ದಾರೆ. ಆದರೂ ಇದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರನ್ನು ಪ್ರಮುಖವಾಗಿ ಗುರುತಿಸಬಹುದು. ಅದರಲ್ಲಿಯೂ ಸಣ್ಣ ಕಥೆಗಳಿಂದ ಮಾತ್ರ ಈ ಸಣ್ಣ ಕಥೆಗಳ

ಕೊಡುಗೆಗಾಗಿಯೇ ಅವರಿಗೆ 'ಚಿಕವೀರ ರಾಜೇಂದ್ರ' ಎಂಬ ಐತಿಹಾಸಿಕ ಕಾದಂಬರಿಗೆ 1983ರಲ್ಲಿ ಜ್ಞಾನಪೀಠ ಪ್ರಶಸ್ತಿ ಸಿಕ್ಕಿದೆ. ಇಷ್ಟೆ ಅಲ್ಲದೆ ಇನ್ನೂ ಹತ್ತು ಹಲವಾರು ಪ್ರಶಸ್ತಿಗಳು ಇವರ ಕೃತಿಗಳಿಗೆ ಸಿಕ್ಕಿವೆ.ಹಾಗೇ ನೋಡಿದರೆ ಸಣ್ಣ ಕಥೆಗಳನ್ನು ಮೊದಲು ಬರೆದವರು ಮಾಸ್ತಿಯವರಲ್ಲದೆ ಹೋದರೂ ಕಥೆಗಳಿಗೂ ಮಾಸ್ತಿಯವರಿಗೂ ಅದೆಂತಹೂದೂ ಒಂದು ರೀತಿಯ ಅರಿಯದ ಭಾಂದವ್ಯ. ಆದ್ದರಿಂದಲೆ ಮಾಸ್ತಿರವರು ಕನ್ನಡ ಕಥಾ ಸಾಹಿತ್ಯದ ಪ್ರಮುಖರೆನಿಸಿಕೊಂಡು ಕನ್ನಡದ ಆಸ್ತಿಯಾಗಿಯೇ 7-6-1986 ರಂದು ಅಮರರಾಗಿದ್ದಾರೆ.

ಅಧ್ಯಾಯ–2.

ಚಿಕವೀರರಾಜೇಂದ್ರ ಒಂದು ಪ್ರದೇಶ, ಒಂದು ಕಾಲ ಘಟ್ಟದ ಇತಿಹಾಸವನ್ನು ಆಧರಿಸಿದ ಕೃತಿ.

ಕೊಡಗು ಒಂದು ಜಿಲ್ಲೆ ಒಂದು ದೇಶದ ಜೊತೆಗೆ ಒಂದು ಖಂಡದ ವಿಸ್ತಾರವನ್ನು, ವೈವಿಧ್ಯವನ್ನು ಪಡೆದಿದೆ ಎನ್ನುವುದು ಈ ಭೂಮಿ ಧರ್ಮ, ನೀತಿ, ಸಂಸ್ಕೃತಿಯ ಕಾರಣದಿಂದ ಎಷ್ಟೊ ಕಾಲದಿಂದ ಒಂದಾಗಿದ್ದರೂ ಆಡಳಿತದಲ್ಲಿ ಒಂದಾಯಿತೆನ್ನುವುದು ತೀರಾ ಇತ್ತೀಚಿನ ಮಾತು. ಪ್ರಾಂತ ತನ್ನದೆ ಬಾಳನ್ನ ಬಾಳಿತು ಅನೇಕ ಪ್ರಾಂತಗಳು ಅನೇಕ ವೇಳೆ ಒಂದು ಪ್ರಾಂತದ ಬೇರೆ-ಬೇರೆ ಭಾಗಗಳಲ್ಲಿ ಬೇರೆ-ಬೇರೆ ರಾಜಮನೆತನಗಳಿದ್ದು ಒಂದೊಂದು ಪ್ರಾಂತದ ಇತಿಹಾಸವೂ ಒಂದು ದೇಶದ ಇತಿಹಾಸದಂತೆ ವಿಪೂಲವಾಯಿತು. ಈ ಮಾತಿಗೆ ಅತ್ಯುತ್ತಮ ನಿದರ್ಶನ ರಾಜಪುತ್ರಸ್ಥಾನ. "ರಾಜಪುತ್ರರ ಆ ನೆಲೆ ಭರತ ಭೂಮಿಯ ಸಣ್ಣ ಒಂದು ಭಾಗ ಆದರೆ ಅದರಲ್ಲೆ ಇಪ್ಪತ್ತು ಭಾಗ ಇವೆ. ಒಂದೊಂದರ ಇತಿಹಾಸವೂ ಒಂದು ರಾಷ್ಟದ ಇತಿಹಾಸದಂತೆ ವಿಸ್ತಾರವಾಗಿ ಕೀರ್ತಿವಂತವಾಗಿ ಕಾಣುತ್ತದೆ. ಅ ಶೌರ್ಯ, ಧರ್ಮ, ನಿಷ್ಟೆ,ಆ ತೇಜಸ್ಸು, ಆ ಶ್ರದ್ಧೆ, ಆ ಭೂಮಿಯಲ್ಲಿ ಅದೆಷ್ಟು ಹುಲುಸಾಗಿ ಬೆಳೆದುವು ಜೊತೆಗೆ ಆ ಕೆಟ್ಟತನ, ಆ ಅವಿವೇಕ, ಆ ಸ್ವಾರ್ಥ, ಆ ಲೋಭ ಎಷ್ಟು 'ಬಹುರತ್ನಾ ವಸುಂಧರಾ"[4] ಎನ್ನುವುದು ನಿಜವಾದ ಮಾತು.

ಭಾರತ ಭೂಮಿಯನ್ನು ಕುರಿತಂತೂ ಇದು ತೀರಾ ಸತ್ಯವಾದ ಮಾತು. ಒಂದು ಪ್ರಾಂತವೆಂದು ಬಾಳಿನ ಅದರ ಯಾವ ಭಾಗವನ್ನು ಕುರಿತು ನೋಡಿದರೂ ಅದರ ಇತಿಹಾಸ ಕೀರ್ತಿಯುಕ್ತವೂ, ಗಮನಾರ್ಹವೂ, ಮಾರ್ಗದರ್ಶಕವೂ ಆಗಿದೆ. ಈ ಮೂರು ರೀತಿಯಲ್ಲಿಯ ಹಿರಿಯದೆನಿಸಿಕೊಳ್ಳಬಹುದಾದ ಇತಿಹಾಸವನ್ನು ಪಡೆದಿರುವ ಒಂದು ಕಿರಿದಾದ ಭೂಪ್ರದೇಶ ಕೊಡಗು. ಮುಂಬೈಯಿಂದ ಮೊದಲಾದ ಸಹ್ಯಪರ್ವತಸ್ತೊಮ ದಕ್ಷಿಣಾಭಿಮುಖವಾಗಿ ಹಾಯ್ದು ದಾರಿಯುದ್ದಕ್ಕೂ ಪಶ್ಚಿಮ ಸಮುದ್ರವನ್ನು ನೋಡುತ್ತ ಎತ್ತರದಿಂದ ಎತ್ತರವನ್ನು ಮುಟ್ಟುತ್ತ ನಡೆದು ನೀಲಗಿರಿಯಲ್ಲಿ ಕೊನೆಸಾರುವ ಮುನ್ನ ಕೊಡಗಿನ ನೆಲದಲ್ಲಿ ವಾಯುವ್ಯದ ಪುಷ್ಪಗಿರಿಯಿಂದ ತಾವಳಗೇರಿ ಮೂರು ನಾಡಿನ ಬ್ರಹ್ಮಗಿರಿಯವರೆಗೆ ಐದು ಯೋಜನದ ಶಿಖರಗಳ ಸಾಲಾಗಿದೆ. ಇದಿಷ್ಟು ಉದ್ದದಲ್ಲಿ ಪರ್ವತ ಅಡ್ಡಗಲ ಎರಡು ಯೋಜನ, ಮೂರು ಯೋಜನದಷ್ಟು ಭೂಮಿಯಲ್ಲಿ ಹರಡಿ ಇಲ್ಲಿ ಇಳಿದು ಅಲ್ಲಿ ಏರಿ ಬೆಟ್ಟಗಳ ಒಂದು ಜಾತ್ರೆಯನ್ನೇ ಮಾಡಿದೆ. ಇವುಗಳಲ್ಲಿ ಹೆಸರಾದ ಶಿಖರ ಹಲವು ಇವೆ. ಪುಷ್ಪಗಿರಿಯಲ್ಲೆ ಎರಡು ಶಿಖರ ಮಡಕೇರಿಯ ಬಳಿ ಕೋಟೆಬೆಟ್ಟ ಎಲ್ಲಕ್ಕಿಂತ ಎತ್ತರವಾಗಿ ತಡಿಯಂಡಮೋಳು, ಬ್ರಹ್ಮಗಿರಿಯ ಉಯ್ಯಾಲೆ ಮಲೆ, ದೇವಸೀಮಲೆ, ನಾಲ್ಕು ನಾಡಿನ ತುಂಬೆಮಲೆ, ಇಗ್ಗುತಪ್ಪನ ಬೆಟ್ಟ , ಕಡಿಯತ್ತುನಾಡಿನ ಸೋಮನಮಲೆ ಇವೆಲ್ಲ ಉನ್ನತ ಶಿಖರಗಳು. ಒಂದು ಸ್ಪರ್ಧೆಯಲ್ಲಿ ಎಂಬತೆ ಒಂದನ್ನು ನೋಡಿ ಒಂದು ಮೇಲೆ ಮೇಲಕ್ಕೆ ಏರುತ್ತಿರುವಂತೆ ಕಾಣುತ್ತವೆ.

ಕೊಡಗು ಕಾವೇರಿಯ ತವರು ನದಿ ಬ್ರಹ್ಮಗಿರಿಯಲ್ಲಿ ಜನ್ಮತಳೆದು, ಆಗ್ನೇಯವಾಗಿ ಸಿದ್ದಾಪುರದವರೆಗೆ ಅಲ್ಲಿಂದ ಈಶಾನ್ಯ ವಾಗಿ ಸಿರಿಯಂಗಳದವರೆಗೆ ಕೊಡಗಿನ ಭೂಮಿಯಲ್ಲಿ ಹರಿಯುತ್ತದೆ. ಮಧ್ಯ ತಡಿಯಂಡಮೋಳಿನಿಂದ ಹರಿದು ಬರುವ ಕಕ್ಕಬೆ, ಸೋಮನ ಮಲೆಯಿಂದ ಹರಿದು ಬರುವ ಹಳ್ಳ, ಹೆಗ್ಗಳದಿಂದ ಹರಿದು ಬರುವ ಕದನೂರು ಹೊಳೆ, ಯೆಡೆನಾಲ್ಕು ನಾಡಲ್ಲಿ ಕಗ್ಗೋಡು ನಾಡಿನಿಂದ ಮುತ್ತಾರಮುಡಿ, ಹೊರೂರು ನೂರೊಕ್ಕಲಿಂದ ಚಿಕಲಿ, ಕಕ್ಕೆಚೋರನ ಹೊಳೆಗಳೂ, ಮಾದಾಪುರ ಹಟ್ಟಿ ಹೊಳೆಗಳೂ ಸೇರಿ ಬೆಳೆದ ಹಾರಂಗಿ ಕುಶಾಲನಗರಕ್ಕೆ ಉತ್ತರದಲ್ಲಿ ಹೀಗೆ ಹತ್ತು ಮೂಲೆಯಿಂದ ಹತ್ತೆಂಟು ಸಣ್ಣ ಹೊಳೆಗಳು ಇದರೊಳಕ್ಕೆ ಹರಿದು ಸೇರಿ ಇದನ್ನು ಪೋಷಿಸುತ್ತವೆ. ಹೇಮಾವತಿ ಈ ನಾಡ ನೀರಿಂದ ಬೆಳೆದು ದೇಶದ ಉತ್ತರದ ಗಡಿಯಾಗಿ ಹರಿದು ಇದರ ಮಲೆಗಳಲ್ಲಿ ಹುಟ್ಟಿ ಲಕ್ಷ್ಮಣತೀರ್ಥ ಈಶಾನ್ಯವಾಗಿ ಕಾಡು ಮಲೆಗಳ ದೇಶದಲ್ಲಿ ಹಾಯ್ದೂ ನಾಡ ಎಲ್ಲೆಯಾಚೆಗೆ ಕಾವೇರಿಯನ್ನು ಸೇರುತ್ತವೆ. ಒಂದು ಕಡೆ ಮೈಸೂರು, ಒಂದು ಕಡೆ ಮಲೆಯಾಳ, ಒಂದು ಕಡೆ ಮಂಗಳೂರಿನ ಆಡಳಿತಗಳಿರುತ್ತ ಮಧ್ಯ ನಿಂತ ಕೊಡಗಿನ ಅರಸರು ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದಕ್ಕೆ ಸದಾ ಹೋರಾಡಬೇಕಾಯಿತು. ಹೀಗೆ ಚಿಕವೀರರಾಜೇಂದ್ರ ಕಾದಂಬರಿ ಈ ಮೇಲೆ ತಿಳಿಸಿದ ಒಂದು ಪ್ರದೇಶದ ಒಂದು ಕಾಲಘಟ್ಟದಲ್ಲಿ ಇತಿಹಾಸವನ್ನು ಆಧರಿಸಿದ ಕೃತಿಯಾಗಿದೆ ಎಂಬುದನ್ನು ತಿಳಿಯಬಹುದು. ಇಂದಿನ ಕರ್ನಾಟಕದ ಕೊಡಗು ಜಿಲ್ಲೆಯ ಅದೇ ಹೆಸರಿನ ಹಿಂದಿನ ರಾಜ ಸಂಸ್ಥಾನದ ಪ್ರದೇಶದಲ್ಲಿ ಒಳಗೊಂಡಿದೆ. ಕೊಡಗು ಅತ್ಯಂತ ಆಸಕ್ತಿದಾಯಕ ಪ್ರಾಚೀನ 1.5 ಹೆಚ್ಚಿನ 7.5 ಮೀ ಇವು ಭೂಮಿಯ ಅಥವಾ ವಾರ್ ಟ್ರೆಂಚಸ್ (ಕಡಂಗ), ಮತ್ತು ವ್ಯಾಪಕ 2 ಅಥವಾ 3 ಮೀ ಮೂಲಕ ಆಳವಾದ ಕಂದಕದ 3 ಮೀ ಒದಗಿಸಲಾಗಿದೆ. ಲಿನಿಯರ್ ಮಟ್ಟಿಗೆ 500 ರಿಂದ 600 ಮೀ ಎನ್ನಲಾಗಿದೆ. ಅವರು 9ನೇ ಮತ್ತು 10ನೇ ಶತಮಾನಗಳಲ್ಲಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ಕೊಡವರು ಶತಮಾನಗಳಿಂದ ಎಂದು ಸ್ಥಳದಲ್ಲಿ ವಾಸಿಸುವ, ಕೊಡಗು ಆರಂಭಿಕ ಕೃಷಿಕರು ಇದ್ದರು. ಚನ್ಗಲ್ವ ಮತ್ತು ಕೊನ್ಗಲ್ವ ಹಾಗೆ ನಯಕ ಪಾಲೆಗಾರ ಅವುಗಳನ್ನು ಆಳಿದರು. ಶತಮಾನಗಳಿಂದ ಕದಂಬರು, ಗಂಗರು, ಚೋಳರು, ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರ ರಾಯ್ಸ್ ಕೆಳಗೆ ಅನೇಕ ದಕ್ಷಿಣ ಭಾರತದ ಸಾಮ್ರಾಜ್ಯಗಳು ಕೊಡಗು ಆಳಿದರು. ಕೊಡಗು ಆರಂಭಿಕ ಖಾತೆಗಳನ್ನು ಕೇವಲ ಪ್ರಸಿದ್ಧ ಮತ್ತು ಅದರ ಇತಿಹಾಸ ಅಧಿಕೃತ ದಾಖಲೆ ವಸ್ತುವಾದರು ಎಂದು 9ನೇ ಮತ್ತು 10ನೇ ಶತಮಾನಗಳ ತನಕ ಇರಲಿಲ್ಲ. ಈ ಅವಧಿಯಲ್ಲಿ ಶಾಸನಗಳಲ್ಲಿ ಪ್ರಕಾರ ದೇಶದ ಇವರಲ್ಲಿ ಅಡಿಯಲ್ಲಿ ಚನ್ಗಲ್ವ, ಚಂಗ-ನಾಡು ರಾಜರು, ನಂಜರಾಯಪತಟ್ಟಣ ಶೈಲಿಯ ರಾಜರು, ಪೂರ್ವ ಮತ್ತು ಉತ್ತರ ಭಾಗವಾಗಿ ನಡೆದ, ತಲಕಾಡು ರಾಜರು ಆಳಿದರು ಒಟ್ಟಿಗೆ ಮೈಸೂರುರಲ್ಲಿ ಹುಣುಸೂರು ತಾಲ್ಲೂಕಿನ ಜೊತೆ ಕೊಡಗು, ಪತನದ ನಂತರ, 11ನೇ

ಶತಮಾನದಲ್ಲಿ, ಚೋಳರು ಗಂಗಾ ಅಧಿಕಾರದ, ಚನ್ಗಲ್ವ ಎರಡನೆಯದು ಉಪನದಿ ಆಯಿತು. ಚನ್ಗಲ್ವ ಕೊನ್ಗಲ್ವ ಮತ್ತು ಕೊಡವರ ಎರಡೂ ಕೊಡಗು ಚೋಳರ ಊಳಿಗಮಾನ್ಯ ಪದ್ಧತಿಯ ಧಣಿಗಳು ಇದ್ದರು. ತಮ್ಮ ಪ್ರತಿಯಾಗಿ ಚೋಳರ 19ನೇ ಶತಮಾನದಲ್ಲಿ, ಹೊಯ್ಸಳರ ಮೈಸೂರು ದೇಶದ ಹೊರ ಬಂದಾಗ ಚನ್ಗಲ್ವ ಸ್ವಾತಂತ್ರ್ಯ ಹೊರಗುಳಿದವು; ಆದರೆ ತೀವ್ರ ಹೋರಾಟದ ನಂತರ ಅವರು ಸದ್ದಡಗಿಸಿಕೊಂಡವು ಮತ್ತು ಹೊಯ್ಸಳ ಅರಸರ ಸಾಮಂತರು ಆಯಿತು. "14ನೇ ಶತಮಾನದಲ್ಲಿ ಹೊಯ್ಸಳ ಆಡಳಿತದ ಪತನದ ನಂತರ, ಅವರು ವಿಜಯನಗರ ಸಾಮ್ರಾಜ್ಯದ ಸಾರ್ವಭೌಮತ್ವದ ಅಡಿಯಲ್ಲಿ ಜಾರಿಗೆ ಬಂದಿತ್ತು. ಈ ಅವಧಿಯಲ್ಲಿ, 16ನೇ ಶತಮಾನದ ಆರಂಭದಲ್ಲಿ, ನಂಜರಾಜಾ ಹೊಸ ಚನ್ಗಲ್ವ ಬಂಡವಾಳ ನಂಜರಪಟ್ಟಣ ಸ್ಥಾಪಿಸಲಾಯಿತು. ಬ್ರಿಟಿಷ್ ಆಡಳಿತದ ಎಪ್ರಿಲ್-1834-11 ರಂದು ರಾಜಾ ಕರ್ನಲ್ ಫ್ರೇಸರ್, ಬಲದೊಂದಿಗೆ ರಾಜಕೀಯ ಏಜೆಂಟ್ ಪದಚ್ಯುತಿಗೊಳಿಸಿದ, ಮತ್ತು 7 ರಂದು ರಾಜ್ಯದ ಔಪಚಾರಿಕವಾಗಿ ಕೊಡಗು ಮಾಹಿತಿ, ಈಸ್ಟ್ ಇಂಡಿಯಾ ಕಂಪನಿಯ ಪ್ರದೇಶಗಳನ್ನು ಸೇರ್ಪಡಿಯಾಯಿತು ಮೇ 1852 ರಲ್ಲಿ ಪಡೆದ ವೆಲ್ಲೂರು ಗಡೀಪಾರು ಮಾಡಿದ ರಾಜಾ, ಅವರು ಯುರೋಪಿಯನ್ ಶಿಕ್ಷಣ ನೀಡಲು ಬಯಸಿದರು ಯಾರಿಗೆ ತನ್ನ ನೆಚ್ಚಿನ ಮಗಳು ಗೌರಮ್ಮ ಇಂಗ್ಲೆಂಡ್ ಭೇಟಿ ಬಿಟ್ಟು 30 ಜೂನ್ ರಂದು ಅವಳು ರಾಣಿ ವಿಕ್ಟೋರಿಯಾ ತನ್ನ ಪ್ರಾಯೋಜಕರು ಒಂದಾಗಿದೆ, ಬ್ಯಾಪ್ಟೈಜ್ ಮಾಡಲಾಯಿತು, ಅವರು ನಂತರ 1864 ರಲ್ಲಿ ಅವರ ಸಾವಿನ ನಂತರ ನಿಗೂಢವಾಗಿ ತಮ್ಮ ಮಗುವಿಗೆ ಕಣ್ಮರೆಯಾಯಿತು, ಒಬ್ಬ ಬ್ರಿಟಿಷ್ ಅಧಿಕಾರಿ ವಿವಾಹವಾದರು. ವೀರ ರಾಜಾ ಸ್ವತಃ 1863 ರಲ್ಲಿ ನಿಧನರಾದರು, ಮತ್ತು ಕೆನ್ಸಲ್ ಗ್ರೀನ್ ಸ್ಮಶಾನದಲ್ಲಿ ಸಮಾಧಿ ಮಾಡಲಾಯಿತು."[5]

ಬ್ರಿಟಿಷ್ ಭಾರತದ ಒಂದು ಪ್ರಾಂತವಾಗಿ, ಇದು ಕೊಡಗಿನಲ್ಲಿ ಅಧಿಕೃತವಾಗಿ ಮುಖ್ಯ ಆಯುಕ್ತ ಆಡಳಿತಕ್ಕೊಳಪಟ್ಟಿತ್ತು. ಕೊಡಗು ನಂತರ ಸ್ವಾತಂತ್ರ್ಯ ಹೋರಾಟಗಾರರು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸಿದರು.ಅವುಗಳಲ್ಲಿ ಒಂದು, ಪಾಂಡ್ಯಂಡ ಬೆಳ್ಳಯಪ್ಪನನ್ನು ಕೊಡಗಿನ ಗಾಂಧಿ ಎಂದರು. ಜಿಲ್ಲಾ ಪ್ರೊಫೈಲ್-ಕಿ. ಮಿ. ರಲ್ಲಿ ಪ್ರದೇಶ 4104 ಜನಸಂಖ್ಯೆ, ಕೊಡಗು ಜನಸಂಖ್ಯೆಯ 2011 ಪ್ರಕಾರ ಜನಗಣತಿ 554000 ಆಗಿದೆ. ಕೊಡಗು 3 ತಾಲ್ಲೂಕುಗಳು, ವೀರಾಪೇಟೆ ಮಡಿಕೇರಿ ಮತ್ತು ಸೋಮವಾರಪೇಟೆ ವಿಂಗಡಿಸಲಾಗಿದೆ ಎತ್ತರ ಸುಮಾರು 3800 ಅಡಿ ಎತ್ತರವನ್ನು ಹವಾಮಾನ, ಉಷ್ಣವಲಯದ, ತೇವವಾದ ಮತ್ತು ಸಮಶೀತೋಷ್ಣ ಹವಾಮಾನವನ್ನು ಮಾತನಾಡುವ ಭಾಷೆಗಳು: ಕೊಡವ ತಕ್ಕ್ (ಕೊಡಗು ಭಾಷಾ), ಕನ್ನಡ, ಇಂಗ್ಲೀಷ್, ಮಲಯಾಳಂ, ತಮಿಳು ಹಾಗೂ ಹಿಂದಿ.

ಕೊಡಗು ಕಿರು ಜಿಲ್ಲೆ ಗಾತ್ರದಲ್ಲಿ ಅದರದು ರಾಜ್ಯದಲ್ಲಿ 19ನೇಯ ಸ್ಥಾನ. ಅನಂತರ ಬೆಂಗಳೂರು ಜಿಲ್ಲೆ 20ನೇಯ ಸ್ಥಾನದಲ್ಲಿದೆ ಕೊಡಗು ಪಶ್ಚಿಮ ಘಟ್ಟದ ಮೇಲೆ ಮೈಚೆಲ್ಲಿಕೊಂಡಿರುವ ಜಿಲ್ಲೆಯಾಗಿ ತನ್ನ ನೈಸರ್ಗಿಕ

ಸೌಂದರ್ಯದಿಂದಾಗಿ ಭಾರತೀಯರಿಂದ ದಕ್ಷಿಣ ಕಾಶ್ಮೀರವೆಂದೂ, ಐರೋಪ್ಯದಿಂದ ಭಾರತದ ಸ್ವಿಟ್ಜರ್‌ಲ್ಯಾಂಡ್ / ಸ್ಕಾಟ್‌ಲ್ಯಾಂಡ್ ಎಂದು ಕರೆಯಲ್ಪಟ್ಟಿದೆ. ಈ ಕೊಡಗಿಗೆ ವಿಶಿಷ್ಟರಾದ ಕೊಡವರು ಕರ್ನಾಟಕದ ಒಂದು ಹೆಮ್ಮೆಯ ಜನಾಂಗ.

ಭಾರತದ ಭೂಸೇನೆಯ ಮಹಾದಂಡನಾಯಕರಾದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ, ಜನರಲ್ ಕೆ. ಎಸ್. ತಿಮ್ಮಯ್ಯನವರು ಆದಿಯಾಗಿ ಅನೇಕ ಶೂರ ಸೈನಿಕರನ್ನು ಕೊಡಗು ದೇಶಕ್ಕೆ ಕೊಟ್ಟಿದೆ. ಬ್ರಿಟಿಷರ ಆಗಮನದ ಪೂರ್ವದಲ್ಲಿ ಅಷ್ಟೊಂದು ವಿದ್ಯಾವಂತರೂ ಆಗಿ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸರಕಾರಿ ಸೇವೆ, ಬ್ಯಾಂಕಿಂಗ್, ಕೃಷಿಸೇವೆ ಹಾಗೂ ವೈದ್ಯಕೀಯ ವೃತಿ ಮುಂತಾದ ಕ್ಷೇತ್ರಗಳಲ್ಲಿ ವೇಗದ ಪ್ರಗತಿ ಸಾಧಿಸಿದ್ದು ಉಲ್ಲೇಖನೀಯ ಸ್ವಾತಂತ್ರೋತ್ತರ ಕಾಲದಲ್ಲಿ ಒಮ್ಮೆ ಕೊಡಗು ಸಾಕ್ಷರತೆಯಲ್ಲಿ ಇಡೀ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿ ಇದ್ದ ಜಿಲ್ಲೆಯಾಗಿತ್ತು. ಈಗಲಾದರು ಅದು 2-3 ನೇಯ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ಸಹಕಾರರಂಗದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಅಪೂರ್ವ ಪ್ರಗತಿ ಸಾಧಿಸಿದ ಜಿಲ್ಲೆಗಳಲ್ಲಿ ಕೊಡಗು ಗಣ್ಯವಾದುದು ಬೆಟ್ಟ ಗುಡ್ಡಗಳಿಂದ ತುಂಬಿದ ಕೊಡಗು ಬ್ರಿಟಿಷರ ಆಗಮನ ಪ್ರಸಿದ್ದವಾಗಿತ್ತು ಇದನ್ನು ಕರ್ನಾಟಕದಲ್ಲಿ 'ಕಾಫಿ ನಾಡು' ಎಂದು ಕರೆಯುತ್ತಾರೆ. ಆರ್ಥಿಕವಾಗಿ ಕೊಡಗು ಮುಂದುವರಿದ ಜಿಲ್ಲೆ ಇಲ್ಲಿಯ ತಲಾ ಆದಾಯ ರಾಜ್ಯದ ಸರಾಸರಿ ಆದಾಯಕ್ಕೂ ಹೆಚ್ಚು ಇಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹೆಚ್ಚಿದ್ದಾರೆ. ಕೊಡಗಿಗೆ ರೈಲು ಸಂಪರ್ಕವಿಲ್ಲ ಆದರೂ ಸಹ ಅದು ಹೆಚ್ಚು ಪ್ರಸಿದ್ಧವಾಗಿದೆ.

ಚರಿತ್ರೆಯ ಒಡಲಿನಿಂದ ವಸ್ತುವನ್ನು ತೆಗೆದುಕೊಂಡರೂ ಈ ಕೃತಿಗಳು ಒಬ್ಬ ಶ್ರೇಷ್ಟ ಸೃಜನಶೀಲ ವ್ಯಕ್ತಿಯ ಬರಹ ಎನ್ನುವುದನ್ನು ಮರೆಯುವಂತಿಲ್ಲ. ಚರಿತ್ರೆಯ ಒಂದು ಉತ್ಪನ್ನವಾಗಿ ಇದನ್ನು ಪರಿಗಣಿಸುವುದಾಗಲೀ ಚರಿತ್ರೆಗಾಗಿ ಇವನ್ನು ಓದುವುದಾಗಲಿ ಸಲ್ಲದು. ಒಂದು ಶುದ್ಧ ಸ್ವರೂಪದ ಕಾದಂಬರಿಗಳಂತೆಯೇ ಇವನ್ನು ಪರಿಭಾವಿಸಬೇಕಾಗುತ್ತದೆ. ಏಕೆಂದರೆ ಇಲ್ಲಿರುವ ಇತಿಹಾಸದ ಅಂಶಗಳೆಲ್ಲ ಒಬ್ಬ ಸೃಜನಶೀಲ ಲೇಖಕರ ಪ್ರತಿಭೆ ಕಲ್ಪನೆಗಳಲ್ಲಿ ಹಾದು ಹೊಸ ಪ್ರಭೆಯಲ್ಲಿ ಜೀವ ಪಡೆದಂಥವು. ಒರಟು ಬಂಡೆಯಿದ ಸುಂದರ ವಿಗ್ರಹವೊಂದನ್ನು ಕಡೆಯುವ ಶಿಲ್ಪಿ ಸೌಂದರ್ಯ ದೈವಿಕತೆಗಳೇ ಮನಸ್ಸಿಗೆ ಬರುತ್ತವಲ್ಲದೆ, ಮೂಲ ಬಂಡೆಯ ಕಲ್ಪನೆ ಯಾರಿಗೂ ಬರುವುದಿಲ್ಲ. ಹಾಗೇಯೇ ಈ ಕೃತಿಗಳ ವಸ್ತು ಚಾರಿತ್ರಿಕವಾದರೂ ಇವು ಸೃಜನಾತ್ಮಕ ಕಾದಂಬರಿಗಳಾಗಿಯೇ ಪರಿಭಾವನೆಗೆ ಸಲ್ಲುತ್ತವೆ.

ಮಾಸ್ತಿಯವರ ವ್ಯಕ್ತಿತ್ವ ಎಷ್ಟು ಸೃಜನಶೀಲವಾದದ್ದೋ ಅಷ್ಟೇ ಚಿಂತನಶೀಲವಾದದ್ದು, ಕೇವಲ ರಂಜನೆಯೊಂದೇ ಎಂದು ಅವರ ಬರಹದ ಗುರಿ ಅಲ್ಲ. ಬಾಳಿನ ಸ್ವರೂಪವನ್ನು ಅದರ ಅಚಿಂತ್ಯ ಚಲನೆಯ ಚಲನೆಯ ರೀತಿಯನ್ನು ಕುರಿತ ಅವರ ಸೂಕ್ಷ್ಮ ಚಿಂತನೆ ಮಾಸ್ತಿಯವರ ಬರಹಗಳಲ್ಲಿ ಉದ್ದಕ್ಕೂ ಎಡೆ ಪಡೆಯುವ

ಒಂದು ಪ್ರಮುಖ ಅಂಶ. ಇದು ಅವರ ಎಲ್ಲ ಕೃತಿಗಳಿಗೆ ತಾತ್ತ್ವಿಕತೆಯ ಒಂದು ಭಿತ್ತಿಯನ್ನು ಕಟ್ಟಿಕೊಡುತ್ತದೆ. ಅವರಲ್ಲಿ ಕಥೆ ಕೇವಲ ಕಥೆಗಾಗಿ ಇಲ್ಲ. ಅದೇನಿದ್ದರೂ ಬದುಕಿನ ರಹಸ್ಯ ನಿಗೂಢತೆಗಳನ್ನು ಶೋಧಿಸುವ ಮತ್ತು ಸಾಧ್ಯವಾದಷ್ಟು ಅದನ್ನು ನಮ್ಮ ಅರಿವಿಗೆ ದಕ್ಕಿಸಿಕೊಳ್ಳುವ ಒಂದು ಸೃಜನಾತ್ಮಕ ಪ್ರಯತ್ನ ಈ ಶೋಧನೆ ಕೃತಿಯ ಘಟನೆಗಳ ಮೂಲಕವೇ ನಡೆಯುತ್ತದೆ. ಕೆಲವು ಸಲ ಕೃತಿಕಾರರ ಆಲೋಚನೆಗಳಾಗಿ ನೇರವಾದ ಮಾತಿನಲ್ಲಿ ಕಾಣಿಸಿಕೊಳ್ಳುವುದು ಉಂಟು. ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ದುರಂತ ಪ್ರಜ್ಞೆಯನ್ನು ಗಮನಿಸಿದಾಗ ಚಿಕವೀರನ ವೈಯಕ್ತಿಕ ಗುಣಾವಗುಣಗಳಷ್ಟನ್ನೇ ಹಿಂಬಾಲಿಸಿಕೊಂಡು ಹೋದರೆ ಹೆಚ್ಚಿನ ಪ್ರಯೋಜನವಿಲ್ಲ ಎಂಬುದನ್ನು ಮೊದಲೇ ಸ್ಪಷ್ಟಗೊಳಿಸಿಕೊಳ್ಳಬೇಕು. ಈ ಬಗ್ಗೆ ಚಾರಿತ್ರಿಕ ದಾಖಲೆಗಳಲ್ಲಿ ಪರಸ್ಪರ ವಿರೋಧವಾದ ವಿವರಗಳಿವೆ ಎಂಬುದನ್ನು ಈಗಾಗಲೇ ಹಲವರು ದಾಖಲಿಸಿದ್ದಾರೆ.

ಚಾರಿತ್ರಿಕ ಕಾದಂಬರಿಯೊಂದನ್ನು ಅಭ್ಯಾಸ ಮಾಡುವಾಗ ಚಾರಿತ್ರಿಕ ದಾಖಲೆಗಳನ್ನು ಎಷ್ಟರ ಮಟ್ಟಿಗೆ ಬಳಸಿಕೊಳ್ಳಬೇಕು ಎಂಬುದು ತುಂಬಾ ಗೊಂದಲದ ವಿವಾದಾಸ್ಪದ ಅಕಾಡೆಮಿಕ್ ಸಂಗತಿ. ಆದರೆ ಆ ವಿವರಗಳ ಆಯ್ಕೆ ಕಾದಂಬರಿಕಾರನೊಬ್ಬನ ಸೃಜನಶೀಲ ಆಯ್ಕೆ ಎಂಬುದನ್ನು ನಾವು ಮರೆಯಬಾರದು. ತನ್ನ ಸೃಜನಶೀಲ ಅಗತ್ಯಗಳಷ್ಟೇ ಅವನು ಪುರಾಣದಿಂದಾಗಲೀ ಚರಿತ್ರೆಯಿಂದಾಗಲೀ ಸಮಕಾಲೀನ ಜೀವನದಿಂದಾಗಲೀ ವಿವರಗಳನ್ನು ಆಯ್ಕೆ ಮಾಡಿಕೊಳ್ಳುವುದು. ಈ ಆವರಣವನ್ನು ಸ್ಥೂಲವಾಗಿ ಗುರುತಿಸಲು ಕಾದಂಬರಿಯೊಂದನ್ನು ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ಎಂದು ಕರೆಯುತ್ತೇವೆಯೇ ಹೊರತು ಪುರಾಣ, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮನೋವಿಜ್ಞಾನಗಳಿಗೆ ಅವುಗಳು ಕಥಾರೂಪ ಕೊಡುತ್ತವೆ ಬದಲಿಯಾಗುತ್ತವೆ ಎಂದಾಗಲೀ ಅಲ್ಲ ಕಾದಂಬರಿ ಒಂದು ಕಾಲ್ಪನಿಕ ಸೃಷ್ಟಿ ಕಾದಂಬರಿಕಾರನೊಬ್ಬನ ದರ್ಶನ ಕಲಾವಿದನೊಬ್ಬನ ದರ್ಶನ ಅಷ್ಟೇ ಆದ್ದರಿಂದ ಕಾದಂಬರಿಯನ್ನು ಚರಿತ್ರೆ ಪುರಾಣಗಳಾಗಿ ಓದಬಾರದು ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಡಿಕನ್ಸ್ ಮೊದಲುಗೊಂಡು ಯಾವ ಶ್ರೇಷ್ಠ ಲೇಖಕರೂ ಹಾಗೆ ಚರಿತ್ರೆಗೆ ಪೂರಾ ನಿಷ್ಠನಾಗಿಲ್ಲ. "ಚಿಕವೀರರಾಜೇಂದ್ರ' ಕೊಡಗಿನ ಚರಿತ್ರೆಯಲ್ಲ ಅದೊಂದು ಕಾದಂಬರಿ. It is not pure history but a work of fiction. ಆದ್ದರಿಂದಲೇ ಸಾಹಿತ್ಯ ವಿಮರ್ಶಕ ಕಾದಂಬರಿಯ ಒಳ ಜಗತ್ತಿನಲ್ಲಿ ಮೂಡಿಬಂದ ವಿವರಗಳಿಗೆ ಅವುಗಳ ಅಂತರ್ ಸಂಬಂಧದಲ್ಲಿ ಅಷ್ಟೊಂದು ಪ್ರಾಮುಖ್ಯತೆ ನೀಡುವುದು."[6] ಚಾರಿತ್ರಿಕ ಕಾದಂಬರಿಕಾರ ಇತಿಹಾಸಕಾರನಂತೆ ವಿವರಗಳನ್ನು ಜಡವಾಗಿ ಪ್ರೇರಿಸುತ್ತಾ ಹೋಗುವುದಿಲ್ಲ.

ಒಂದು ಐತಿಹಾಸಿಕ ಸತ್ಯಕ್ಕೆ ನೋಟಕ್ಕೆ ಕಾಣ್ಕೆಗೆ ಆಪಚಾರವಾದಗ ಹಾಗೆ ಮತ್ತು ತನ್ನ ಸೃಜನಶೀಲ ಅಗತ್ಯಗಳಿಗೆ ಪೂರಕವಾಗುವಷ್ಟು ಮಾತ್ರ ವಿವರಗಳನ್ನು ಕಾದಂಬರಿ ಪರಿಕರಗಳಾಗಿ ಪರಿವರ್ತಿಸಿಕೊಳ್ಳತ್ತಾನೆ. ಮತ್ತು ಹೀಗೆ ವಿವರಗಳನ್ನು ಪರಿಕರಗಳಾಗಿ ಪರಿವರ್ತಿಸಿಕೊಳ್ಳುವುದರಲ್ಲಿ ಮಾತ್ರ ಸೃಜನಶೀಲನಾಗಿರುತ್ತಾನೆ. ಅವನ

ನೋಟದ ಮೂಲ ನೆಲೆ ಇರುವುದು ಇಂಥ ಪರಿವರ್ತನೆಗಳಲ್ಲಿ. ಏಕೆಂದರೆ ಸೃಜನಶೀಲಲೇಖಕನೊಬ್ಬ ಸತ್ಯವನ್ನು ಮಂಡಿಸುವ ಕ್ರಮಾಕ್ಕೂ ಇತಿಹಾಸಕಾರನೊಬ್ಬ ಮಂಡಿಸುವ ಕ್ರಮಕ್ಕೂ ಮೂಲಭೂತ ವ್ಯತ್ಯಾಸಗಳಿರುತ್ತಾವೆ. ಈ ಕೊಡಗಿನಲ್ಲಿ ಸುಮಾರು 5000ಕ್ಕೆ ಒಳಪಟ್ಟ ಬ್ರಾಹ್ಮಣರ ಜನಸಂಖ್ಯೆ ಇರಬಹುದೆಂದು ನಂಬಲಾಗಿದೆ. ಇವರು ಎಲ್ಲಿಂದ ಬಂದರು, ಯಾವಾಗ ಬಂದರು, ಏಕೆ ಬಂದರು ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಸಾಧಾರಣ ಮಟ್ಟಿಗೆ ಯಾವ ದೇಶದ ಚರಿತ್ರೆಯನ್ನು ಓದಿದರೂ ಆ ದೇಶದ ನಿವಾಸಿಗಳು ಹೊರದೇಶದಿಂದ ಬಂದು ನೆಲೆಸಿದವರೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಕೊಡಗಿನ ವಿಷಯ ಪ್ರಥಮವಾಗಿ ಉಂಟಾದ ಗ್ರಂಥವು ಸ್ಕಾಂದ ಪುರಾಣದ ಕೆಲವು ಅಧ್ಯಾಯಗಳನ್ನೊಳಗೊಂಡ ಕಾವೇರಿ ಮಹಾತ್ಮೆ ಇದು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ಬ್ರಾಹ್ಮಣ ಹೆಸರುಗಳಿವೆ ಇದರಿಂದ ಬ್ರಾಹ್ಮಣರು ಪುರಾಣ ಕಾಲದಲ್ಲಿಯೇ ನೆಲೆಸಿದ್ದರೆಂದು ಹೇಳಲಾಗಿದೆ. ಅಗಸ್ತ್ಯಋಷಿಯ ಉತ್ತರದಿಂದ ದಕ್ಷಿಣಕ್ಕೆ ಬರುವಾಗ ಕಾವೇರಿ ನದಿ ತೀರದಲ್ಲಿ ಶಿವಲಿಂಗವನ್ನು ಪ್ರತಿಷ್ಟಿಸಿದುದ್ದರಿಂದ ಹಲವಾರು ದೇವಾಲಯಗಳು ಎದ್ದು ಬಂದವು ಎಂದು ತಿಳಿದಿದೆ. ಆ ಸಮಯದಲ್ಲಿ ಬ್ರಾಹ್ಮಣರ ಒಂದು ಗುಂಪು ಭಾಗಮಂಡಲ ತಲಕಾವೇರಿಗೆ ಬಂತೆಂದು ಹೇಳಬಹುದು. ಕೊಡಗಿನಲ್ಲಿ ಒಬ್ಬತ್ತನೆ ಮತ್ತು ಹತ್ತನೆ ಶತಮಾನದಲ್ಲಿ ಆಳಿದ ಗಂಗಾರಸರ ಕಾಲದಲ್ಲಿ ಬ್ರಾಹ್ಮಣರ ಹೆಸರು ಕೇಳಿ ಬರುತ್ತದೆ. ತಲಕಾವೇರಿಯಲ್ಲಿ 200 ವರ್ಷಗಳಿಗೆ ಹಿಂದೆ ಇವರೇ ಅರ್ಚಕರಾಗಿದ್ದರೆಂದು ಸಹ ಭಾವಿಸಬಹುದು. 1600 ನೇ ಇಸವಿಯ ನಂತರ ಆಳಿದ ಕೊಡಗು ರಾಜರು ಮೈಸೂರು, ಹಾಸನ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಬ್ರಾಹ್ಮಣರನ್ನು ಕೊಡಗಿನಲ್ಲಿ ನೆಲೆಸುವಂತೆ ಆಕರ್ಷಿಸಿದರು. ಮೊದಲನೆ ಲಿಂಗರಾಜ(1774–80) ನು ಸುಬ್ಬರಸಯ್ಯನನ್ನು ಕರ್ಣೀಕನನ್ನಾಗಿ ನೇಮಿಸಿದನು. ಇವನನ್ನು ಇವನ ಮಗ ನಾಗಪ್ಪಯ್ಯನನ್ನೂ ಹೈದರಾಲಿ ಮತ್ತು ಟಿಪ್ಪುಸುಲ್ತಾನನು ಅಮಲ್ದಾರರನ್ನಾಗಿ ನೇಮಿಸಿದರು. "ದೊಡ್ಡವೀರರಾಜೇಂದ್ರನ ಕಾಲದಲ್ಲಿ (1780–1809) ಕೆಲವು ಬ್ರಾಹ್ಮಣರು ಉನ್ನತ ಅಧಿಕಾರದಲ್ಲಿದ್ದರು. 1999 ರಲ್ಲಿ ಟಿಪ್ಪುಸುಲ್ತಾನನಿಗೆ ಸೇರಿದ ಮಂಗಳೂರು ಸೀಮೆಯನ್ನು ಹಿಡಿದುಕೊಳ್ಳಲು ಬೋಪುವನ್ನು ಕಳುಹಿಸಿದನು. 2ನೇ ಲಿಂಗರಾಜ ಕಾರಣಾತಂರದಿಂದ ಒಬ್ಬ ವೈದಿಕ ಬ್ರಾಹ್ಮಣನನ್ನು ಕೊಲ್ಲಿಸಿದುದಕ್ಕಾಗಿ ಆ ಬ್ರಾಹ್ಮಣನು ಬ್ರಹ್ಮರಾಕ್ಷಸನಾಗಿ ರಾಜನಿಗೆ ಉಪದ್ರವವನ್ನು ಕೊಡಲು ರಾಜನು ಈಗಿನ ಓಂಕಾರೇಶ್ವರ ದೇವಸ್ಥಾನವನ್ನು ಕಟ್ಟಿಸಿ ಅದರ ಮೂಲಕ ತನ್ನ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದನೆಂದು ತಿಳಿದು ಬರುತ್ತದೆ. ಲಕ್ಷೀನಾರಾಯಣನೆಂಬ ಬ್ರಾಹ್ಮಣನು ಲಿಂಗರಾಜನ ರಹಸ್ಯದ ಗುಮಾಸ್ತನಾಗಿದ್ದನು. ಈ ದೀಕ್ಷಿತನಿಂದ ಕೊಡಗಿನ ಹಿಂದಿನ ಸಾಂಸ್ಕೃತಿಕ ವಿಶಿಷ್ಟತೆಗಳು ಮತ್ತು ಅದನ್ನು

ಪರಂಪರಗತವಾಗಿ ಹಬ್ಬ ಹರಿದಿನಗಳನ್ನು ಮಾಡುತ್ತಾ ಬಂದಿದ್ದನು. ಇದರಿಂದ ಈ ಎಲ್ಲಾ ಅಂಶಗಳು ಚಿಕವೀರರಾಜೇಂದ್ರನ ಕಾದಂಬರಿಯಲ್ಲಿ ವ್ಯಕ್ತವಾಗುವುದಕ್ಕೆ ಕಾರಣವಾಯಿತು."[7]

ಇಷ್ಟೆ ಅಲ್ಲದೆ ಬ್ರಿಟಿಷ್ ಐತಿಹಾಸಿಕರು ಕೊಡವರು ವಿಷಯ ಪ್ರಸ್ತಾಪಿಸುತ್ತ ದಕ್ಷಿಣ ಭಾರತದಲ್ಲಿ ಬ್ರಾಹ್ಮಣರ ಪ್ರಭಾವಕ್ಕೆ ಒಳಗಾಗದ ಒಂದು ಜನಾಂಗವಿದ್ದರೆ ಅದು ಕೊಡವ ಜನಾಂಗವೆಂದು ಹೇಳಿರುತ್ತಾರೆ. ಗೌಡುಗಳು ದೇಶದಲ್ಲಿ ಕೊಡವರನ್ನು ಬಿಟ್ಟರೆ ಗೌಡುಗಳೆ ಕೊಡಗು ದೇಶದ ಇತಿಹಾಸದಲ್ಲಿ, ಹೈದರಾಲಿ (1766 – 83) ಮತ್ತು ಅವನ ಮಗ ಟಿಪ್ಪು ಸುಲ್ತಾನ (1784 –99) ಈ ತಂದೆ ಮಗನಿಂದ ದೇಶಕ್ಕೆ ಸಂಭವಿಸಿದ ಅನರ್ಥವು ಕೊಡಗಿನ ಹೊರಗಿನ ಯಾವ ಶತ್ರುಗಳಿಂದಲೂ ಸಂಭವಿಸಲಿಲ್ಲ. ಟಿಪ್ಪು ಕೊಡಗರನ್ನೆಲ್ಲ ಬೇಟೆಯಾಡಿ ಭಾಗಮಂಡಲದ ಹತ್ತಿರವಿರುವ ದೇವಟಿಪರಂಬುನಲ್ಲಿ ಒಟ್ಟುಗೂಡಿಸಿ ಸಾವಿರಾರು ಜನರನ್ನು ಶ್ರೀರಂಗಪಟ್ಟಣಕ್ಕೆ ಕೊಂಡೊಯ್ದು ಅವರನ್ನೆಲ್ಲ ಮತಾಂತರಗೊಳಿಸಿದನು. ಇದರಿಂದಾಗಿ ಕೊಡಗಿನಲ್ಲಿ ಭೂಮಿಯಲ್ಲವೂ ಪಾಳು ಬಿದ್ದಿತು. ಬ್ರಿಟಿಷ್ ಐತಿಹಾಸಿಕರು ಕೊಡವರ ವಿಷಯ ಪ್ರಸ್ತಾಪಿಸುತ್ತ ದಕ್ಷಿಣ ಭಾರತದಲ್ಲಿ ಬ್ರಾಹ್ಮಣರ ಪ್ರಭಾವಕ್ಕೆ ಒಳಗಾಗದ ಒಂದು ಜನಾಂಗವಿದ್ದರೆ ಅದು ಕೊಡವ ಜನಾಂಗವೆಂದು ಹೇಳಿರುತ್ತಾರೆ. ಕೊಡವರ ಮದುವೆ ಮುಂಜಿಗಳಲ್ಲಿ ಬ್ರಾಹ್ಮಣ ಪುರೋಹಿತರು ಯಾವ ಪ್ರಮುಖ ಪಾತ್ರವನ್ನು ವಹಿಸುವುದಿಲ್ಲ.

ಅವರ ಆಚಾರ–ವಿಚಾರಗಳಲ್ಲಿ ಸಹ ಬ್ರಾಹ್ಮಣರಿಗೆ ಯಾವ ಕೈವಾಡವೂ ಇಲ್ಲ. ಗ್ರಾಮಗಳ ದೇವಾಲಯಗಳಲ್ಲಿ ಅವರು ಆರ್ಚಕರಾಗಿರುತ್ತಾರೆ. ಇಲ್ಲಿ ಗ್ರಾಮಸ್ತರ ಮೇಲೆ ಅವರ ಪ್ರಭಾವವು ಕೆಲವು ಮಟ್ಟಿಗೆ ಇದ್ದೇ ಇದೆ. ದಕ್ಷಿಣ ಭಾರತದ ಮದರಾಸು, ಆಂಧ್ರ, ಕೇರಳ ಮೊದಲಾದ ಪ್ರಾಂತ್ಯಗಳಲ್ಲಿ ಬ್ರಾಹ್ಮಣರು ಬ್ರಾಹ್ಮಣೇತರರಿಗೆ ಕೊಡುತ್ತಿದ್ದ ಕಿರುಕುಳಕ್ಕೆ ಪ್ರತಿಕ್ರಿಯೆಯಾಗಿ ಅಲ್ಲಿ ಬ್ರಾಹ್ಮಣೇತರ ಪಕ್ಷವು ತಲೆದೋರಿತು. ಆದರೆ ಕೊಡಗಿನಲ್ಲಿ ಬ್ರಾಹ್ಮಣರೂ ಕೊಡವರೂ ಪರಸ್ಪರ ಅನ್ಯೋನ್ಯ ಭಾವದಿಂದ ವರ್ತಿಸುತ್ತಿರುವುದನ್ನು ಕಾಣುತ್ತಿರುವುದು ಶುಭ ಎಂದು ಹೇಳಬಹುದು. ಹೀಗೆ ಕೊಡಗು ವಿಶಿಷ್ಟ ರೀತಿಯ ಜನಾಂಗವನ್ನು ಹೊಂದಿದೆ ಅಷ್ಟೆ ಅಲ್ಲದೆ ಕೊಡಗಿನ ಹಲವಾರು ರೀತಿಯ ಹಬ್ಬಹರಿ ದಿನಗಳನ್ನು ಆಚರಿಸುತ್ತಿದ್ದರು. ಕಡಿದಾದ ಬೆಟ್ಟಗಳಿಂದಲೂ ಭಯಂಕರವಾದ ಅರಣ್ಯಗಳಿಂದಲೂ ಧಾರಾಳವಾದ ಮಳೆಯಿಂದಲೂ ಕೂಡಿದ ಈ ಪ್ರದೇಶದ ಜನರು ವ್ಯವಸಾಯದಲ್ಲಿ ಕೆಲವು ಸಂಪ್ರದಾಯದ ಹಬ್ಬಗಳನ್ನು ಆಚರಿಸುತ್ತಿದ್ದರು. ಹೊಸ ಭತ್ತ ಬಂದಾಗ 'ಹುತ್ತರಿ' ಎಂಬ ಹಬ್ಬ ಮಾಡುತ್ತಾರೆ. ಎಲ್ಲರೂ ಒಟ್ಟಿಗೆ ಸೇರಿ ಕುಣಿಯುವುದು ಜನರೆಲ್ಲರೂ ಅನಕ್ಷರಸ್ಥರಾಗಿದ್ದರು ಆಟ ಮತ್ತು ಬೇಟೆಯನ್ನು ಮಾಡುವುದರಲ್ಲಿ ಶುರರಾಗಿದ್ದರು. ಹಬ್ಬ, ಮದುವೆ, ಮುಂಜಿಗಳಲ್ಲಿ ಜಾನಪದ ಹಾಡುಗಳನ್ನು ಹಾಡುತ್ತ 'ಹುತ್ತರಿ'ಯಲ್ಲಿ ಕೋಲಾಟ್ ದೇವರ ಹಬ್ಬಗಳಲ್ಲಿ ಬೊಳುಕಾಟ್, ಪೀಲಿಯಾಟ್, ಕೊಂಬಾಟ್, ಮೊದಲಾದ ಅನೇಕ ತರದ ಕುಣಿತಗಳಲ್ಲಿ ಆಸಕ್ತರಾಗಿದ್ದರು. ಯುದ್ಧದಲ್ಲಿ ಧೀರರಾಗಿದ್ದರು ಸಾಯಂಕಾಲ ಕೆಲಸ

ಮುಗಿದ ನಂತರ ಜಾನಪದ ಹಾಡುಗಳನ್ನು ಹಾಡುತ್ತಿದ್ದರು. ಕೊಡವರು ಪ್ರಾಚೀನ ಕಾಲದಿಂದಲೂ ಈಶ್ವರ ದೇವನೇ ಮೂಲಾಧಾರವಾಗಿದ್ದಿತ್ತು. ಅವರ ಇಷ್ಟ ದೇವರು ಪ್ರತಿ ಹಬ್ಬದಲ್ಲಿಯೂ ಮೊದಲಿಗೆ ಈಶ್ವರನನ್ನು ಪ್ರಾರ್ಥಿಸಿ ಕುಣಿಯಲು ಆರಂಭಿಸುತ್ತಿದ್ದರು. ಹೆಂಗಸರು ತಾಳವನ್ನು ತೆಗೆದುಕೊಂಡು ಇನ್ನೊಂದು ಸ್ಥಳದಲ್ಲಿ ಉಮ್ಮತ ಪಾಟನ್ನು ಹಾಡುವರು. ಇವರ ಸಂಸ್ಕೃತಿ ಎಂದರೆ ಸಾಧಾರಣವಾಗಿ ಮದುವೆಯ ಎಲ್ಲಾ ಜನರಲ್ಲಿಯೂ ನಡೆಯುತ್ತದೆ.

ಆದರೆ ಕೊಡಗರಲ್ಲಿ ಹುಲಿಯನ್ನು ಗುಂಡಿಕ್ಕಿ ಕೊಂದವರಲ್ಲಿ ಮದುವೆಯಾದವನಿಗೆ ಮಾತ್ರ ಊರುಮಂದಿಯಲ್ಲಿ ಹುಲಿ ಮದುವೆಯು ಜರುಗುತ್ತದೆ. ಹುಲಿ ಮದುವೆ ಮಾಡಬೇಕು ಇದಕ್ಕೆ ಒಂದು ಪ್ರತ್ಯೇಕ ಹಾಡು ಇದೆ. ಗದ್ದೆಯನ್ನು ಉಳುವಾಗ ಮತ್ತು ಉಳುವವರು ಎತ್ತುಗಳ ಆಯಾಸವನ್ನು ಹೋಗಲಾಡಿಸುವ ಸಲುವಾಗಿ ಮಧುರವಾದ ಹಾಡನ್ನು ಹಾಡುವರು. ಆದ್ದರಿಂದ ನಮ್ಮ ಹಳೆಯ ಸಂಸ್ಕೃತಿ ಅಳಿಯದೆ–ಉಳಿಯಬಹುದೆಂಬ ವಿಶ್ವಾಸವು ನಮ್ಮ ಹೃದಯದಲ್ಲಿ ತುಂಬಿದೆ. ಹೀಗೆ ಹಾಡುಗಳನ್ನು ಹಾಡುವುದರ ಮೂಲಕ ತಮ್ಮ ಕೆಲಸ–ಕಾರ್ಯಗಳನ್ನು ಮುಗಿಸುತ್ತಿದ್ದರು. ಅಷ್ಟೆ ಅಲ್ಲದೆ ತಮ್ಮ ಜೀವನದಲ್ಲಿ ಯಾವ ರೀತಿ ಈ ಪ್ರದೇಶವನ್ನು ರೂಪಿಸಿಕೊಳ್ಳಬೇಕೆಂಬ, ಭೌಗೋಳಿಕವಾಗಿ ಹೇಗೆ ಭಿನ್ನವಾಗಿದೆ ಎಂದರೆ ಬೆಟ್ಟ–ಗುಡ್ಡಗಳಿಂದ ಕೂಡಿರುವುದು ಇದನ್ನು ಯಾವ ರೀತಿಯಲ್ಲಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಈಗ ಎಲ್ಲರಂತೆ ಮುಂದೆ ಬಂದಿದ್ದಾರೆ ಎಂಬುದಕ್ಕೆ ಈ ಮೇಲೆ ತಿಳಿಸಿದ ವಿಷಯದ ಮೂಲಕ ತಿಳಿದುಕೊಳ್ಳಬಹುದು.

ಚಿಕವೀರರಾಜೇಂದ್ರನ ಸ್ವಭಾವ ಹೇಗೆ ರೂಪುಗೊಂಡಿತು ಎನ್ನುವುದು ಕಾದಂಬರಿಕಾರರಿಗೆ ಕುತೂಹಲದ ವಿಷಯವಲ್ಲ. ಅವನ ದುಷ್ಟ ವೃತ್ತಿಗಳಲ್ಲಿ, ಅವನ ದುಷ್ಕಾರ್ಯ ಅದು ಹೇಗೆ ವ್ಯಕ್ತವಾಯಿತು ಹಾಗೆ ವ್ಯಕ್ತವಾಗಿ ತನ್ನ–ತನ್ನವರ ಹಾಗೂ ತನ್ನ ರಾಜ್ಯದ ಅವನತಿಗೆ ಹೇಗೆ ಕಾರಣವಾಯಿತು ಎನ್ನುವುದು ಅವರಿಗೆ ಮುಖ್ಯವಾಗಿ ಕಂಡಿದೆ. ನಡೆದ ಘಟನೆಗಳು ಹೀಗೆ ನಡೆದವು ಎಂದು ಚರಿತ್ರೆ ತಿಳಿಸುತ್ತದೆ. ಹೀಗೇಕೆ ನಡೆದವು ಅಥವಾ ಹೀಗೇಕೆ ನಡೆದಿರಬಹುದು ಎಂದು ಕಾದಂಬರಿಕಾರ ಕೇಳಿಕೊಳ್ಳುತ್ತಾನೆ. ನೇರವಾಗಿ ಹಾಗೆ ಕೇಳಿಕೊಂಡು ಉತ್ತರ ಹೇಳುವುದು ಕಲೆಯ ದಾರಿಯಲ್ಲ. ಕಥಾನಕದ ರಚನೆಯ ಹಿಂದಿನಿಂದ ಅಂಥ ಕೂತೂಹಲ ಕೆಲಸ ಮಾಡಿರುತ್ತದೆ. ಅಂಥ ರಚನೆಗೂ ಅವಕಾಶವಿಲ್ಲ.

ಚರಿತ್ರೆಯೇ ಕಥೆಯ ರಚನೆಯ ಹೊಣೆಯನ್ನು ಹೊತ್ತಿದೆ ಹಾಗಿರುವಾಗ ಕಾದಂಬರಿಕಾರನಿಗೆ ಉಳಿದ ಕೆಲಸವೆಂದರೆ ಪರಿಣಾಮ ಎದ್ದು ಕಾಣುವಂತೆ ಚರಿತ್ರೆ ಒದಗಿಸುವ ವಿವರಗಳನ್ನು ಒಂದು ಕ್ರಮದಲ್ಲಿ ನಿಲ್ಲಿಸಿ ಅವುಗಳಲ್ಲಿ ಅಡಗಿದ ಅನುಭವದ ಅರ್ಥವಂತಿಕೆ ಓದುಗನ ಮನಸ್ಸಿನಲ್ಲಿ ಬೆಳಗುವಂತೆ ಮಾಡುವುದು ಇಲ್ಲಿ ನಡೆಯುವುದೆಲ್ಲದಕ್ಕೂ ಒಂದಿಲ್ಲೊಂದು ರೀತಿಯಲ್ಲಿ ಚಿಕವೀರರಾಜೇಂದ್ರನೇ ಮೂಲ ಕಾರಣವಾಗಿರುವುದರಿಂದ

ಅವನ ದುಷ್ಕಾರ್ಯ ಪರಂಪರೆಯೇ ನಮಗೆ ಮುಖ್ಯ ಸಾಮಾಗ್ರಿಯಾಗುತ್ತದೆ. ವೀರರಾಜನ ದುಷ್ಕೃತ್ಯಗಳನ್ನು ಮೂರು ಬೇರೆ – ಬೇರೆಯಾದ ನೆಲೆಗಳಲ್ಲಿ ಕಂಡು ಅರ್ಥಿಯಿಸಿಕೊಳ್ಳಬಹುದು ಎಂದು ಕಾಣುತ್ತದೆ.

- ತನ್ನ ಕ್ರೌರ್ಯ ಕಾಮುಕತೆಗಳಿಂದ ತನ್ನ ಪ್ರಜೆಗಳ ಸಹಕಾರ ಸಹಾನುಭೂತಿ ವಿಶ್ವಾಸಗಳನ್ನು ಕಳೆದುಕೊಂಡು ಹೊಂಚು ಹಾಕಿದ್ದ ಸಮಯ ಸಾಧಕ ಪರಕೀಯರಿಗೆ ಆಕ್ರಮಣದ ಅವಕಾಶವನ್ನು ಒದಗಿಸಿಕೊಟ್ಟ ಎಂಬ ರಾಜಕೀಯ ಬೆಳವಣಿಗೆಗಳ ದೃಷ್ಟಿ.
- ವೀರರಾಜ ಒಂದು ಪಾಪ ಪರಂಪರೆಯ ಪ್ರತೀಕ. ಈ 'ಪರಂಪರೆ' ಆತನ ಜೀವನದಲ್ಲಿ ತನ್ನ
- ಪರಾಕಾಷ್ಟೆಯನ್ನು ಮುಟ್ಟಿ ತನ್ನ ವಿನಾಶಕ್ಕೆ ತಾನೇ ಕಾರಣವಾಯಿತು ಎಂಬ ನೈತಿಕ ದೃಷ್ಟಿ. ಅದರೆ
- ಈ ಪಾಪ ಪರಂಪರೆ ಮುಂದುವರಿದು ತನ್ನ ವಿನಾಶದೆಡೆಗೆ ಸಾಗುತ್ತಿದ್ದಂತೆಯೆ ಅದರ ಬೆಳವಣಿಗೆಯಲ್ಲಿ ಸಹಭಾಗಿಗಳಾಗಿದ್ದವರ ಜೊತೆಯಲ್ಲಿ ನಿರಪರಾಧಿಗಳಾಗಿದ್ದ ಹತ್ತಿರದವರನ್ನೂ ತನ್ನ ಆವರ್ತದಲ್ಲಿ ಸೆಳೆದುಕೊಂಡು ಅವರ ಪಾಲಿಗೆ ಬರಬಾರದಾಗಿದ್ದ ಕಷ್ಟಕ್ಕೆ ಗುರಿಮಾಡುತ್ತದೆ ಎಂಬ ಲೋಕ ಚರಿತದ ದೃಷ್ಟಿ.

ಈ ಮೂರರಲ್ಲಿ ಮೊದಲನೆಯದನ್ನು ಕುರಿತು ಕೆಲವು ಮಾತುಗಳನ್ನು ಹೇಳಿಯಾಗಿದೆ. ತನ್ನ ದುಷ್ಕೃತ್ಯಗಳಿಂದಾಗಿಯೇ ವೀರರಾಜ ತನ್ನ ಅರಸೊತ್ತಿಗೆಯನ್ನು ಹೇಗೆ ಕಳೆದುಕೊಂಡ ಎನ್ನುವುದನ್ನು ನೋಡಿದೆ. ಉಳಿದೆರಡು ದೃಷ್ಟಿಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕು. ಇಲ್ಲಿಯ ಕಥೆ ಮುಖ್ಯವಾಗಿ ವೀರರಾಜನ ಕಥೆಯಾಗಿದ್ದರೂ ಅದರಲ್ಲಿ ಉಳಿದವರೂ ತೊಡಕಿಕೊಂಡಿರುವುದರಿಂದ ಅವರ ಕಥೆಯೂ ಆಗಿದೆ ಎನ್ನುವುದು ಈ ಉಳಿದ ಎರಡು ದೃಷ್ಟಿಗಳಿಗೆ ಸಮರ್ಥನೆಯನ್ನು ಒದಗಿಸುತ್ತದೆ. ಚಿಕವೀರರಾಜೇಂದ್ರ ಕತೆಯಲ್ಲಿ ಈ ಪರಂಪರೆ ಹೇಗೆ ಅಭಿವ್ಯಕ್ತಗೊಂಡಿದೆ ಎಂದರೆ ಭಗವತಿ ಮತ್ತು ಲಿಂಗರಾಜನ ಸಂಬಂಧದಿಂದ ಗೊತ್ತಾಗುತ್ತದೆ. ಅಂದರೆ ಲಿಂಗರಾಜ ಹೇಳುವ ಮಾತು ನನ್ನ ಮಗನ್ನ ನಾನು ನೋಡಿಕೊಳ್ಳುತ್ತೇನೆ ಅದಕ್ಕೂ ನಿಮಗೂ ಯಾವ ರೀತಿಯ ಸಂಬಂಧವಿಲ್ಲವೆಂದು, ನೀವು ಈಗಲೇ ಬೇರೆ ಕಡೆಗೆ ಹೋಗು ಕೊಡಗಿನ ನೆಲ ದಾಟಿ ನಿಲ್ಲಬೇಕು. ನನ್ನ ಕೇಳದೇ ತಿರುಗಿ ಇಲ್ಲಿ ಹೆಜ್ಜೆ ಇಕ್ಕಿದರೆ ಮಗುವನ್ನು ಕೊಂದು ಹಾಕುವುದಾಗಿ ಕೈಗೆ ಆಣೆ ಹಾಕಿಸುತ್ತಾನೆ. ಇದು ಹಿಂದಿನ ಪರಂಪರೆ ಇದೇ ವಿಷಯ ಆತನ ಚಿಕವೀರರಾಜ "ಒಳ್ಳೆಯ ಮಾತಿನಲ್ಲಿ ದೇವಮ್ಮಾಜಿ, ಚೆನ್ನಬಸವಯ್ಯ ಇವರನ್ನ ಇಲ್ಲಿಗೆ ಕಳುಹಿಸಿ ಮಗುವನ್ನು ಅವರಿಗೆ ಕೊಡುತ್ತೇನೆ, ಕಳುಹಿಸಲಿಲ್ಲ ಆ ಮಗುವಿನ ಉಸಿರನ್ನು ತೆಗೆಯುತ್ತೇನೆ ಜೋಕೆ'ಎಂದು ಮಗುವನ್ನು ಅವರ ತಂದೆ – ತಾಯಿಗಳಿಗೆ ಒಪ್ಪಿಸಬೇಕೆಂದು ರೆಸಿಡೆಂಟ್ ಬರೆದ ಕಾಗದಕ್ಕೆ ಉತ್ತರ ಬರೆಯುತ್ತಾನೆ. ತನಗೆ ಹುಟ್ಟಿದ ಮಗುವಿನ ವಿಚಾರದಲ್ಲಿ ಅಂಥ ಮಾತುಗಳನ್ನು ಹೇಳಬಲ್ಲ ತಂದೆಯ ಮಗ ತಂಗಿಯ ಮಗುವಿನ ವಿಚಾರದಲ್ಲಿ ಅಂಥ ಮಾತುಗಳನ್ನು ಹೇಳುವುದರಲ್ಲಿ ಆಶ್ಚರ್ಯವಿಲ್ಲ (ಶ್ರೀನಿವಾಸರ

ಕಾದಂಬರಿಗಳಲ್ಲಿ ಜೀವನ ದರ್ಶನ ಪುಟ 62 ರಿಂದ 67 ರವರೆಗೆ) ಮಾತ್ರವಲ್ಲ ಒಂದು ಬಗೆಯ ಕ್ರೂರವಾದ ಔಚಿತ್ಯವಿದೆ ಎಂದೆನಿಸುತ್ತದೆ."[8] ಎಳೆ ಮಗುವಿನ ಕಾಲನ್ನು ತಿರುಗಿಸಿ ಒಬ್ಬ ಅದನ್ನು ಊನವಾಗಿಸಿದರೆ, "ನನ್ನ ಮಗನ್ನ ನಾನು ನೋಡಿಕೊಳ್ಳುತ್ತೇನೆ.ಅದಕ್ಕೂ ನಿಮಗೂ ಸಂಬಂಧವಿಲ್ಲ. ನೀವು ಈಗಲೇ ನೇರ ಹೋಗಬೇಕು. ಕೊಡಗಿನ ನೆಲ ನಿಲ್ಲಬೇಕು.ನನ್ನ ಕೇಳದೇ ತಿರುಗಿ ಇಲ್ಲಿ ಹೆಜ್ಜೆ ಇಕ್ಕದಿರಿ.ಮಗುವನ್ನ ಮಗುವನ್ನ ಕೊಂದು ಹೆಣಾನ ನಮ್ಮ ಕೈಗೆ ಇಕುತ್ತೇನೆ ಜೋಕೆ"[9] ಎಂದು ಭಗವತಿ ಮತ್ತು ತಾಯಿಗೆ ಲಿಂಗರಾಜ ಎದರಿಸಿದ ರೀತಿ. ಆತನ ಮಗ ಚಿಕವೀರ ರಾಜೇಂದ್ರ "ಒಳ್ಳೆಯ ಮಾತಿನಲ್ಲಿ ದೇವಮ್ಮಾಜಿ, ಚನ್ನಬಸವಯ್ಯ ಇವರನ್ನು ಇಲ್ಲಿಗೆ ಕಳುಹಿಸಿ, ಮಗುವನ್ನು ಅವರಿಗೆ ಕೊಡುತ್ತೇನೆ.ಕಳುಹಿಸಲ್ಲಿಲ್ಲ, ಆ ಮಗುವಿನ ಉಸಿರನ್ನ ತೆಗೆಯುತ್ತೇನೆ. ಜೋಕೆ"[10] ಎಂದು ಮಗುವನ್ನು ಅದರ ತಂದೆ ತಾಯಿಗೆ ಒಪ್ಪಿಸಬೇಕೆದು ರೆಸಿಡೆಂಟ್ ಬರೆದ ಕಾಗದಕ್ಕೆ ಉತ್ತರ ಬರೆಯುತ್ತಾನೆ. ತನ್ನಗೆ ಹುಟ್ಟಿದ ಮಗುವಿನ ವಿಚಾರದಲ್ಲಿ ಅಂಥ ಮಾತುಗಳನ್ನು ಹೇಳಬಲ್ಲ ತಂದೆಯ ಮಗ ತಂಗಿಯ ಮಗುವಿನ ವಿಚಾರದಲ್ಲಿ ಅಂಥ ಮಾತುಗಳನ್ನು ಹೇಳುವುದು ಆಶ್ಚರ್ಯವಲ್ಲ. ಮಾತ್ರವಲ್ಲ. ಒಂದು ಬಗ್ಗೆಯ ಕ್ರೂರವಾದ ಔಚಿತ್ಯವಿದೆ ಎಂದೆನಿಸುತ್ತದೆ. ಎಳೆಯ ಮಗುವಿನ ಕಾಲನ್ನು ತಿರುಗಿಸಿ ಒಬ್ಬ ಅದನ್ನು ಊನವಾಗಿಸಿದರೆ ಇನ್ನೊಬ್ಬ ಮಲಗಿ ನಿದ್ರಿಸುತ್ತಿದ್ದ ಮಗುವನ್ನು ಕೊಂದೇ ಬಿಡುತ್ತಾನೆ. ಪಾಪ ಪರಂಪರೆ ತದ್ವತ್ತಾಗಿ ಮುಂದುವರಿದದ್ದನ್ನು ಇಂಥ ಸಂಗತಿಗಳಲ್ಲಿ ಕಾಣಬಹುದು. ವೀರರಾಜನ ಇನ್ನೊಂದು ಪಾಪ ಪರಂಪರೆಯ ಪ್ರತೀಕ ಎಂದರೆ ರಾಣಿ ಗೌರಮ್ಮನನ್ನು ವೀರರಾಜ ಹೀನಾಯವಾಗಿ ಆಡಿದಾಗ ಬೋಪಣ್ಣ 'ಆ ಮನೆಗೆ ಆ ನಾಲಗೆ' ಎನ್ನುತ್ತಾನೆ. ಬೇಸರದಲ್ಲಿ ಆಡಿದ ಮಾತು ಅದಾದರೂ ಅದರಲ್ಲಿ ಹಿಂದಿನ ಪರಂಪರೆ ಅಡಗಿದೆ. ಕ್ರೌರ್ಯದಲ್ಲಿ, ಕಾಮುಕತೆಯಲ್ಲಿ ವೀರರಾಜನ ತಂದೆ ಲಿಂಗರಾಜ ಕಡಿಮೆಯವನಾಗಿರಲಿಲ್ಲ. ಆತ ದೊಡ್ಡ ವೀರರಾಜನ ನಂತರ ಪಟ್ಟಕ್ಕೆ ಬಂದಿದ್ದ ದೇವಮ್ಮಾಜಿಯಿಂದ ಅಧಿಕಾರವನ್ನು ಹೇಗೆ ಆಕ್ರಮಿಸಿದ ಎಂಬ ಕಥೆಯನ್ನು ಅಪ್ಪಾಜಿ ಮಗ ವೀರಣ್ಣನಿಗೆ ಹೇಳುತ್ತಾನೆ. ಆಕೆಯನ್ನು ಕೊಲೆ ಮಾಡಿದನೆಂಬ ಮಾತು ಇತ್ತು.

ಮೊದಲು ಮಂತ್ರಿಯಾಗಿ ಮುಂದೆ ತಾನೇ ಕೊಟ್ಟ ವಚನವನ್ನು ಮುರಿದು ಅರಸನಾಗುತ್ತಾನೆ. ಮಂತ್ರಿಯಾಗಲು ಸಹಾಯ ಮಾಡಿದ ಕಾರಿಯಪ್ಪ ತಾನು ಅರಸನಾಗುವುದನ್ನು ಒಪ್ಪದಿದ್ದಾಗ ಆತನ ಮೇಲೆ ಸುಳ್ಳು ಆಪಾದನೆಯನ್ನು ಹೊರೆಸಿ ಶೂಲಕ್ಕೇರಿಸುತ್ತಾನೆ. ಆತನ ಹೆಂಡತಿಯನ್ನು ಹೊರಹಾಕಿ ಉಪವಾಸ ಸಾಯುವಂತೆ ಮಾಡುತ್ತಾನೆ. ದೀಕ್ಷಿತನ ತಮ್ಮನಿಂದ ಅರಮನೆಯ ಗಾಯಕಿಯೊಬ್ಬಳಲ್ಲಿ ಹುಟ್ಟಿ ಬೆಳೆದ ಭಗವತಿಯನ್ನು ತನ್ನ ಕಾಮಕ್ಕೆ ಬಲಿಯಾಗಿಸುತ್ತಾನೆ.

ಚಿಕವೀರರಾಜೇಂದ್ರ ಒಂದು ಐತಿಹಾಸಿಕ ಕಾದಂಬರಿ ಕಥೆ ಇತಿಹಾಸದ್ದಾದರೂ ಕಥಾದ್ರವ್ಯ ವರ್ತಮಾನದ್ದೂ ಹೌದು ಯಾವುದೇ ಕೃತಿಯಲ್ಲಿ ಕಥಾ ಬೀಜ ನಿತ್ಯ ಸತ್ವದ ಭೂಮಿಕೆಯಲ್ಲಿ ಬೇರೂರಿ ಬೆಳೆದಾಗ

ಮಾತ್ರ ಅದು ಸಾರ್ವಕಾಲಿಕ ಶಕ್ತಿ ಸಂಪನ್ನತೆಯಿಂದ ಕಂಗೊಳಿಸುತ್ತದೆ. ಐತಿಹಾಸಿಕ ವ್ಯಕ್ತಿಯೊಬ್ಬನ ಸುತ್ತ ಅವನ ಬದುಕಿನ ಹೂರಣ ತುಂಬುವಾಗ ಸಾಹಿತಿ ಕೇವಲ ಇತಿಹಾಸ ನಿರೂಪಕನಾಗಲಾರ, ಆಗಬಾರದು. ಇತಿಹಾಸವೇನಿದ್ದರೂ ಇಲ್ಲಿ ಎಳೆ ಅಂದರೆ ಕೃತಿಯ ಹಾಸು ಸಾಹಿತಿಯ ಜೀವನ ದರ್ಶನ ನಿಜವಾಗಿಯೂ ಈ ಹಾಸನ್ನು ನೆಯ್ದುಕೊಳ್ಳುವ ಹೊಕ್ಕು ಸಾಹಿತಿ ತನ್ನ ಭಾವನೆ ಆಲೋಚನೆಗಳ ಹೊಳಹಿಗೆ ಪೂರಕವಾಗಿ ಕಥೆಯಲ್ಲಿ ಹಲವು ಘಟನೆಗಳನ್ನು ಹಲವು ಪಾತ್ರಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಇದು ಅನಿವಾರ್ಯ ಆದರೆ ಈ ಅನಿವಾರ್ಯ ಯಾವ ಕಾರಣದಲ್ಲಿಯೂ ಇತಿಹಾಸಕ್ಕೆ ಅಪಚಾರ ಮಾಡಿದಂತೆ ಬರಬಾರದು. ಈ ಎಲ್ಲ ಹಿನ್ನೆಲೆಯಲ್ಲಿ 'ಚಿಕವೀರರಾಜೇಂದ್ರ' ಕೃತಿಯನ್ನು ಪರಿಭಾವಿಸುವುದು ಸೂಕ್ತ. ಕೊಡಗಿನ ದೊರೆಯಾದ ಚಿಕವೀರ ಒಬ್ಬ ವೀರಶೈವ ಆದರೆ ಈ ಕೃತಿಯಲ್ಲಿ ಇವನ ನಡವಳಿಕೆಯ ಆಚಾರ-ವಿಚಾರದ ಯಾವ ಸಂದರ್ಭದಲ್ಲಿಯೂ ಈ ಧರ್ಮದ ನೆರಳೂ ಸುಳಿದಿಲ್ಲ. ಇತಿಹಾಸದಲ್ಲಿ ಅಷ್ಟಾಗಿ ಒಳ್ಳೆಯ ಹೆಸರನ್ನೇನೂ ಮಾಡದಿದ್ದ ಇವನು ಹದಿನಾಲ್ಕು ವರ್ಷಗಳ ಕಾಲ ಕೊಡಗನ್ನು ಆಳಿದ್ದ. ಲೇಖಕರೇ ಹೇಳುವಂತೆ ಕೊಡಗಿನ ಈ ರಾಜವಂಶದಲ್ಲಿ ಇವನು ಕೊನೆಯ ಅರಸು ಇವನ ಆಳ್ವಿಕೆಯ ಹದಿನಾಲ್ಕನೆಯ ವರ್ಷದಲ್ಲಿ ಕೊಡಗು ಆಂಗ್ಲರ ಕೈವಶವಾಯಿತು.

ಚಿಕವೀರರಾಜೇಂದ್ರ ವಂಶಕ್ಕೆ ಕೀರ್ತಿ ತರಲಿಲ್ಲ ಅವನ ಕೊನೆಯ ವರ್ಷದ ಆಳ್ವಿಕೆ ನಮ್ಮ ಕಥೆಯ ವಸ್ತು ಅಂದಾಗ ಈ ಕೃತಿಯಲ್ಲಿ ಅರಳಿರುವ ಕಥೆಗೆ ಒಂದು ಮಿತಿ ಇದೆ. ಕಾದಂಬರಿಯಲ್ಲಿ ಒಡಮೂಡಿರುವಂತೆ ಚಿಕವೀರರಾಜ ಒಬ್ಬ ಕಾಮುಕ, ದುರಹಂಕಾರಿ, ರಾಜನಾಗಿ ಪ್ರಜಾಚಿಂತನೆಯಲ್ಲಿ ನಿರತನಾಗಿರುವುದಕ್ಕಿಂತ ತನ್ನ ತೆವಲು ತೀಟೆಗಳಲ್ಲಿಯೇ ಮುಳುಗಿ ಆವ್ಯಸನಗಳು ತಂದ ದೌರ್ಬಲ್ಯದಲ್ಲಿ ತಾನೂ ಹಾಳಾಗುತ್ತ ತನ್ನ ರಾಜ್ಯವನ್ನು ಅದ:ಪತನಕ್ಕೆ ನೂಕುತ್ತಾನೆ. ಲೇಖಕರು ಈ ಅದ:ಪತನದ ಕೊನೆಯ ಚಿತ್ರಣವನ್ನು ಮಾತ್ರ ಕೊಡದೆ ಅದಕ್ಕೆ ಹಿನ್ನೆಲೆಯಾಗಿರುವ ಅವನ ಬಾಲ್ಯ ಯೌವನಗಳ ಜೀವನ ಚಿತ್ರಣವನ್ನು ಅಗತ್ಯವಾದಷ್ಟು ವಿವರಗಳಲ್ಲಿಯೇಒಡಮೂಡಿ ಬಂದಿದೆ. ಚಿಕವೀರರಾಜ ದೈಹಿಕವಾಗಿ ಮಾನಸಿಕವಾಗಿ ಈಗಾಗಲೇ ರೋಗಗ್ರಸ್ತನಾಗಿದ್ದಾನೆ. ಇದಕ್ಕೆ ಕಾರಣ ನೀತಿ ನಿಯಮಗಳ ನಿಯಂತ್ರಣವಿಲ್ಲದ ಜೀವನ ರೀತಿ ಕಥಾಮುಖದಲ್ಲಿಯೇ ವರ್ಣಿತವಾಗಿರುವ ದೇವಮ್ಮಾಜಿಯ ಘಟನೆ ಮತ್ತು ತನ್ನ ಹೆಂಡತಿ ಗೌರಮ್ಮಾಜಿಯನ್ನು ಕುರಿತು ಅರಮನೆಯಲ್ಲಿ ಬೋಪಣ್ಣ ಮತ್ತು ಅಯ್ಯನವರ ಎದುರು ಆಡಿದ ಅವ್ಯಾಚ ವಿಪರೀತಗಳು ಇವನ ದು:ಸ್ಥಿತಿ-ದೌರ್ಬಲ್ಯಗಳನ್ನು ಶಕ್ತನಾಗಿ ಅಭಿವ್ಯಂಜಿಸಿವೆ. ದೇವಮ್ಮಾಜಿ ಚಿಕವೀರರಾಜನಿಗೆ ತಂಗಿಯಾಗಿದ್ದರೂ ಇವನು ರಾಜವಂಶದ ಘನತೆ ಗೌರವಗಳನ್ನು ಆಲೋಚಿಸದೆ ಅವಳನ್ನು ಕುಂಟು ಬಸವನ ತೊಡೆ ಏರಿ ಕುಳಿತುಕೊಳ್ಳುವಂತೆ ಹೇಳುತ್ತಾನೆ. ಈ ವರ್ತನೆಗೆ ಕಾರಣ ದ್ವೇಷ ಸೇಡು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯಿಸಿದಾಗಲೂ ಈ ಪಾತ್ರದ ವಿಕೃತ ನಡವಳಿಕೆ ಪರಿಸರ ಜನ್ಯ ತಬ್ಬಲಿ ಬೀಡಾಡಿ ಸ್ಥಿತಿಗಳೇ ಕಾರಣವೆಂಬುದು ಪಾತ್ರ ಬೆಳೆವಣಿಗೆಯ ಹೂರಣವಾಗಿದೆ.

ವರ್ತಮಾನದ ಬದುಕಿನಲ್ಲಿಯೂ ಎಷ್ಟೋ ಶ್ರೀಮಂತರ ರಾಜಕಾರಿಣಿಗಳ ಅಧಿಕಾರಿಗಳ ಮಕ್ಕಳು ಅವಜ್ಞಾಗತಿ ಬೀಡಾಡಿದ ಸ್ಥಿತಿ ಕಾರಣದಿಂದಾಗಿ ವಿಕೃತ ಸ್ವಭಾವಿಗಳಾಗಿ ಸಮಾಜ ಕಂಟಕರಾಗುತ್ತಿರುವುದು ನಮ್ಮ ಕಣ್ಣೆದುರಿನ ಸತ್ಯ. ತಂದೆ ಲಿಂಗರಾಜ ತನ್ನ ಅಣ್ಣನ ಬಗೆಗೆ ಆಡುತ್ತಿದ್ದ ಆ ಸ್ನೇಹದ ನುಡಿಗಳು ನಡೆಸುತ್ತಿದ್ದ ಪಿತೂರಿ ಮಗ ವೀರರಾಜನ ಮನೋಧರ್ಮ ರೂಪಣದ ಮೇಲೆ ಸಹಜ ಪರಿಣಾಮಗಳಾಗಿವೆ. ಕುಂಟ ಬಸವನ ಸಹವಾಸದಲ್ಲಿ ಅವನು ಕಾಣುತ್ತಿದ್ದ ಪ್ರಾಣಿ ಸಹಜ ಕಾಮ ಪ್ರಪಂಚ ಇವನ ವಿಕೃತ ನಡವಳಿಕೆಗೆ ಗರ್ಭಾಂಕುರವಾಗಿದೆ. "ಅವಿವೇಕದ ದುರಾಚಾರದ ಮನಸ್ಸನ್ನು ದತ್ತವಾದ ರಾಜತ್ವ ದುರಹಂಕಾರಕ್ಕೇರಿಸಿದೆ. ಆದರೆ ಎಂಥ ಪಾಪಿಯ ಹೃದಯದಲ್ಲಿಯೂ ಪ್ರೀತಿಯ ಸೆಲೆ ಅವ್ಯಕ್ತವಾಗಿಯಾದರೂ ಜೀವಂತವಾಗಿರುತ್ತದೆ. ಇನ್ನೊಂದು ವಿಷಯವನ್ನು ನಾವು ಇಲ್ಲಿ ನೆನೆಯಬೇಕು. ವೀರರಾಜನನ್ನು ಮಾಸ್ತಿಯವರು ಒಬ್ಬ ನರಾಧಮನನ್ನಾಗಿ ಕಂಡಿದ್ದರೂ ಆ ಅಧಮ ಒಬ್ಬ ನರ ಎನ್ನುವುದನ್ನು ಮರೆತಿಲ್ಲ ಎಂಥ ದುಷ್ಟನಾದರೂ (ಚಿಕವೀರರಾಜೇಂದ್ರದಲ್ಲಿ ಪಾತ್ರ ಚಿತ್ರಣ ಪುಟ 618 ರಿಂದ 619) ಆತ ಒಬ್ಬ ಮನುಷ್ಯ ಎನ್ನುವುದನ್ನು ಸೂಚಿಸುವುದಕ್ಕೆಂದೇ ಆತನಲ್ಲಿಯ ಮಾನವೀಯಾಂಶಗಳ ಕಡೆಗೂ ನಮ್ಮ ಗಮನ ಸೆಳೆಯುತ್ತದೆ."[11] ಏಕೆಂದರೆ ಸ್ವಾರ್ಥ ಹಾಗೂ ಅಹಂಕಾರ ಮನುಷ್ಯನ ಸಹಜ ಗುಣಗಳು ಅವು ವೀರರಾಜನಲ್ಲಿ ಅತಿಯಾಗಿ ಬೆಳೆದು ಆತನನ್ನು ಮನುಷ್ಯನನ್ನಾಗಿ ಮಾಡಲು ತನ್ನ ಮಗಳು ಪುಟ್ಟಮ್ಮಾಜಿ ಮತ್ತು ಅವನ ಹೆಂಡತಿ ಗೌರಮ್ಮ ಪ್ರಯತ್ನಿಸುತ್ತಾರೆ. ಅಧಿಕಾರದಿಂದ ಕೆಳಗಿಳಿಯಲ್ಲೂ ಒಪ್ಪದ ರಾಜ ಅಧಿಕಾರ ತನ್ನ ಮಗಳಿಗೆ ಬರುವುದಾದರೆ ಗಾದಿಯಿಂದ ಕೆಳಗಿಳಿಯುವುದಾಗಿ ಹೇಳುತ್ತಾನೆ. ಜೊತೆಗೆ ಕೈತಪ್ಪಿ ಹೋದ ಅರಸೊತ್ತಿಗೆ ಮತ್ತೆ ಬರುವುದೆಂಬ ಆಸೆಯಿಂದ ತನ್ನ ಮಗಳನ್ನು ಮತಾಂತರ ಮಾಡಿಸುತ್ತಾನೆ. ಹೀಗೆ ಕೊಡಗಿನ ಇತಿಹಾಸ ಚಿಕವೀರರಾಜೇಂದ್ರನ ಸ್ಥಾನದಿಂದ ಕಾದಂಬರಿಯಲ್ಲಿ ಅದು ಹೇಗೆ ಮೂಡಿ ಬಂದಿದೆ ಎಂಬುದನ್ನು ಈ ಮೇಲೆ ತಿಳಿಸಿದ ವಿಷಯದಿಂದ ತಿಳಿದುಕೊಳ್ಳಬಹುದು.

ಅಧ್ಯಾಯ-3

ಈ ಕಾದಂಬರಿಯಲ್ಲಿ ಹಳೆಯ ಮೈಸೂರು ಪ್ರಾಂತ್ಯ ಹಾಗೂ ಕೊಡಗು ಪ್ರದೇಶದ ಸಂಬಂಧಗಳು.

ಈ ಕಾದಂಬರಿಯಲ್ಲಿ ಹಳೆಯ ಮೈಸೂರು ಪ್ರಾಂತ್ಯ ಹಾಗೂ ಕೊಡಗು ಪ್ರದೇಶದ ಸಂಬಂಧವೆಂದರೆ ನಾಯಕರ ಆಳ್ವಿಕೆ ನಿರಾತಂಕವಾಗಿ ಮುಂದುವರಿಯಲಿಲ್ಲ. 17ನೇ ಶತಮಾನದಲ್ಲಿ ಇಕ್ಕೇರಿ ರಾಜ ವಂಶಕ್ಕೆ ಸೇರಿದ ರಾಜಕುಮಾರನೊಬ್ಬನು ಜಂಗಮವೇಶದಲ್ಲಿ ಕೊಡಗಿಗೆ ಬಂದನು. ಆತನು ಮಡಕೇರಿಗೆ ಐದು ಮೈಲಿ ಅಂತರದಲ್ಲಿ ಇರುವ ಹಾಲೇರಿಯಲ್ಲಿ ನೆಲೆಸಿ ಅಲ್ಲಿ ಒಂದು ದೊಡ್ಡ ಮನೆಯನ್ನು ಕಟ್ಟಿಸಿದನು. ಆತನೇ ಹಾಲೇರಿ ವಂಶದ ಮೂಲ ಪುರುಷನೆನಿಸಿದ ವೀರರಾಜ. ವೀರರಾಜನು ದಳವೊಂದನ್ನು ಕಟ್ಟಿ ಹಾಲೇರಿ ನಾಡನ್ನು ತನ್ನ ಅಂಕಿತಕ್ಕೆ ತಂದುಕೊಂಡನು. ಅನಂತರ ಪಾಳೆಯಗಾರರನ್ನೆಲ್ಲಾ ಬಗ್ಗು ಬಡಿದು ಕೊಡಗನ್ನೆಲ್ಲಾ ತನ್ನ ವಶಪಡಿಸಿಕೊಂಡು ಅಧಿಕಾರ ಸ್ಥಾಪಿಸಿದನು.ಹಾಲೇರಿ ವಂಶದ ಅರಸರು ಎರಡು ಶತಮಾನ ಕಾಲ ಕೊಡಗನ್ನು ಆಳಿದರು. ಮೂರನೆಯ ಅರಸನಾದ ಮುದ್ದುರಾಜನು ಮಡಕೇರಿಯಲ್ಲಿ ಒಂದು ಕೋಟೆಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಮುದ್ದುರಾಜನ ಕೇರಿ ಎಂಬ ಹೆಸರೇ ಕಾಲಾಂತರದಲ್ಲಿ ರೂಪಾಂತರ ಹೊಂದಿ ಮಡಕೇರಿ ಆಯಿತೆಂದು ಅಭಿಪ್ರಾಯ ಪಡಬಹುದು.

ನಾಲ್ಕನೆಯ ಅರಸನಾದ ಸಿಂಬಾಯಿ ದೊಡ್ಡವೀರಪ್ಪನು ಸಾಹಸಿ ಮತ್ತು ಪರಾಕ್ರಮಿ. ಅವನು ಕೇರಳದ ಕೋಟ್ಟೆಯಂ ಸಂಸ್ಥಾನದ ಅರಸನಾದ ವೀರವರ್ಮನನ್ನು ರಣಕಣದಲ್ಲಿ ಎದುರಿಸಿ ಯಮ ಸದನಕ್ಕೆ ಅಟ್ಟಿದನು. ಮೈಸೂರಿನ ಚಿಕ್ಕದೇವರಾಜ ಒಡೆಯರನ್ನು ಬಾಳೆಲೆ ಯುದ್ದದಲ್ಲಿ ಸೋಲಿಸಿದನು. ಇಕ್ಕೇರಿಯ ಸೋಮಶೇಖರನಾಯಕನೊಡನೆ ಮೈತ್ರಿಯನ್ನು ಸಾಧಿಸಿದನು. ಕೊಡಗಿನ ಮೊದಲನೆಯ ಲಿಂಗರಾಜನು ಮರಣ ಹೊಂದಿದಾಗ ಅವನ ಮಕ್ಕಳು ಇನ್ನೂ ಬಾಲಕರಾಗಿದ್ದರು. ಆಗ ಮೈಸೂರಿನಲ್ಲಿ ಹೈದರಾಲಿಯು ಪ್ರಾಬಲ್ಯವನ್ನು ಹೊಂದಿದ್ದನು. ಕೊಡಗನ್ನು ವಶಪಡಿಸಿಕೊಳ್ಳಬೇಕೆಂಬುದು ಈ ಸಾಹಸಿಯ ಆಕಾಂಕ್ಷೆಯಾಗಿತ್ತು. ಆದುದರಿಂದ ಅವನು ದಂಡೆತ್ತಿ ಬಂದು ಕೊಡಗನ್ನು ವಶಪಡಿಸಿಕೊಂಡನು. ರಾಜಕುಮಾರರನ್ನು ಅರಕಲಗೂಡಿನಲ್ಲಿ ಸೆರೆಯಲ್ಲಿಟ್ಟನು ಆದರೆ ಸ್ವಾತಂತ್ರ್ಯ ಪ್ರಿಯರಾದ ಕೊಡಗಿನ ಜನರು ಹೈದರನ ಸೇನೆಯನ್ನು ಹೊಡೆದೋಡಿಸಿ ಸ್ವತಂತ್ರರಾದರು.

ಹೈದರನು ಮರಣ ಹೊಂದಿದಾಗ ಟಿಪ್ಪು ಸುಲ್ತಾನನು ಕೊಡಗನ್ನು ವಶಪಡಿಸಿಕೊಳ್ಳಲು ಹದಿನೈದು ಸಾವಿರ ಸೈನಿಕರುಳ್ಳ ಒಂದು ಪಡೆಯನ್ನು ಕೊಡಗಿಗೆ ಕಳುಹಿಸಿದನು. ಆದರೆ ಕೊಡಗಿನ ವೀರರು ಉಲುಗುಲಿ ಕದನದಲ್ಲಿ ಈ ದೊಡ್ಡ ಪಡೆಯನ್ನು ಸೋಲಿಸಿ ಓಡಿಸಿದರು. ಈ ಸೋಲಿನಿಂದ ಕುಪಿತನಾದ ಟಿಪ್ಪು ಸುಲ್ತಾನನು ತಾನೇ ದಂಡನ್ನು ತೆಗೆದುಕೊಂಡು ಕೊಡಗಿಗೆ ಬಂದನು.ಅವನು ಕೊಡಗಿನ ನಾಯಕರೊಡನೆ ಮಾತುಕತೆ ನಡೆಸಿ ಅವರು ತನ್ನ ಆಳ್ವಿಕೆಯನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಜನರು ಅವನ ಸವಿಮಾತುಗಳಿಗೆ ಮರುಳಾದರು. ಅವನು ಭಾಗಮಂಡಲದ ಹತ್ತಿರ ಇರುವ ದೇವಟು ಪರಂಬಿಗೆ ಕೊಡಗರನ್ನೆಲ್ಲಾ ಪತ್ನಿ ಪುತ್ರರೊಡನೆ

ಬರಮಾಡಿಕೊಂಡನು. ಅಲ್ಲಿ ನೆರೆದ ಸಾವಿರಾರು ಸಂಖ್ಯೆಯ ಜನರನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿದನು. ಕೊಡಗಿನ ಜನರು ಟಿಪ್ಪು ಸುಲ್ತಾನನ ದ್ರೋಹದಿಂದ ರೊಚಿಗೆದ್ದರು. ಟಿಪ್ಪು ಸುಲ್ತಾನನು ಮರಳಿದೊಡನೆಯೇ ಜನರೆಲ್ಲ ದಂಗೆಯೆದ್ದು ಟಿಪ್ಪು ಸುಲ್ತಾನನು ರಕ್ಷಣೆಗೆಂದು ಇರಿಸಿದ್ದ ದಂಡನ್ನು ಓಡಿಸಿದರು ನಾಡಿನಲ್ಲಿ ಅರಾಜಕತೆ ಪಸರಿಸಿತು. ಈ ಅವಸರದಲ್ಲಿ ಪಿರಿಯಾಪಟ್ಟಣದ ಸೆರೆಮನೆಯಲ್ಲಿದ ದೊಡ್ಡ ವೀರರಾಜನು (1780–1809) ತನ್ನ ಸೋದರರೊಡನೆ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದನು. ಟಿಪ್ಪುವಿನ ವಿರುದ್ಧ ಹೋರಾಡುವುದರಲ್ಲಿ ಜನತೆಯ ನಾಯಕತ್ವವನ್ನು ವಹಿಸಿದನು. ಈಸ್ಟ್ ಇಂಡಿಯಾ ಕಂಪನಿಯವರು ಟಿಪ್ಪುವನ್ನು ಸೋಲಿಸಿ ಆತನ ರಾಜ್ಯವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಅವರು ದೊಡ್ಡ ವೀರರಾಜನ ಸಹಾಯ ಅವಶ್ಯಕವೆಂದು ತಿಳಿಸಿದರು ದೊಡ್ಡ ವೀರರಾಜನು ಟಿಪ್ಪುವಿನಂತಹ ಪ್ರಬಲ ಶತ್ರುವಿನಿಂದ ತನ್ನ ಉಳಿಸಿಕೊಳ್ಳಬೇಕಾದರೆ ಇಂಗ್ಲೀಷರ ಸಹಾಯ ಹಸ್ತ ಅಗತ್ಯವೆಂದು ಮನಗಂಡನು. ಆದುದರಿಂದ ಅವನು ಮೂರು ಮತ್ತು ನಾಲ್ಕನೆಯ ಮೈಸೂರು ಯುದ್ಧಗಳಲ್ಲಿ ಇಂಗ್ಲೀಷರಿಗೆ ಬಹು ವಿಧವಾದ ಸಹಾಯಗಳನ್ನು ಮಾಡಿದನು.

ದೊಡ್ಡ ವೀರರಾಜನು ಕೊನೆಯ ತನಕ ಇಂಗ್ಲೀಷರೊಡನೆ ಮೈತ್ರಿಯನ್ನು ಉಳಿಸಿಕೊಂಡನು. ಅವನು ಅವನ ಪಟ್ಟದರಾಣಿಯಾದ ಮಹಾದೇವಮ್ಮಾಜಿಯ ನೆನಪಿಗೋಸ್ಕರ ಮಡಿಕೇರಿಯಲ್ಲಿ ಮಹಾದೇವಪೇಟೆ ಕಟ್ಟಿಸಿದನು. ದೊಡ್ಡ ವೀರರಾಜನ ಅನಂತರ ಅವನ ಸೋದರ ಎರಡನೆ ಲಿಂಗರಾಜನು (1811–1820) ಕೊಡಗಿನ ಅರಸನಾದನು. ಲಿಂಗರಾಜನ ಮಗನಾದ ಚಿಕವೀರರಾಜನು (1820–1834) ತರುಣನಾದುದರಿಂದ ದುಡುಕು ಸ್ವಭಾವದವನಾಗಿದ್ದನು. ಅವನಿಗೆ ಸಲಹೆ ಕೊಡಲು ಕುಂಟ ಬಸವನೆಂಬ ದಿವಾನನು ಸೇರಿಕೊಂಡನು. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು ಅರಸನ ಅತಿಥಿಗಳಾಗಿ ಬೇಟೆಗೆಂದು ಆಗಾಗ ಕೊಡಗಿಗೆ ಬರುತ್ತಿದ್ದರು. ಕೊಡಗಿನ ಹಿತಕರವಾದ ತಂಪು ಹವೆ ಕಾಫಿ ಬೆಳೆಗೆ ಅನುಕೂಲವಾದ ಫಲವತ್ತಾದ ಮಣ್ಣು ಇವುಗಳನ್ನು ಕಂಡಾಗ ಅವರಿಗೆ ಕೊಡಗನ್ನು ವಶಪಡಿಸಿಕೊಳ್ಳಬೇಕೆಂಬ ಬಯಕೆ ಹುಟ್ಟಿತು. ಆ ಸಲುವಾಗಿ ಅವರು ಸಂದರ್ಭ ಕಾಯುತ್ತಿದ್ದರು. ವೀರರಾಜನು ತನ್ನ ಪ್ರಜೆಗಳನ್ನು ಹಿಂಸಿಸುತ್ತಾನೆಂಬ ದೂರು ಬೆಂಗಳೂರಿನಲ್ಲಿರುವ ರೆಸಿಡೆಂಟನಿಗೆ ಹೋಯಿತು. ರೆಸಿಡೆಂಟನು ವಿಚಾರಿಸಲು ಕೊಡಗಿನೊಬ್ಬ ಅಧಿಕಾರಿಯನ್ನು ಕಳುಹಿಸಿಕೊಟ್ಟನು. ಚಿಕವೀರರಾಜನು ತಾನು ಸ್ವತಂತ್ರನಾದ ಅರಸನೆಂದೂ ತನ್ನ ಆಡಳಿತದಲ್ಲಿ ಇಂಗ್ಲೀಷರು ಕೈಹಾಕುವ ಅಗತ್ಯವಿಲ್ಲವೆಂದೂ ಉತ್ತರವಿತ್ತನು. ಇಂಗ್ಲೀಷರೊನೆ ಹೋರಾಡಲು ಯುದ್ಧ ಸಿದ್ಧತೆಗಳನ್ನು ಮಾಡಿಕೊಳ್ಳ ತೊಡಗಿದನು.

ಈ ನೆಪವೇ ಈಸ್ಟ್ ಇಂಡಿಯಾ ಕಂಪನಿಗೆ ಸಾಕಾಯಿತು. ಗವರ್ನರ್ ಜನರಲ್ ಲಾರ್ಡ್ ಬೆಂಟಿಂಕನು ಕೊಡಗನ್ನು ವಶಪಡಿಸಿಕೊಳ್ಳಲು ಜನರಲ್ ಫ್ರೇಸರನನ್ನು ಕಳುಹಿಸಿಕೊಟ್ಟನು. ಇಂಗ್ಲೀಷರೊಡನೆ ಹೋರಾಡಿ ಸೋತ

ಚಿಕವೀರರಾಜನು ರಾಜಕೀಯ ಕೈದಿಯಾದನು. ಇಂಗ್ಲೀಷರು ಅವನನ್ನು ವೆಲ್ಲೂರಿಗೂ ಬಳಿಕ ಕಾಶಿಗೂ ಕಳುಹಿಸಿಕೊಟ್ಟರು. ಅವರು ಕೊಡಗನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡರು. ಹೀಗೆ ಕೊಡಗು ಬ್ರಿಟೀಷರ ಅಂಕಿತಕ್ಕೆ ಒಳಗಾಯಿತು ಹೀಗೆ ಕೊಡಗು ಮತ್ತು ಮೈಸೂರು ಪ್ರಾಂತ್ಯದ ಸಂಬಂಧ ಬೆಳೆದುದ್ದರ ಪರಿಣಾಮ ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಗುರುತಿಸಲಾಗಿದೆ. ಚಿಕವೀರರಾಜನ ಜೊತೆಗೆ ಬ್ರಿಟಿಷರು ಕೇವಲ ಯುದ್ದ ಮಾಡುವುದರ ಮೂಲಕ ಸಂಬಂಧ ಹೊಂದಿರಲಿಲ್ಲ. ಪತ್ರ ವ್ಯವಹಾರದ ಸಂಬಂಧವನ್ನು ಇಟ್ಟಿಕೊಂಡಿದ್ದರು ಇವರು ಬೆಳೆಸಿಕೊಂಡ ಸಂಬಂಧವನ್ನು ಕ್ರಮಬದ್ಧವಾಗಿ ಜಾರಿಗೆ ತರಬೇಕೆಂಬ ಆಸೆಯನ್ನು ಬ್ರಿಟಿಷರು ಹೊಂದಿದ್ದರು. ಈ ಮೊದಲೇ ತಿಳಿದ ಸಂಗತಿಗಳಿಂದ ಮತ್ತು ಈ ಸಂಗತಿಯಿಂದ ನಮಗೆ ತೋರುತ್ತಿರುವುದು ಈ ದೇಶದ ಜನ ತಮ್ಮ ವ್ಯವಹಾರವನ್ನು ತಾವು ನಡೆಸಿಕೊಳ್ಳಲು ಸಮರ್ಥರಲ್ಲ ಎನ್ನುವುದು. ಹತ್ತು ವಿಷಯಕ್ಕೆ ಇವರು ಹಸು ಮಕ್ಕಳು, ಹಸು ಮಕ್ಕಳಂತೆ ಅಸಹಾಯಕರಾಗಿರುವರು. ಅರಸನಾದವನು ತಪ್ಪಿ ನಡೆದರೆ ಅಧಿಕಾರಿಗಳು ಅವನನ್ನು ಎದುರಿಸುವುದಿಲ್ಲ. ಈ ಸ್ಥಿತಿಯಲ್ಲಿರುವ ಜನತೆ ಮುಂದುವರಿಯುವುದು ಸಾಧ್ಯ ಅಲ್ಲ. ಈ ವಿಷಯವನ್ನು ಕುರಿತು ಆಲೋಚಿಸಿದಷ್ಟು ನಮಗೆ ಅಧಿಕಾಧಿತವಾಗಿ ಒಂದು ಸತ್ಯಾಂಶ ಸ್ಪಷ್ಟವಾಗುತ್ತಿದೆ. ತಿಳಿವಳಿಕೆ ಸಾಲದ ಈ ಜನರನ್ನು ಆಂಗ್ಲ ಜನ ತನ್ನ ರೆಕ್ಕೆಯೊಳಕ್ಕೆ ಕರೆದುಕೊಂಡು ಹೋಗಿ ರಕ್ಷಿಸಬೇಕು, ಬೆಳೆಸಿ ದಕ್ಷರನ್ನಾಗಿ ಮಾಡಬೇಕು ಎನ್ನುವುದು ದೈವ ಸಂಕಲ್ಪ ಇರಬೇಕು ಇದುವರೆಗೆ ನಡೆದಿರುವ ಇತಿಹಾಸದಿಂದಲೇ ಈ ಸಿದ್ಧಾಂತ ಉದಯವಾಗುತ್ತದೆ.

ಇಂಡಿಯಾ ದೇಶದ ಜನ ಎಲ್ಲ ಕಡೆಯಲ್ಲಿಯೂ ಪಕ್ಷ – ಪ್ರತಿಪಕ್ಷಗಳಾಗಿ ಕಾದಾಡಿ ಒಂದಾದ ಮೇಲೆ ಒಂದು ಪ್ರಾಂತವನ್ನು ನಮ್ಮ ಕೈಗೆ ಒಪ್ಪಿಸಿಕೊಟ್ಟದ್ದಾರೆ. ನಾವು ಆಡಳಿತವನ್ನು ಕೈಗೆ ತೆಗೆದುಕೊಳ್ಳುವವರೆಗೆ ಯಾವ ಪ್ರಾಂತ್ಯದಲ್ಲೂ ಸೌಖ್ಯ ಇಲ್ಲ, ಕ್ಷೇಮ ಇಲ್ಲ ನಾವು ಆಡಳಿತವನ್ನು ವಹಿಸಿಕೊಂಡ ಮೇಲೆ ಅಂಥ ಎಲ್ಲ ಕಡೆಯೂ ಜನ ಕ್ಷೇಮದಿಂದಿದ್ದಾರೆ, ಸಮಾಧಾನವಾಗಿ, ಬಾಳುತ್ತಿದ್ದಾರೆ, ಆಂಗ್ಲರೇ ಹಾಜರಾಗಬೇಕೆಂದು ಬಯಸುತ್ತಾರೆ. ಈ ಮಾತಿಗೆ ಉತ್ತರ ಭಾರತವೆಲ್ಲ ನಿದರ್ಶನ ದಕ್ಷಿಣ ಭಾರತದಲ್ಲಿ ಕರ್ನಾಟಕ, ಪಶ್ಚಿಮ ಸಮುದ್ರ ತೀರ, ಮೈಸೂರು ಹಾಗೇಯೇ ಈ ತತ್ವವನ್ನು ನಿರ್ಧರಿಸುತ್ತವೆ. ತುಂಬ ಈಚಿನ ನಿದರ್ಶನ ಮಹಾರಾಷ್ಟ್ರದ್ದು ಒಟ್ಟು ಭರತ ವರ್ಷವೇ ನಮ್ಮ ಕೈಗೆ ಬಂದು ದಕ್ಷ ಮತ್ತು ನೀತಿ ಬದ್ಧ ಆದ ಆಡಳಿತದ ಸುಖವನ್ನನುಭವಿಸಿ ಮುಂಬರುವಿನ ದಾರಿಯನ್ನು ತಿಳಿಯಬೇಕಾಗಿದೆ ಎನ್ನುವುದು ನನ್ನ ಮನಸ್ಸಿಗೆ ಸಂಬಂಧಿತ ಸಿದ್ಧಾಂತ ಆಗಿದೆ. (ಪುಟ 230–231).

ಇಡೀ ಕಥೆಗೆ ಕ್ರೌರ್ಯದ ಆವರಣ ಮೂರ್ತ ರೂಪದಲ್ಲಿ ತುಂಬಿಕೊಳ್ಳುವುದು ಇಂಗ್ಲೀಷ್ ಅತಿಥಿಗಳ ಮನರಂಜನೆ ನಿಯೋಜಿತವಾದ ವೇದಿಕೆಯಲ್ಲಿ ಪಾಣಿ ಸೂರ್ಯನಾರಾಯಣ ಆಡಿದ ನಾಟಕದ ಅನಂತರ ಅದುವರೆಗೆ ಲಿಂಗರಾಜ ಕಾಮುಕತನ ಅದಕ್ಕೆ ಬಲಿಯಾದ ಕುಟುಂಬ ಹೆಣ್ಣುಗಳ ಕಣ್ಣೀರ ಬದುಕು ತಣ್ಣಗೆ

ಬಿಚ್ಚಿಕೊಂಡಿತ್ತು. ಅರಮನೆಯ ಅವರಣದಲ್ಲಿಯೇ ಇದರ ನರಳಾಟ ಉಸಿರಾಡುತ್ತಿತ್ತು ಈ ನಾಟಕದ ಅನಂತರ ಈ ಶೀತಲ ದ್ವೇಷ ಸೇರಿಗೆ ಸವ್ವಾಸೇರಾಗಿ ಸೇಡು ಹೊಡೆದು ಸೇಡು ಹೆಡೆ ಬಿಚ್ಚಿ ಕ್ರೌರ್ಯ ಪರಾಕಾಷ್ಠೆ ಮುಟ್ಟುತ್ತದೆ. ಇದಕ್ಕೆ ಮೊದಲ ಬಲಿ ಕುಂಟ ಬಸವನ ಪಾತ್ರಕ್ಕೆ ಬಂದಿದ್ದ ಅಮಾಯಕ ಭಿಕ್ಷುಕ ಕುಂಟ ಲಕ್ಕ. ಧರ್ಮ ನೀತಿ ನೆಲೆ ತಪ್ಪಿದ ರಾಜ್ಯದಲ್ಲಿ ಅಮಾಯಕರ ಬಲಿ ಹೇಗೆ ಬಲಿಯುತ್ತದೆ ಎಂಬುದನ್ನು ಈ ಘಟನೆ ಮಾರ್ಮಿಕವಾಗಿ ನಿರೂಪಿಸುತ್ತದೆ. "ನೈತಿಕ ನಿಷ್ಠೆಯ ಸ್ವಾಭಿಮಾನಿ ಉತ್ತಯ್ಯತಕ್ಕನ ಮೇಲೆ ಪುಂಡ ಮಾಲಿಗನ ಗುಂಪು ಬೀಳುವುದು. ಅವರಿಂದ ಉತ್ತಯ್ಯತಕ್ಕನನ್ನು ಕಾವೇರಿ ಮಕ್ಕಳು ರಕ್ಷಿಸಿದ್ದು ಈ ಶೀತಲ ಯುದ್ಧದ ತೆರೆಮರೆಯ ಮೂರ್ತ ರೂಪವಾಗಿ ಕಾಣಿಸಿಕೊಳ್ಳುತ್ತದೆ.'ಕಾಡಿಗೆ ಹೋಗುತ್ತಿದ್ದರೆ ಹುಲಿ ದಾರಿ ಬಿಡುತ್ತಿತ್ತು ಊರಿಗೆ ಹೋಗುತ್ತಿದ್ದರೆ ಪುಂಡ ಜಗಳಕ್ಕೆ ಕರಿತಾನೆ ಊರು ಕಾಡಿಗನ್ನ ಕೇಡಾತು"[12](ಪುಟ–302) ಎನ್ನುವ ತಕ್ಕನ ಮಾತಿನಲ್ಲಿ ಭೂತ ವರ್ತಮಾನ ವೈರುಧ್ಯ ಸ್ಥಿತಿಯೇ ಅಸಹಾಯಕವಾಗಿ ನರಳಿದ ಧ್ವನಿ ಇದೆ. ಇದು ತಕ್ಕನೊಬ್ಬನ ಬದುಕಿನ ವೈರುಧ್ಯವಲ್ಲ ಇಡೀ ಕೊಡಗಿನ ಬದುಕಿನ ಅಸಹಾಯಕ ಗತಿಯ ನೋವ ದನಿ.

ಮುಂದೆ ಅಪ್ಪಂಗೊಳದ ನಿಷ್ಠಾವಂತ ಆಳು ಚೋಮ ಬಲಿಯಾಗುವುದು ಹೃದಯ ವಿದ್ರಾವಕ ಸನ್ನಿವೇಶ. ಸಾವಿನ ದಸಿಗೆ ತನ್ನ ಹೊಟ್ಟೆಯನ್ನು ತಿವಿಯುವ ಸಂದರ್ಭದಲ್ಲಿಯೂ ತನಗಾಗಿ ದು:ಖಿಸದೆ ಆ ಮಗುವಿಗಾಗಿ ಒಡೆಯ ಒಡತಿಗಾಗಿ ಚೋಮ ಆರ್ತನಾಗಿ ಚೀರುವುದು ನಿಷ್ಠಾವಂತ ಸಾಮಾನ್ಯ ಪ್ರಜೆಗಳ ಕೂಗಾಗಿ ಬೋರಿಡುತ್ತದೆ. ಆ ಸಂದರ್ಭದಲ್ಲಿ ಆ ಕೃತ್ಯವನ್ನು ನಡೆಸುತ್ತಾ ಹೇಸದೆ ಇದ್ದವರು ಬಸವ ಮತ್ತು ಅರಸ ಇವರಿಬ್ಬರೇ ಎಂಬ ನಿರೂಪಣೆ ಕ್ರೌರ್ಯ ಮತ್ತು ಮಾನವೀಯತೆಗಳ ನಡುವಿನ ವೈರುಧ್ಯ ಸೂಚಿಯಾಗಿದೆ. ಹೀಗೆ ವಿಶಿಷ್ಟ ಸಂಸ್ಕೃತಿಯ ತಾಣವಾಗಿ ಕೊಡಗು ತನ್ನನ್ನು ತಾನು ರೂಪಿಸಿಕೊಳುವುದರ ಜೊತೆಗೆ ಅದರಲ್ಲಿಯೂ ನೆರೆಯ ಪ್ರದೇಶಗಳೊಂದಿಗೆ ಅದರಲ್ಲೂ ಮೈಸೂರು ಪ್ರಾಂತ್ಯದೊಂದಿಗೆ ಸಂಬಂಧವನ್ನು ಬೆಳೆಸಿಕೊಂಡು ತಮ್ಮ ನಾಡಲ್ಲಿ ಒಂದು ಕ್ರಮಾನುಗತಿಯನ್ನು ಕೈಗೊಳ್ಳುತ್ತದೆ.

ಅದರಲ್ಲಿಯೂ ಚಿಕವೀರರಾಜನ ಕಾಲದ ಕೊಡಗಿನ ಜನ ಮೈಸೂರಿನವರೊಂದಿಗೆ ಹೆಚ್ಚು ಸಂಬಂಧವನ್ನು ಹೊಂದಿರುತ್ತಾರೆ ಎಂಬುದನ್ನು ಈ ಮೇಲೆ ತಿಳಿಸಿದ ವಿಷಯದ ಮೂಲಕ ತಿಳಿದುಕೊಳ್ಳಬಹುದು. ಸಂಸ್ಕೃತದಲ್ಲಿ ಒಂದು ಸುಭಾಷಿತ ಇದೆ 'ಯೌವನಂ ಧನಸಂಪತ್ತಿ: ಪ್ರಭುತ್ವಮ ವಿವೇಕತಾ ಏಕೈಕಮಪ್ಯನರ್ಥಾಯ ಕಿಮುಯತ್ರ ಚತುಷ್ಟಯಂ' ಎಂದು ಯೌವನ ಧನಕನಕಾದಿಗಳು ಪ್ರಭುತ್ವ ಮತ್ತು ಅವಿವೇಕ, ಒಂದೊಂದೂ ಅನರ್ಥಕ್ಕೆ ಕಾರಣವಾಗಹುದು. ನಾಲ್ಕು ಒಂದೆಡೆ ಸೇರಿದರೆ ಕೇಳಬೇಕೆ? ಈ ಮಾತು ಪೂರ್ತಿಯಾಗಿ ವೀರರಾಜನಿಗೆ ಅನ್ವಯಿಸುತ್ತದೆ. ಆ ಸುಭಾಷಿತಕ್ಕೆ ಒಂದು ನಿದರ್ಶನದಂತಿದೆ. ಇಲ್ಲಿ ಚಿತ್ರಿತವಾದ ಆತನ ಬದುಕು ಅನರ್ಥ ಕಾರಣಗಳಾಗಬಹುದಾದ ನಾಲ್ಕು ಆತನಲ್ಲಿದ್ದವು. ತನ್ನ ಪ್ರಭುತ್ವವನ್ನು ಅನಿರ್ಬಂಧವಾದ ಕಾಮತೃಪಿಗಾಗಿ

ಬಳಸಿಕೊಂಡ. ತನ್ನ ಸ್ಥಾನಮಾನಗಳ ಬಗೆಯಲ್ಲಿಯ ಅರಿವಿನ ವಿವೇಕದ ಮಾತಿರಲಿ ಸಾಮಾನ್ಯನ ವಿವೇಕವೂ ಆತನಲ್ಲಿರಲಿಲ್ಲ. ತಾನು ಮಾಡುತ್ತಿದ್ದುದೇನು ಅದರಿಂದ ಮುಂದೇನಾಗಬಹುದು ಎಂಬ ಯೋಚನೆ ಆತನನ್ನು ತಟ್ಟುವುದೇ ಇಲ್ಲ. ತಾನು ದೊರೆ ತನ್ನನ್ನು ಯಾರೂ ಪ್ರತಿಭಟಿಸುವರಿಲ್ಲ. ತನ್ನ ಅಧಿಕಾರ ನಿರಂಕುಶ ಎಂದು ನಡೆದುಕೊಳ್ಳುವ ಆತನಿಗೆ ಪ್ರತಿಭಟಿಸುವವನನ್ನು ಕೊಂದುಹಾಕುವುದೊಂದೇ ದಾರಿ.

ಹೀಗೆ ಪ್ರಭುತ್ವ ಆತನ ಕಾಮಲಾಲಸೆಗೆ ಅವಕಾಶವನ್ನು ಒದಗಿಸಿ ಪೋಷಿಸುತ್ತಿದರೆ ಅವಿವೇಕದ ದುರಾಹಂಕಾರ ಆತನಲ್ಲಿಯ ಕ್ರೌರ್ಯಕ್ಕೆ ಕಾರಣವಾಗಿ ಅದನ್ನು ಪೋಷಿಸುತ್ತಿತ್ತು. ದುಷ್ಕಾಮ, ದುರಾಹಂಕಾರ, ಕ್ರೌರ್ಯ ಆತನಲ್ಲಿ ಎಲ್ಲೆಯರಿಯದೆ ಬೆಳೆದು ಆತನನ್ನು ಒಬ್ಬ ನರಪಶುವನ್ನಾಗಿ ಮಾಡುತ್ತದೆ. ಎಷ್ಟಾದರೂ ತಮ್ಮ ದೊರೆ ಎನ್ನುವುದಕ್ಕಾಗಿ ಆತನ ದುಷ್ಕೃತ್ಯಗಳನ್ನು ಬಹುಕಾಲ ತಡೆದುಕೊಂಡಿದ್ದ ಜನಗಳ ತಾಳ್ಮೆಗೂ ಒಂದು ಮಿತಿ ಇದ್ದೆ ಇರುತ್ತದೆ ಎನ್ನುವುದನ್ನು ಆತ ಕಾಣದೆ ಹೋದ. ಈ ದುಷ್ಕ್ರತ್ಯಗಳಿಂದಾಗಿಯೇ ಜನರ ಪ್ರತಿಭಟನೆ ಹೆಚ್ಚಾಗಿದು, ಇದರಿಂದ ಸಮಯಕ್ಕಾಗಿ ಕಾಯುತ್ತಿದ್ದ ಆಂಗ್ಲರು ಮಧ್ಯ ಪ್ರವೇಶಿಸುವುದಕ್ಕೆ ಅನುಕೂಲವಾಯಿತು. ಈ ದುರಂತ ಕಾದಂಬರಿಯ ವಸ್ತು ಕಲ್ಲೆದೆಯ, ಕುಡುಕ, ಕಾಮಿ, ಕೇಡಿಗ ದೊರೆಯ ಕೊನೆಗಾಲ. ಕಾದಂಬರಿ ಆರಂಭವಾಗುವ ಹೊತ್ತಿಗೆ ಅವನು ಪ್ರಜೆಗಳ ವಿಶ್ವಾಸವನ್ನು ಕಳೆದುಕೊಂಡಾಗಿದೆ. ಅವನ ದುರಾಡಳಿತಕ್ಕೆ ಕೊಡಗಿನ ಹಿರಿಯರೂ ರೋಸಿ ಹೋಗಿದ್ದಾರೆ. ಸ್ಕಾಟ್ಲೆಂಡನ್ನು ಸ್ಮರಣೆಗೆ ತರುವ ಈ ಪ್ರದೇಶದ ಮೇಲೆ ಈಸ್ಟ್ ಇಂಡಿಯಾ ಕಂಪನಿಯ ಹದ್ದಿನ ಕಣ್ಣು ಈಗಾಗಲೇ ಬಿದ್ದಿದೆ. ಆರಂಭದಲ್ಲಿಯೇ ಅವನ ವಿಶ್ವಾಸದ ಆಪ್ತ ಸಚಿವ ಬಸವನಿಗೆನಿಸುವಂತೆ ದೊರೆ ಜಾರು ಬಂಡೆಯಲ್ಲಿ ಕುಳಿತು ಜಾರುತ್ತಿದ್ದಾನೆ. ಅದೇ ಬಂಡೆಯ ಮೇಲೆ ಅವನ ಕಾಲನ್ನು ತನ್ನ ಸೊಂಟಕ್ಕೆ ಕಟ್ಟಿಕೊಂಡು ತಾನೂ ಜಾರುತ್ತಿರುವುದು ಅವನಿಗೆ ಕಾಣಿಸುತ್ತಿತ್ತು. ಈ ಪ್ರಯಾಣ ಆರಂಭವಾಯಿತೋ ಇದಕ್ಕೆ ಒಂದೇ ನಿಲುಗಡೆ ಬಂಡೆಯ ಬುಡ ಮಧ್ಯೆ ತಡೆದುಕೊಂಡು ನಿಲ್ಲುವುದು ತಮಗೆ ಸಾಧ್ಯವಿಲ್ಲ ಎಂದೇ ಅವನು ಹಲವು ವೇಳೆ ನಿರಾಸನಾದನು. ಕಾದಂರಿಕಾರರು ಚಿಕವೀರ ರಾಜೇಂದ್ರನ ಆಳ್ವಿಕೆಯ ಕಡೆಯ ತಿಂಗಳುಗಳನ್ನು ಆಯ್ದುಕೊಂಡಿರುವುದು ಅವನ ದುರಂತ ಗತಿಯ ರಭಸದ ಚಿತ್ರಣಕ್ಕೆ ಅನುವು ಮಾಡಿಕೊಟ್ಟಿದೆ.

ಇಲ್ಲಿನ ಶಕ್ತಿ ತ್ರಿಕೋನದಲ್ಲಿ ಚಿಕವೀರ ರಾಜೇಂದ್ರ ಒಂದು ಬಿಂದು ಕಂಪನಿ ಇನ್ನೊಂದು ಮತ್ತು ಇವರ ನಡುವೆ ಬೋಪಣ್ಣ ಇವರ ಸಂಬಂಧ ಪ್ರಬಲವಾಗುತ್ತಾ ಹೋಗುವುದೇ, ಈ ರಾಜಕೀಯ ಪ್ರಕ್ರಿಯೆಯ ಸಂಚಲನೆ ಕ್ರಮ ಕಾದಂಬರಿಯ ಪ್ರಥಮಾರ್ಧ ರಾಜ ಮತ್ತು ಬೋಪಣ್ಣರ ಸಂಬಂಧ ಕೆಡುವುದನ್ನು ತೋರಿಸಿದರೆ ದ್ವಿತೀಯಾರ್ಧ ಕಂಪನಿ–ಬೋಪಣ್ಣರ ಸಂಬಂಧ ಪ್ರಬಲಿಸಿ ಕೊಡಗನ್ನು ಕಂಪನಿ ವಶಪಡಿಸಿಕ್ಕೊವುದಕ್ಕೆ ಬೋಪಣ್ಣ ಕಬೂಲಿಯಾಗುವುದನ್ನು ತೋರಿಸುತ್ತಾದೆ. ಚಿಕವೀರ ರಾಜೇಂದ್ರನ ದೌರ್ಬಲ್ಯಗಳನ್ನು, ದುಷ್ಟತನವು ಅವನನ್ನು

ಕೆಳಕ್ಕೆ ಎಳೆಯದಂತೆ ಅವನ ಬೆಂಬಲಕ್ಕೆ ನಿಲ್ಲುವವರು ಘನವ್ಯಕ್ತಿತ್ವದ ರಾಣಿ ಗೌರಮ್ಮಾಜಿ ರಾಜಕುಮಾರಿ ಮತ್ತು ಮೊದಲ ರಾಜನ ದುರ್ಮಾರ್ಗಿಯಾಗಲೂ ಬಹುಮಟ್ಟಿಗೆ ಕಾರಣನಾದರೂ ಕೊನೆಯಲ್ಲಿ ಅವನನ್ನುಳಿಸಲು ಶತ ಪ್ರಯತ್ನ ಮಾಡುವ ಅವನ ಬಾಲ ಸ್ನೇಹಿತ, 'ಕಿವಿ ಮಂತ್ರಿ'ಕುಂಟ ಬಸವಮಂತ್ರಿ ಲಕ್ಷ್ಮೀನಾರಾಯಣಯ್ಯ ರಾಜ ಬೋಪಣ್ಣರ ಸಂಬಂಧ ಮುರಿಯದಂತೆ ಉಳಿಸಲು ಯತ್ನಿಸಿ ವಿಫಲನಾಗುತ್ತಾನೆ.

ತನ್ನ ದುಂದುವೆಚ್ಚದಿಂದಲೂ, ಕಾಮುಕತೆಯಿಂದಲೂ ರಾಜ ಚಿಕ್ಕಣ ಶೆಟ್ಟಿ ಮತ್ತು ವರ್ತಕ ವರ್ಗಗಳ ಬೆಂಬಲವನ್ನು ಕಳೆದುಕೊಂಡಂತೆ ಬೋಪ್ಪಣನಿಗೆ ಎಲ್ಲ ತಕ್ಕರ ಮತ್ತು ವರ್ತಕ ವರ್ಗದ ಬೆಂಬಲ ಹೆಚ್ಚಾಗುತ್ತದೆ. ಕಡೆಗೆ ಜನತೆಯ ಅಪೇಕ್ಷೆಯಿಂದಲೇ ಕಂಪನಿ ಕೊಡಗನ್ನು ವಶಪಡಿಸಿಕೊಂಡಂತೆ ನಟಿಸಲು ಸಂದರ್ಭಗಳು ಅನುಕೂಲವಾಗುತ್ತವೆ. ಕಂಪನಿಯ ಉನ್ನತ ಅಧಿಕಾರಿಗಳ ಪರಸ್ಪರ ಪತ್ರ ವ್ಯವಹಾರದಲ್ಲಿಯೂ ಅವರು ಕೊಡಗಿನಲ್ಲಿ ನಡೆಸುವ ಸಮಾಲೋಚನೆಗಳಲ್ಲಿಯೂ ಕಂಪನಿಯ ಮುತ್ಸದ್ದಿತನ ಎಂದು ಕಾಣುತ್ತದೆ. ಅಲ್ಲದೆ ಜನತೆಯ ಪರವಾಗಿ ಮುಖಂಡತನವನ್ನು ವಹಿಸಿಕೊಳ್ಳುವ ಬೋಪಯ್ಯನಿಗೆ ಕಂಪನಿ ಕೊಡಗನ್ನು ವಶಪಡಿಸಿಕೊಂಡುದುದರಿಂದ ಅಷ್ಟೇನು ಕೆಟ್ಟದಾಯಿತೆಂದೆನ್ನಿಸುವುದಿಲ್ಲ. ತಮಗೆ ಬೇಕೆನಿಸಿದಾಗ ಕಂಪನಿಯವರನ್ನು ಹಿಂದಕ್ಕೆ ಕಳುಹಿಸಿ ರಾಜಕುಮಾರಿಯನ್ನು ಪಟ್ಟಕ್ಕೆ ತರಬಹುದೆಂಬುದು ಅವನ ನಂಬಿಕೆ. ಹೀಗೆ ರಾಜ ಆಡಳಿತ ಮಾಡುವಾಗ ರಾಜನ ಆಡಳಿತದಲ್ಲಿ ದುಷ್ಕೃತ್ಯಗಳನ್ನು ಕಂಡ ಜನ ಸಮುದಾಯದವರು ಕೊಡಗಿನಲ್ಲಿ ಆಡಳಿತವನ್ನು ಮುಂದೆ ಯಾರು ನಡೆಸಬಹುದೆಂದು ತೀರ್ಮಾನಿಸುವ ನಿರ್ಧಾರವನ್ನು ತೆಗೆದುಕೊಂಡರು.

ಅಧ್ಯಾಯ – 4.

ಪ್ರಾದೇಶಿಕ ಸಂಸ್ಥಾನ ಕೊಡಗು ಮತ್ತು ಬ್ರಿಟಿಷ್ ಚಕ್ರಾಧಿಪತ್ಯ ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಬಗೆ.

ಚಿಕವೀರರಾಜೇಂದ್ರ ಕೊಡಗಿನ 'ವಿಧಿ'ಪೂರ್ವ ನಿಶ್ಚಿತವೇ ಆಗಿದೆ. ಅಂದರೆ ಮುಕಳುಗದ ಚಕ್ರಾಧಿಪತ್ಯದ ಎದುರಿನಲ್ಲಿ ಸಣ್ಣ-ಪುಟ್ಟ ರಾಜರ ರಾಜ್ಯಗಳ ಅಭೀಪ್ಸೆಗಳಿಗೆ ಏನೂ ಅರ್ಥವಿಲ್ಲ. ಆದರೆ ಇದನ್ನು ಎದುರಿಸುವಲ್ಲಿ ಚಿಕವೀರನಾಗಲೀ, ಕೊಡಗಾಗಲೀ ತಮ್ಮ ಘನತೆಯನ್ನು ಮರೆಯುವುದಿಲ್ಲ ಎಂಬುದೇ ಬಹು ದೊಡ್ಡ ದುರಂತ ಒಳಗಿನ ದೌರ್ಬಲ್ಯ ಹೊರಗಿನ ಆಕ್ರಮಣಕ್ಕೆ ಕಾರಣವಾಗುತ್ತದೆ. ಒಳಗಿನ ನಿಷ್ಕ್ರಿಯತೆ ಕೆಡುಕಿನ ವಿಜೃಂಭಣೆಗೆ ಕಾರಣವಾಗುತ್ತದೆ ಎಂಬುದನ್ನು ಸೂಚಿಸುವಾಗ ಮಾಸ್ತಿ ವಸಾಹತುಶಾಹಿ ಆಕ್ರಮಣವನ್ನು ಕೇವಲ ಗೃಹೀತವಾಗಿ ಸ್ವೀಕರಿಸದೆ ಬ್ರಿಟಿಷರ ರಾಜಕಾರಣದ ಒಂದು ದಟ್ಟ ಚಿತ್ರವನ್ನೇ ಚಿಕವೀರರಾಜೇಂದ್ರದಲ್ಲಿ ಬಿಡಿಸಿಕೊಡುತ್ತಾರೆ. ಈ ಶಕ್ತಿಗಳು ಆಂತರಿಕ ಸಮಸ್ಯೆಗಳನ್ನು ಕೇವಲ ಬಳಸಿಕೊಳ್ಳುವುದಿಲ್ಲ ಅವುಗಳನ್ನು ಹುಟ್ಟು ಹಾಕುತ್ತವೆ ಮತ್ತು ಅವುಗಳನ್ನು ಪರಿಹರಿಸಲು ಬಂದ ಒಳತಿನ ಶಕ್ತಿಗಳ ಸೋಗು ಹಾಕುತ್ತದೆ.

ಮಂಗಳೂರಿನ ಯಕ್ಷಗಾನ, ಮಲೆಯಾಳದ ಕಥಕ್ಕಳಿ ಇವುಗಳ ಪ್ರಭಾವದಿಂದ ಕೊಡಗು ಮಾಡಿಕೊಂಡ ಒಂದು ನಾಟಕ ಕಲೆ ಇದು. ಮೊದಲ ದಿವಸ ಕೊಡಗಿನ ಮೂಲಪುರುಷನ ಚರಿತ್ರೆಯನ್ನು ಆಡಿ ತೋರಿಸಿದರು. ಹಿಂದೆ ಆಳುತ್ತಿದ್ದ ವಂಶದ ಕೊನೆಯ ಅರಸ ತುಂಬ ದುಷ್ಟನಾಗಿ ನಡೆದುಕೊಂಡದ್ದರಿಂದ ಜನ ಅವನಿಗೆ ಎದುರು ಬಿದ್ದು ಅವರ ನಾಯಕರು ಅವನನ್ನು ಕೊಲೆ ಮಾಡಿದ್ದು; ಇಕ್ಕೇರಿಯಿಂದ ಬಂದಿದ್ದ ಸ್ವಾಮಿ ಒಬ್ಬನು ಅವರನ್ನು ಈ ಧೀರವರ್ತನೆಗೆ ಪ್ರೇರೆಪಿಸಿ ಅವರಲ್ಲಿ ಒಬ್ಬನನ್ನು ರಾಜನಾಗು ಎಂದು ಹೇಳಿದ್ದು; ಅವರೆಲ್ಲರೂ ಸೇರಿ ನಾವು ರಾಜರಾಗುವುದಿಲ್ಲ, ಸ್ವಾಮಿಯಾದ ನೀವೇ ರಾಜನಾಗಿ ಎಂದದ್ದು; ಅವನು ಒಪ್ಪಿಕೊಂಡು ರಾಜನಾದದ್ದು; ಇದು ಅಂದಿನ ಆಟದ ಸಾರಾಂಶ. ಹೊಸ ದೊರೆ ಆಳುವ ಯಜಮಾನನಾಗಿ ಅಲ್ಲ; ಜನರಿಗೆ ಒಳ್ಳೆಯ ದಾರಿಯನ್ನು ತೋರಿಸುವ ಗುರುವಾಗಿ ಗಾದಿಗೆರಿಸಿದನು. ಜನರು ಅವನಿಗೆ ಸೇವಕರಲ್ಲ ಮನೆಯ ಮಕ್ಕಳು; ಅವರು ಅವನಿಗೆ ಕೊಡುವುದು ಆಳುವವನಿಗೆ ಸಲ್ಲಿಸುವ ಕಂದಾಯವಲ್ಲ; ಗುರುವಿಗೆ ಒಪ್ಪಿಸುವ ಜೀವಿಕೆಯ ಸಾಮಗ್ರಿ. ಕೊನೆಯಲ್ಲಿ ರಾಜನಾದವನು, "ನಾನು ನನ್ನ ವಂಶದವರೂ ನಿಮ್ಮನ್ನು ಮನೆ ಮಕ್ಕಳಂತೆ ನೋಡಿಕೊಳ್ಳುತ್ತೇವೆ. ಈ ವಂಶದಲ್ಲಿ ಯಾರು ಹೀಗೆ ನಡೆಯದೆ ತಪ್ಪು ಮಾಡುತ್ತಾನೊ ಅವನಿಗೆ ಅಕಾಲದ ಜನ ಈ ಹಿಂದಿನ ಅರಸನಿಗೆ ನೀವು ಕೊಟ್ಟ ಶಿಕ್ಷೆಯನ್ನು ಕೊಡ ತಕ್ಕದ್ದು"[13] ಎಂದನು. (ಪುಟ -200)

ಈ ಕಾದಂಬರಿಯ ಸಂದರ್ಭದಲ್ಲೇ ಮೈಸೂರಿನಲ್ಲಿ ಬ್ರಿಟಿಷರು ನಡೆಸಿದ ರಾಜಕೀಯದ ಉದಾಹರಣೆ ಇದೆ. ಎರಡನೆ ದಿನ ಕಥೆಯಲ್ಲಿ ದೊಡ್ಡ ವೀರರಾಜನು ಬ್ರಿಟಿಷರೊಂದಿಗೆ ಸ್ನೇಹವಾಗಿದ್ದವನೇ ಚಿಕವೀರನು ತನ್ನ ಆಂಗ್ಲ ಸ್ನೇಹಿತರ ಗೌರವಾರ್ಥ ಮನರಂಜನೆಯ ಕಾರ್ಯಕ್ರಮ ನಡೆಸಿದಾಗ ಅನೇಕ ನಾಟಕ ಪ್ರದರ್ಶನಗಳು ನಡೆಯುತ್ತವಷ್ಟೆ. ದೊಡ್ಡ ವೀರರಾಜ ಟಿಪ್ಪುವಿಗೆ ವಿರೋಧವಾಗಿ ಆಂಗ್ಲರಿಗೆ ಸಹಾಯ ಮಾಡಿದ ಕಥೆಯನ್ನೇ

ನಾಟಕವಾಗಿ ಆಡಲಾಗುತ್ತದೆ. "ಆ ಕಥೆಯನ್ನು ನಾವು ಹೀಗೆ ಸಂಗ್ರಹಿಸಬಹುದು ಟಿಪ್ಪುವಿನ ಕಡೆಯ ಮುಸಲ್ಮಾನ ಫೌಜುದಾರರು ಕೊಡಗಿನ ಜನರನ್ನು ಹಿಂಸಿಸಿದ್ದು ದೊಡ್ಡ ವೀರರಾಜ ಸೆರೆಯಿಂದ ಬಿಡಿಸಿಕೊಂಡು ಬಂದು ಜನರನ್ನು ಗುಂಪು ಕಟ್ಟಿ ಫೌಜುದಾರರನ್ನೆದುರಿಸಿ ಅವರನ್ನೋಡಿಸಿ ಕೊಡಗನ್ನು ವಶಮಾಡಿಕೊಂಡದ್ದು ತಲಚೇರಿ ಮಂಗಳೂರಿನಿಂದ ಆಂಗ್ಲರು ದಂಡೆತ್ತಿ ಬಂದಾಗ ಅವರಿಗೆ ಸಹಾಯ ಮಾಡಿದ್ದು ನೀನು ನಮ್ಮ ದೇಶದವನು, ಆಂಗ್ಲರು ಪರದೇಶದವರು, ನಾವಿಬ್ಬರೂ ಅವರನ್ನು ಹೊಡೆದಟ್ಟಬೇಕು ಗೆದ್ದ ರಾಜ್ಯದಲ್ಲಿ ನಿನಗರ್ಧವನ್ನು ಕೊಡುತ್ತೇನೆ ಬಾ ಎಂದು ಟಿಪ್ಪು ವೀರರಾಜನನ್ನು ಕರೆದದ್ದು ಅವನು ಆಂಗ್ಲರು ನನ್ನ ಹಿಂಸಿಸಿದವನು ಎಂದು ಅವನ ಅಹ್ವಾನವನ್ನು ನಿರಾಕರಿಸಿದ್ದು, ಆಂಗ್ಲರು ಇದನ್ನು ಮೆಚ್ಚಿ ವೀರರಾಜನಿಗೆ ಗೌರವಾರ್ಥವಾಗಿ ಒಂದು ಕತ್ತಿಯನ್ನು ಕೊಟ್ಟಿದ್ದು, ಇದರ ಕಥೆಯನ್ನು ಆಡಿದರು (ಪುಟ-241) ಕೊನೆಯಲ್ಲಿ ನಮ್ಮ ದೊಡ್ಡ ವೀರರಾಜೇಂದ್ರ ಒಡೆಯರ ಹೆಸರನ್ನು ಹೇಳಿದರೆ ಪರಂಗೀ ಜನ ಟೋಪಿ ತೆಗೆಯುತ್ತಾರೆ ಎಂದಾಗ ಹೌದು ತೆಗೆಯುತ್ತಾರೆ ಎಂದು ಸುತ್ತಿನ ಜನ ಸಮ್ಮತಿಸಿ ಕೂಗಿದರು."[14] "ದುಬಾಷ್ ಇದರ ಅರ್ಥವನ್ನು ರೆಸಿಡೆಂಟ್‌ಗೆ ಹೇಳಿದಾಗ ಅವನು ಎದ್ದು ನಿಂತು ತನ್ನ ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ತಲೆ ಬಾಗಿದನು. ಜೊತೆಯ ಆಂಗ್ಲರೂ ನಿಂತು ಮರ್ಯಾದೆ ತೋರಿದರು ಜನರ ಸಂತೋಷಕ್ಕೆ ಮಿತಿಯಿಲ್ಲ ಆಟ ತುಂಬ ಸಂತೋಷದಲ್ಲಿ ಮುಗಿಯಿತು. (ಪುಟ-241-242).

ಮೂರನೆಯ ದಿನ ಮಲಬಾರಿನ ಮುಸಲ್ಮಾನ ರಾಣಿಯನ್ನು ಟಿಪ್ಪು ಅವಳ ರಾಜ್ಯದಿಂದ ಹೊಡೆದು ಹೊಡಿಸಿದ್ದು; ಅವಳು ವೀರರಾಜನ ಬಳಿಗೆ ಬಂದು ಶರಣಾಗತಿ ಹೇಳಿ ದೂತನನ್ನು ಕಳುಹಿಸಿದ್ದು; ವೀರರಾಜ ತಲಚೇರಿಯ ಟೆಯಿಲರ್ ಸಾಹೇಬನಿಗೆ ಹೇಳಿ ಕಳುಹಿಸಿ ಆಂಗ್ಲರ ಸಹಾಯ ಪಡೆದು ಟಿಪ್ಪುವಿನ ಸೇನೆಯನ್ನು ಸೋಲಿಸಿ ಮಲೆಯಾಳದಿಂದ ಓಡಿಸಿ, ಬೀಬೀಗೆ ಅವಳ ರಾಜ್ಯವನ್ನು ಮರಳಿ ಕೊಟ್ಟಿದ್ದು, "ಕೊಡಗಿನ ಅರಸರು ಪರನಾರಿಯನ್ನು ಸೋದರಿಯರಂತೆ ಕಾಣುತ್ತಾರೆ, ಶರಣಾಗತರನ್ನು ತಮ್ಮ ಜೀವವನ್ನಾದರೂ ಕೊಟ್ಟು ರಕ್ಷಿಸುತ್ತಾರೆ. ಒಮ್ಮೆ ಸ್ನೇಹವೆಂದ ದ್ರೋಹವನ್ನು ಮಾಡುವವರಲ್ಲ" ಎಂದು ಹೆಮ್ಮೆಯ ಮಾತು ತುಂಬಾ ಚೆನ್ನಾಗಿ ಬಂದಿತು. ಇದನ್ನು ಕೇಳಿ ಆಂಗ್ಲರಿಗೆ ತುಂಬಾ ಸಂತೋಷವಾಯಿತು. (202) ಕಥಾಗರ್ಭ.

ಆದರೆ ನಾಲ್ಕನೆಯ ದಿನ ಲಿಂಗರಾಜನ ಭೂವ್ಯವಸ್ಥೆಯ ವಿವರವನನ್ನೇ ಆಡಿ ತೋರಿಸಿದರು. ಹಿಂದಿನ ಅರಸರು ಪೂರ್ವದಿಂದ ತೆಗೆದುಕೊಳ್ಳುತ್ತಿದ್ದ ಕಂದಾಯವನ್ನು ರೈತ ಅರಮನೆಗೆ ಒಪ್ಪಿಸುವುದಕ್ಕೆ ಬಂದಾಗ ಅರಸ, 'ನೀನು ಬೆಳೆದದ್ದು ಎಷ್ಟು' ಎಂದು ಕೇಳಿ ತಿಳಿದು, ಬೆಳೆದಿದ್ದರಲ್ಲಿ ಹತ್ತರಲ್ಲಿ ಒಂದು ಭಾಗವನ್ನು ಮಾತ್ರ ಕೊಟ್ಟು , ಉಳಿದದ್ದನ್ನು ನೀನೆ ತೆಗೆದುಕೊಂಡು ಹೋಗು ಸಾರಿ ಹೇಳಿದರು. ಗ್ರಾಮದ ಗೌಡ ತನ್ನಿಂದ ಹೆಚ್ಚಿಗೆ ಕಂದಾಯ ತೆಗೆದುಕೊಂಡಿದ್ದಾನೆ ಎಂದು ಅರಸರಲ್ಲಿ ಹೇಳಿಕೊಂಡಾಗ ಅರಸ ಗೌಡನನ್ನು ಕರೆಸಿ ನಿಜವೆಂದು ತಿಳಿದ ಮೇಲೆ

ಗೌಡನಿಂದ ರೈತನಿಗೆ ಅವನು ಹೆಚ್ಚಾಗಿ ತೆಗೆದುಕೊಂಡದ್ದರ ಎರಡರಷ್ಟು ಕಾಳನ್ನು ಹಿಂದಕ್ಕೆ ಕೊಡಿಸಿದ್ದು; ಇದು ರಾಜನ ಪ್ರತಿಷ್ಠೆಯನ್ನು ಹೆಚ್ಚಿಸಿತು. ಆಂಗ್ಲರು ಇದನ್ನು ಕೇಳಿ ತುಂಬಾ ಆಶ್ಚರ್ಯ ಪಟ್ಟರು.

ಆದರೆ ಆಂಗ್ಲರು ಅದಾಗಲೇ ಇಂಡಿಯಾದಲ್ಲಿ ತಳವೂರಿದ್ದಾರೆ ಮತ್ತು ಇಲ್ಲಿನ ಪ್ರಾಂತೀಯ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಆಂಗ್ಲರೊಂದಿಗೆ ಸ್ನೇಹ ಆಂಗ್ಲರೊಂದಿಗಿನ ವಿರಸದಷ್ಟೆ ಪ್ರತಿಷ್ಠೆಯ ವಿಷಯವಾಗಿದೆ. ಆದರೆ ದುರಂತದ ಸಂಗತಿ ಎಂದರೆ ಯಾವ ಕೊಡಗು ಚಿಕವೀರನ ಕಾಲದಲ್ಲಿ ವಸಾಹತುಶಾಹೀ, ಸಾಮ್ರಾಜ್ಯಶಾಹೀ, ರಾಜಕಾರಣಕ್ಕೆ ಬಲಿಯಾಯಿತೋ ಅಂಥ ರಾಜಕಾರಣವನ್ನು ಚಿಕವೀರನ ಕಾಲಕ್ಕೆ ಕನ್ಯೆಯಾಗಿ ಉಳಿದಿಲ್ಲ. ಈಗ ಚಿಕವೀರ ಒಂದಲ್ಲ ಒಂದು ಕಾರಣಕ್ಕೆ ಆಂಗ್ಲರೊಂದಿಗೆ ವಿರೋಧ ಕಟ್ಟಿಕೊಳ್ಳುತ್ತಿರುವಾಗ ಈ ಚಂದುರಂಗದಾಟದ ಸಮೀಕರಣಗಳು ಬದಲಾಗಿತ್ತಿವೆ ಅಷ್ಟೇ ಈ ವಿರಸಕ್ಕೆ ಚಿಕವೀರ ಸ್ವತ: ಎಷ್ಟು ಕಾರಣನೋ ಅವನ ರಾಜಕೀಯ ವಿರೋಧಿಗಳು ಅಷ್ಟೇ ಕಾರಣರಾಗಿದ್ದಾರೆ. ಆಂಗ್ಲರು ಇನ್ನೂ ಹೆಚ್ಚಿಗೆ ಕಾರಣರಾಗಿದ್ದಾರೆ ಏಕೆಂದರೆ ಅವರಿಗೆ ದೊಡ್ಡ ವೀರರಾಜೇಂದ್ರನ ಕಾಲದಿಂದಲೂ ಕೊಡಗಿನ ಮೇಲೆ ಕಣ್ಣಿತ್ತು. ಬ್ರಿಟಿಷರು ಮೈಸೂರನ್ನು ಕಬಳಿಸಿದ ಹಿನ್ನೆಲೆಯನ್ನೂ ಕೊಡಗಿನ ಮೇಲೆ ಕಣ್ಣಿಟ್ಟಿದ್ದನು ಕಾದಂಬರಿಕಾರರು ದೇಶಿಯ ಇತಿಹಾಸದ ಸ್ವರೂಪವನ್ನೇ ಬದಲಾಯಿಸಿದ್ದಾರೆ. ಅಂದರೆ ಕೊಡಗಿನ ರಾಜ್ಯದಲ್ಲಿ ವೀರರಾಜನ ಆಡಳಿತದಲ್ಲಿ ಗೊಂದಲ ಎದ್ದಾಗ ಅದನ್ನೇ ನೆಪ ಮಾಡಿಕೊಂಡು ಅರಸನನ್ನು ಗಾದಿಯಿಂದ ಕೆಳಗಿಳಿಸಿ ಮೈಸೂರನ್ನು ಕಬಳಿಸಿದರು. (ಪುಟ–102–103)

ಬ್ರಿಟಿಷರು ಮೈಸೂರನ್ನಾಗಲೀ, ಕೊಡಗನ್ನಾಗಲೀ ಮತ್ತು ಇನ್ನಾವುದೇ ದೇಶಿಯ ಸಂಸ್ಥಾನವನ್ನಾಗಲೀ ಕಬಳಿಸಿದ್ದು ಒಂದು ರಾಜಕೀಯ ಆಕಸ್ಮಿಕವೇನಲ್ಲ. ಅದರ ಹಿಂದೆ ಒಂದು ದೊಡ್ಡ ಹುನ್ನಾರವೇ ಇದೆ ಎಂದು ತಿಳಿದುಕೊಳ್ಳಬಹುದು. ಅಷ್ಟೆ ಅಲ್ಲದೆ ಏಷ್ಯಾ, ಆಫ್ರಿಕಾ ಖಂಡಗಳಿಗೆ ಈ ವ್ಯವಸ್ಥೆಯನ್ನೂ, ನಾಗರಿಕತೆಯನ್ನೂ ಕೊಂಡೊಯ್ಯುವ ಜವಾಬ್ದಾರಿಯನ್ನು ದೇವರು ತಮಗೆ ಒದಗಿಸಿದ್ದಾನೆ ಎಂದು ತುಂಬಾ ಸಂತೋಷಪಡುತ್ತಿದ್ದರು. ಅಲ್ಲದೆ ಬ್ರಿಟಿಷರು ಒಂದು ಸಿದ್ಧಾಂತವನ್ನು ಪ್ರಚಾರ ಮಾಡುತ್ತಿದ್ದರೆಂದರೆ ಅಲ್ಲಿಯ ಬ್ರಿಟಿಷ್ ಅಧಿಕಾರಿಗಳು ನಂಬಿದ್ದರು. ಚಿಕವೀರ ರಾಜೇಂದ್ರ ಕಾದಂಬರಿಯಲ್ಲಿ ಬ್ರಿಟಿಷ್ ಅಧಿಕಾರಿಗಳ ನಡುವಣ ಧೀರ್ಘ ಪತ್ರವ್ಯವಹಾರಗಳಿಂದ ಈ ಸಿದ್ಧಾಂತದ ಸ್ಥೂಲ ಚಿತ್ರ ದೊರೆಯಿತು. ಕೊಡಗನ್ನು ಆಕ್ರಮಿಸಿಕೊಳ್ಳುವ ಮುನ್ನ ಬ್ರಿಟಿಷ್ ಅಧಿಕಾರಿಗಳು ಇದೇ ಸಿದ್ಧಾಂತವನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಇದರಿಂದ ಗೊತ್ತಾಗುತ್ತದೆ ಬ್ರಿಟಿಷರಿಗೆ ಕೊಡಗಿನ ಮೇಲೆ ಬಹಳ ದಿನಗಳಿಂದಲೇ ಕಣ್ಣಿತು ಎಂದು ಸ್ಪಷ್ಟವಾಗುತ್ತದೆ. ಅಂತೂ ಯಾವ ದೃಷ್ಟಿಯಿಂದ ನೋಡಿದರೂ ಈ ಅರಸನನ್ನು ಗಾದಿಯಿಂದ ಇಳಿಸುವುದು ಸರಿ ಎನ್ನುವುದು ಮೊದಲಾಗಿ

ನಿಷ್ಪನ್ನವಾಗುವುದು ನಿಶ್ಚಯ. ಇದಾದ ಮೇಲೆ ಬರುವ ಪ್ರಶ್ನೆ ತಾನು ರಾಜನಾಗಬೇಕು ಎಂದು ಬಯಸುವ ಜನರಲ್ಲಿ ಯಾರನ್ನಾದರೂ ಗಾದಿಯ ಮೇಲೆ ಇರಿಸಬಹುದೇ ಎನ್ನುವುದು.

"ಹೀಗೆ ಹೊಸದಾಗಿ ಗಾದಿಯ ಮೇಲೆ ಕೂಡಿಸಬಹುದಾದ ವ್ಯಕ್ತಿ ಮೈಸೂರಿನ ಗಾದಿಯ ಮೇಲೆ ನಾವು ಕೂಡಿಸಿದ ವ್ಯಕ್ತಿಗಿಂತ ಚೆನ್ನಾಗಿ ನಡೆದುಕೊಂಡನು ಎಂದು ನೀರಿಕ್ಷಿಸಲು ತಕ್ಕ ಆಧಾರವಿಲ್ಲ. ಹಾಗೆ ಒಬ್ಬನನ್ನು ಗಾದಿಯ ಮೇಲೆ ಕೂರಿಸಿದರು ದೇಶ ಪುನ: ಕೋಟಲೆಗೆ ಸಿಕ್ಕಿದ್ದನ್ನು ನೋಡಿ ಪುನ: ಮರುಕದಿಂದ ಅದನ್ನು ಕೈಗೆ ತೆಗೆದುಕೊಳ್ಳಬೇಕಾಗಿ ಬಂದಿತೆಂದು ತೋರುತ್ತದೆ"[15] (ಪುಟ–233). ಟಿಪ್ಪು ಕೊನೆಯ ಸಲ ಸೋತು ಮೈಸೂರು ರಾಜ್ಯ ಪುನರ್ವ್ಯವಸ್ಥೆಯಾದಾಗ ಹರಿದದ್ದಾದರೂ ಧರ್ಮ ನ್ಯಾಯಗಳ ದೃಷ್ಟಿಯಿಂದ ಅಲ್ಲ. ಟಿಪ್ಪುವನ್ನು ಸೋಲಿಸಬೇಕಾದರೆ ನಿಜಾಮ, ಮರಾಠ, ಆಂಗ್ಲರಿಗೆ ಸಹಾಯ ನೀಡಿದ್ದರು. ಮೈಸೂರನ್ನು ಅರಸರಿಗೆ ಒಪ್ಪಿಸಲಿಲ್ಲವೆಂದರೆ ಟಿಪ್ಪುವಿನ ಕೈಯಲ್ಲಿದ ಈ ವಿಸ್ತಾರದ ನೆಲವನ್ನು ಆಂಗ್ಲ ಒಬ್ಬನೇ ನುಂಗುವಂತಿಲ್ಲ. ನಿಜಾಮನಿಗೆ ಮತ್ತು ಮರಾಠರಿಗೆ ಪಾಲು ಕೊಡಬೇಕು ಟಿಪ್ಪುವನ್ನು ಸೋಲಿಸಲು ನಾವು ನಿಮಗೆ ಸಹಾಯ ಮಾಡಿದವರು ಎಂದು ಅವರಿಬ್ಬರ ಸೊಕ್ಕು ಅವರು ಈಗಾಗಲೆ ಪ್ರಬಲರಾಗಿದ್ದಾರೆ. ಮತ್ತಷ್ಟು ನೆಲ ಕೊಟ್ಟರೆ ಹಿಡಿಯುವವರು ಯಾರೂ ಒಬ್ಬ ಟಿಪ್ಪುವನ್ನು ಸೋಲಿಸಿ ಇಬ್ಬರು ಟಿಪ್ಪುಗಳನ್ನು ಉತ್ಪಾದನೆ ಮಾಡಿದಂತಾದೀತು. ಮೈಸೂರು ರಾಜ್ಯವನ್ನು ಹಿಂದೂ ರಾಜನಿಗೆ ಕೊಟ್ಟರೆ ಆಂಗ್ಲರು ಉಪಕಾರ ಮಾಡಿದರು ಎಂದು ಅವನು ಕೃತಜ್ಞತೆಯಿಂದ ನಡೆಯುತ್ತಾನೆ. ನಿಜಾಮನಿಗೆ, ಮರಾಠನಿಗೆ ಪ್ರತಿಕಕ್ಷಿಯಾಗಿ ಮೂರನೇಯ ಒಂದು ಶಕ್ತಿಯಾಗಿ ಅವಶ್ಯ ಬಿದ್ದಾಗ ನಮ್ಮ ಪಕ್ಕದಲ್ಲಿ ನಿಲ್ಲುತ್ತಾನೆ ಹೀಗೆಂಬ ಒಂದು ಯೋಚನೆಯಿಂದ ಆಂಗ್ಲರು ಮೈಸೂರನ್ನು ಹಿಂದೂ ರಾಜನಿಗೆ ಹಿಂದಕ್ಕೆ ಕೊಟ್ಟರು (ಪುಟ–102).

ಇದು ಆಂಗ್ಲರ ವ್ಯವಹಾರದ ರೀತಿ ನೀತಿ ಇಲ್ಲಿ ಸ್ನೇಹ – ದ್ವೇಷಗಳಿಗೂ ರಾಜಕೀಯ ಲೇಪ ಇಲ್ಲವೇ ಇಲ್ಲ. ಮೂಲತ: ವ್ಯಾಪಾರಿಗಳಾದ ಈ ಬ್ರಿಟಿಷರು ರಾಜಕೀಯವನ್ನು ವ್ಯವಹಾರಿಕ ಲಾಭದ ದೃಷ್ಟಿಯಿಂದ ಮಾತ್ರ ಮಾಡುವವರು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಹೈದರನೊಂದಿಗೆ ಜಗಳ ಮಾಡುವುದು ಮೈಸೂರಿನ ಭೂಮಿಯ ಮೇಲೆ ಓಡಾಡಿ ದೊಡ್ಡ ವೀರರಾಜನೊಂದಿಗೆ ಸಹಕರಿಸುತ್ತ ಕೊಡಗಿನ ಭೂಮಿಯನ್ನು ಸುತ್ತಿ ಆಂಗ್ಲರು ಮೈಸೂರಾಗಲೀ, ಕೊಡಗಿನ ನಾಡಾಗಲೀ ಚಿನ್ನ ಭೂಮಿ ಇಂಥ ನೆಲ ಕೈಗೆ ಸಿಕ್ಕುವುದು ಅಪರೂಪದ ಪುಣ್ಯ ಎಂದು ಮನಗಂಡಿದ್ದರು ಎಂದು ಕಾದಂಬರಿಯಲ್ಲಿ ದಾಖಲಿಸಲಾಗಿದೆ. ಇಷ್ಟೆ ಅಲ್ಲದೆ ಮೈಸೂರನ್ನು ಅರಸನ ಕೈಗೆ ಕೊಟ್ಟ ಮೇಲೂ ಅಯ್ಯೋ ಇಂಥ ನೆಲವನ್ನು ನಾವು ಸ್ವಂತಕ್ಕಿಟ್ಟುಕೊಳ್ಳದೆ ಹಿಂದಕ್ಕೆ ಕೊಟ್ಟವೇ ಎಂದು ಆಂಗ್ಲರು ದುಃಖ: ಪಡುತ್ತಾರೆ. ಮತ್ತೆ ಅವಕಾಶ ಸಿಕ್ಕಾಗ ಕೈ ಬಿಡುವುದಿಲ್ಲ ಇಪ್ಪತ್ತು ವರ್ಷದಲ್ಲಿ ಟಿಪ್ಪುವಿನ ಸೋಲಿನ ಸಂದರ್ಭದಲ್ಲಿ ಇವರ ಮನೋಧರ್ಮ ಮತ್ತಷ್ಟು ಬೇರೆಯಾಯಿತು.

ಈ ದೃಷ್ಟಿಯಿಂದ ನೋಡಿದರೆ ಚಿಕವೀರನ ಕೊಡಗಿನ 'ವಿಧಿ' ಪೂರ್ವ ನಿಶ್ಚಿತವೇ ಆಗಿದೆ. ಅಂದರೆ ಮುಳುಗದ ಚಕ್ರಾಧಿಪತ್ಯದ ಎದುರಿನಲ್ಲಿ ಸಣ್ಣ ಪುಟ್ಟ ರಾಜನ ರಾಜ್ಯಗಳ ಅಭೀಪ್ಸೆಗಳಿಗೆ ಏನೂ ಅರ್ಥವಿಲ್ಲ. ಆದರೆ ಇದನ್ನು ಎದುರಿಸುವಲ್ಲಿ ಚಿಕವೀರನಾಗಲೀ, ಕೊಡಗಲೀ ತಮ್ಮ ಘನತೆಯನ್ನು ಮರೆಯುವುದಿಲ್ಲ ಎಂಬುದೇ ಬಹುದೊಡ್ಡ ದುರಂತ. ಚಿಕವೀರರಾಜ ಬ್ರಿಟಿಷರ ಆಗಮನಕ್ಕಿಂತ ಮೊದಲೇ ತನ್ನವರಿಂದಲೇ ಪದಚ್ಯುತನಾಗಿರುತ್ತಾನೆ! ಅವನನ್ನು ಪದಚ್ಯುಗೊಳಿಸಿದವರಿಗೆ ಸ್ವತ: ಸಿಂಹಾಸನದ ಮೇಲೆ ಆಸೆ ಇಲ್ಲ; ಕೊಡಗಿನ ಜನತೆಯನ್ನು ದುಷ್ಟ ಅರಸನ ಆಳ್ವಿಕೆಯಿಂದ ಪಾರು ಮಾಡುವುದು ಅವರಿಗೆ ಮುಖ್ಯವಾಗಿರುತ್ತದೆ. ಪ್ರಾದೇಶಿಕ ಸಂಸ್ಥಾನವಾದ ಕೊಡಗಿನಲ್ಲಿ ಬ್ರಿಟಿಷರು ತಮ್ಮ ಆಡಳಿತ ನಡೆಸಲು ಪ್ರಾರಂಭಿಸುತ್ತಾರೆ. ಅಂದರೆ ಕೊಡಗು ಮತ್ತು ಬ್ರಿಟಿಷರ ನಡುವಿನ ಸಂಬಂಧ ಹಿಂದಿನ ರಾಜನ ಕಾಲದಿಂದಲೂ ಇದ್ದು, ಈವಿಷಯ 'ಚಿಕವೀರ ರಾಜೇಂದ್ರ' ಕಾದಂಬರಿಯಲ್ಲಿ ಗುರುತಿಸುವುದನ್ನು ನೋಡಬಹುದು.

"1947ರಿಂದ ಸ್ವಾತಂತ್ರ್ಯ ಸಿಕ್ಕಿದ ತರುವಾಯ ಅಷ್ಟರವರೆಗೆ ಹದಗಟ್ಟಿದ್ದ ಕೊಡಗಿನ ಜನರ ಆರ್ಥಿಕ ಸ್ಥಿತಿಯು ಬಹಳ ಹೆಚ್ಚಾಗಿ ಉತ್ತಮಗೊಂಡಿದೆ. 1923ರ ವರೆಗೆ ಇಡೀ ದೇಶದಲ್ಲಿ ಒಂದು ಸ್ಕೂಲು ಮಾತ್ರ ಇದ್ದಿತು. ಈಗ (1968) 35 ಸ್ಕೂಲಿಗಿಂತಲೂ ಹೆಚ್ಚಾಗಿವೆ."[16] ಕೇವಲ 3–4 ಮೈಲಿಗಳ ದೂರದಲ್ಲಿ ಎಷ್ಟೆಲ್ಲ ಪ್ರೌಢ ಶಾಲೆಗಳು ಇವೆ. ಜನರಲ್ಲಿ ವಿದ್ಯಾಮಾನದೊಂದಿಗೆ ಉತ್ತಮ ಆರ್ಥಿಕ ಸ್ಥಿತಯೇ ಮೂಲಕಾರಣ.ವಿದ್ಯೆಯು ಬಹಳ ಮಟ್ಟಿಗೆ ಪ್ರಗತಿಗೊಂಡಿದೆ ಅನುವುದಕ್ಕೆ ಶಾಲೆಗಳ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತಿರುವುದು. ಕಾಫಿ, ಏಲಕ್ಕಿ ಮೊದಲಾದ ವ್ಯವಸಾಯಗಳು ಕೊಡಗು ಜನರ ಸೋಮಾರಿತನವನ್ನು ನಿರ್ಮೂಲಗೊಳಿಸಿದ್ದುದಲ್ಲದೆ, ಅವರ ಆರ್ಥಿಕ ಸ್ಥಿತಿಯನ್ನು ಯಥೇಷ್ಟವಾಗಿ ಉತ್ತಮಗೊಳಿಸಿ ಜನಜೀವನ ಮಟ್ಟವನ್ನು ಏರಿಸಿ ಅವರ ಸುಖ ಸಂಪತ್ತನ್ನು ಸರ್ವತೋಮುಖವಾಗಿ ಬೆಳೆಸಿವೆ. ಈ ವ್ಯವಸಾಯ ಅಲ್ಲಿಯ ರೈತರ ವರ ಪ್ರಾಸಾದವಾಗಿ ಬಂದಿದೆ. ಕತ್ತಳೆ ತೋಟ, ಕರಿಮೆಣಸು, ಇವೆಲ್ಲವೂ ಕೊಡಗಿನ ಜನರ ಸುಖ ಸಂಪತ್ತನ್ನು ವೃದ್ಧಿಗೊಳಿಸಿದೆ. ಕೊಡಗಿನ ಎರಡು ಮಾಹಾಮಾರಿಗಳಾದ ಲಂತಾನ ಮತ್ತು ಮಲೇರಿಯವು 1935 ಸುಮಾರಿನಲ್ಲಿ ಬಿಟಿಷ್ ಸರ್ಕಾರವು ತಳೆದ ಧೋರಣೆಯಿಂದ ವಿಶಾಲಗೊಂಡು ಪೂರ ಅದೃಶ್ಯವಾಗಿವೆ. ಆದ್ರಿಂದ ಇಂದಿನ ಕೊಡಗು ಹಳಬರಿಗೆ ಒಂದು ವಿಧದಲ್ಲಿ ರಾಮರಾಜ್ಯವೆಂದೇ ತೋರುತ್ತದೆ.

ಕೊಡಗಿನಲ್ಲಿ ಜನರ ಸಾಮಾಜಿಕ ಸ್ಥಿತಿಯು ಮೇಲ್ಮಟ್ಟ ಶ್ರೇಣಿಯಲ್ಲಿದೆ. ಹಲವಾರು ಆಂಗ್ಲರು ಈ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ. ದಕ್ಷಣ ಹಿದುಸ್ತಾನದಲ್ಲಿ ಅದರಲ್ಲಿಯೂ ಹಳೆಯ ಮದ್ರಾಸು ಆಧಿಪತ್ಯದಲ್ಲಿ ಬ್ರಾಹ್ಮಣ–ಬ್ರಾಹ್ಮಣೇತರರೆಂಬ ಮುಖ್ಯ ಭೇದವೂ, ಅಸ್ಪೃಶ್ಯತೆ ಎಂಬ ಪಿಶಾಚಿ ಇವೆರಡು ಸೇರಿ ಅಲ್ಲಿಯ ಸಾಮಾಜದ ಪ್ರಗತಿಗೆ ದೊಡ್ಡ ಕುಂದು ಉಂಟುಮಾಡಿತು. ಆದರೆ ಕೊಟಗಿನಲ್ಲಿ ಈ ಎರಡು ಕೊರತೆಗಳು

ತಲೆಎತ್ತಲೇ ಇಲ್ಲ. ಅನಾದಿಕಾಲದಿಂದಲೂ ಕೊಡಗರಲ್ಲಿ ಜಾತಿ ಭೇದವು ಇರಲಿಲ್ಲಿ. ಬ್ರಾಹ್ಮಣರ ಜನಸಂಖ್ಯೆಯು ಅತ್ಯಂತ ಕಡಿಮೆಯಾಗಿದ್ದಿತು.ಆದ್ದರಂದ ಅವರ ಪ್ರಭಾವವು ಕೊಡಗಿನ ನಿವಾಸಿಗಳ ಮೇಲೆ ಬೀಳಲಿಲ್ಲ; ಬದಲು ಕೊಡಗರೇ ಯಜಮಾನರಾಗಿದ್ದರು. ಪೂರ್ವ ಕಾಲದಲ್ಲಿಯೇ ಇಲ್ಲಿನೆಲೆಸಿದ ಪಮಚಮರು. ಸಾಮಾಜಿಕ ದೃಷ್ಟಿಯಲ್ಲಿ ಅತಿ ಕೆಳಮಟ್ಟದಲ್ಲಿದ್ದರೂ ಒಟ್ಟಿಗೆ ಗದ್ದೆ ಕೆಲಸ ಮಾಡುತ್ತಿದ್ದಾಗ ತುಚ್ಚೀಕರಣದಿಂದ ಪರಿಗಣಿಸಿದೆ. ಎಲ್ಲರೂ ಮಿಳಿತರಾಗಿ ಕೆಲಸ ಮಾಡುತ್ತಿದ್ದರು. ಬ್ರಿಟಿಷರ ಆಳ್ವಿಕೆಯಲ್ಲಿ ಹರಿಜನರು ಯಾವ ವಿಧದಲ್ಲಿಯೂ ಮುಂದುವರಿಯಲ್ಲಿಲ್ಲ.

ಆದರೆ ಸ್ವಾತಂತ್ರ್ಯದ ತರುವಾಯ ಸರ್ಕಾರವು ಅವರಿಗೆ ವಸತಿ, ವಿದ್ಯೆ, ಮೊದಲಾದ ಕೆಲವು ಸೌಕಾರ್ಯಗಳನ್ನು ಒದಗಿಸಿದ್ದರಿಂದ ಅವರ ಸ್ಥಿತಿಯು ಬಹಳ ಮಟ್ಟಿಗೆ ಉತ್ತಮಗೊಂಡಿದೆ. ಬಸ್ ಪ್ರಯಾಣವು ಇವರ ಸಾಮಾಜಿಕ ಸ್ಥಿತಿಯನ್ನು ಹೆಚ್ಚಾಗಿ ಮೇಲ್ಮಟ್ಟಕೇರಿಸಿದೆ.ಕೊಡವರ ತರವಾಯ ಬಹಳ ಪ್ರಮುಖವಾದ ಗೌಡುಗಳ ಪರಿಸ್ಥಿತಿಯು 1947ರಿಂದ ತರುವಾಯ ಸರ್ವತೋಮುಖವಾಗಿಪ್ರಗತಿ ಹೊಂದಿದೆ. ವಿದ್ಯೆ ಮತ್ತು ಆರ್ಥಿಕಸ್ಥಿತಿ ಇವೆರಡರಲಲ್ಲಿಯೂ ಇದೊಂದು ಕೋಮು ಬಹಳ ದೊಡ್ಡ ಹೆಜ್ಜೆಯನ್ನು ಇಟ್ಟಿದೆ. ಆದ್ದರಂದ ಸಮಾಜದಲ್ಲಿ ಅವರಿಗೆ ತಾನಾಗಿಯೇ ಒಂದು ಯೋಗ್ಯಸ್ಥಾನವು ಲಭಿಸಿದೆ. ಕೊಡಗಿನಲ್ಲಿ ಸಮಾಜ ಬೆಳವಣಿಗೆಯ ಪ್ರಭಾವವು ಸ್ತ್ರೀಯರನ್ನು ಆವರಿಸಿಕೊಂಡಿದೆ. ಈಗ ಸ್ತ್ರೀಯರಿಗೆ ಸಮಾಜವು ಸಾಧಾರನ ಎಲ್ಲಾ ಸ್ಥಳಗಳಲ್ಲಿ ಸ್ಥಾಪಿತವಾಗದೆ. ಬ್ರಿಟಿಷರ ಸಂಪರ್ಕದಿಂದ ಕೊಡಗಿನ ಸ್ತ್ರೀಯರಿಗೆ ಪುರುಷರು ಎಲ್ಲಾ ಸಾರ್ವಜನಿಕ ಸಭೆಗಳಲ್ಲಿಯೂ ಯೋಗ್ಯಸ್ಥಾನವನ್ನು ಕೊಟ್ಟಿರುವರು. ಹೀಗೆ ಕಡಗಿನಲ್ಲಿ ಎಲ್ಲಾಕೋಮುಗಳು ಸಾಮಾಜಿಕ ದೃಷ್ಟಿಯಲ್ಲಿ ಅಭ್ಯುದಯವನ್ನು ಗಳಿಸಿರುತ್ತಾರೆ. (ಪುಟ–96 ರಿಂದ 98 ರವರೆಗೆ ಜಗತ್ತಿಗೊಂದು ಕೊಡಗು).

ಮಾಸ್ತಿಯವರು ಸಾಮಾಜಿಕ–ಆರ್ಥಿಕ ಪ್ರಕ್ರಿಯೆಯನ್ನು ನೋಡಿರುವ ರೀತಿಯಲ್ಲಿ ಮುಖ್ಯವಾಗಿ ಭಾರತೀಯ ದೃಷ್ಟಿಯೇ ಇದೆ. ಅವರು ಅಸಾಧಾರಣ ಖಚಿತತೆಯಿಂದ ಮೂರ್ತಗೊಳಿಸಿದ ಈ ಐತಿಹಾಸಿಕ ಪ್ರಕ್ರಿಯೆ ದೈವಾಧೀನವಾದುದು ಪೂರ್ವ ನಿಶ್ಚಿತವೆಂದು ಎಂದು ಚಿತ್ರಿಸಿದ್ದಾರಷ್ಟೇ ಅಲ್ಲದೇ ಇತಿಹಾಸ ಒಂದು ದೃಷ್ಟಿಯಿಂದ ಚಕ್ರಾಕಾರವಾಗಿದೆ (ಮಾಸ್ತಿಯವರ ಕಥನದ ಹಿಂದೆ ಕಂಸ–ಕೃಷ್ಣರ ಪುರಾಣ ಕಥೆಯ ಪ್ರಭಾವವಿರುವುದು ಸ್ಪಷ್ಟ) ಎಂದು ಪರಿಗಣಿಸಿದ್ದಾರೆ. ಕಥನ ಶೈಲಿಯಲ್ಲಿ ವ್ಯವಧಾನವಿರುವುದು ಮತ್ತು ಧಾಟಿಯಲ್ಲಿ ಒಂದು ದೃಷ್ಟಿ ಕೋನವನ್ನು ಕಾಯ್ದುಕೊಂಡಿರುವುದು ಭಾರತೀಯ ಮಹಾಕಾವ್ಯಗಳ ಕಥನದಲ್ಲಿ ಕಂಡು ಬರುವ ರೀತಿಯಾಗಿದೆ. ಇಡಿ ಜೀವನದ ಗತಿಯನ್ನು ನಿರ್ಧರಿಸುವುದು ಒಂದು ಶಕ್ತಿ ಹಿಂದೆಯಾಗಲಿ ಅಥವಾ ಇಂದಾಗಲಿ ಈ ಜೀವವೆಂದರೆ ಒಂದು ದೈವಲೀಲೆ ತಾನೇ ಒಳ್ಳೆಯದು ಮತ್ತು ಕೆಟ್ಟದರ ನಡುವಿನ ನಿರಂತರ ಹೋರಾಟ ತಾನೇ ಕೆಟ್ಟದು ಸದ್ಯಕ್ಕೆ ಮೇಲುಗೈ ಪಡೆದಂತೆ ತೋರುತ್ತದೆ ಆದರೆ ಕೊನೆಗೆ ಜಯವಾಗುವುದು ಒಳ್ಳೆಯದಕ್ಕೇ ಅಲ್ಲವೆ.

ಈ ವಸಾಹತುಕರಣದ ಪ್ರಕ್ರಿಯೆಯ ಸಮಗ್ರ ತಿಳಿವಳಿಕೆ ನಮಗಿಂದು ಅತ್ಯಂತ ಅವಶ್ಯವಾಗಿದೆ. ಯಾಕೆಂದರೆ ಈ ಐತಿಹಾಸಿಕ ಪ್ರಜ್ಞೆಯ ಮೂಲಕವೇ ನಾವು ಸಾಂಸ್ಕೃತಿಕವಾಗಿ ವಸಾಹತುಕರಣದ ಅನಿಷ್ಟ ಪರಿಣಾಮಗಳಿಂದ ಸಂಪೂರ್ಣ ಸ್ವತಂತ್ರರಾಗಲು ಸಾಧ್ಯ. ರಾಜಕೀಯವಾಗಿ ಸ್ವಾತಂತ್ರ್ಯವನ್ನು ಗಳಿಸಿದರೂ ನಾವಿನ್ನೂ ಸಾಮಾಜಿಕ-ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಗಳಿಸಬೇಕಾಗಿದೆ ಎಂಬ ಮಾತನ್ನು ಗಮನದಲ್ಲಿಡಬೇಕಾಗಿದೆ. ಚಿಕವೀರರಾಜೇಂದ್ರದಂತಹ ಕಾದಂಬರಿಗಳು ನಮಗೆ ನಿಜವಾದ ಐತಿಹಾಸಿಕ ಯಥಾದೃಷ್ಟಿ ನೀಡುವಲ್ಲಿ ಹಾಗೂ ನಮ್ಮ ಐತಿಹಾಸಿಕ ಸಂದರ್ಭದ ವಿಶಿಷ್ಟತೆಯನ್ನು ನಿರೂಪಿಸಿ ನಮ್ಮ ಐತಿಹಾಸಿಕ ಪ್ರಜ್ಞೆಯನ್ನು ಗಾಢಗೊಳಿಸುವಲ್ಲಿ ಹಾಗೂ ಇವುಗಳ ಮುಖಾಂತರ ಸಾಮಾಜಿಕ-ಸಾಂಸ್ಕೃತಿಕ ದೃಷ್ಟಿಯಿಂದ ವಸಾಹತುವಾದದಿಂದ ಸಂಪೂರ್ಣ ಬಿಡುಗಡೆ ಪಡೆಯುವ ಪ್ರಕ್ರಿಯೆಯನ್ನು ತೀವ್ರಗೊಳಿಸುವಲ್ಲಿ ಅತ್ಯಂತ ಮಹತ್ವದ ಕೆಲಸವನ್ನು ನಿರ್ವಹಿಸುತ್ತವೆ. ಚಿಕವೀರರಾಜೇಂದ್ರ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬಂದ ಅತ್ಯಂತ ಮಹತ್ವದ ಕಾದಂಬರಿ ಎಂಬುದರಲ್ಲಿ ಸಂದೇಹವಿಲ್ಲ. ಅದರ ಸಾರ್ಥಕತೆ ಇದ್ದುದು ವೈಯಕ್ತಿಕ ದುರಂತದ ಚಿತ್ರಣದೊಡನೆ ಸಾಮಾಜಿಕ-ರಾಜಕೀಯ ಅವನತಿಯನ್ನೂ ಮತ್ತು ಒಂದು ಐತಿಹಾಸಿಕ ಪ್ರಕ್ರಿಯೆಯ ಅನಿವಾರ್ಯ ಪ್ರಗತಿಯನ್ನು ಏಕಕಾಲದಲ್ಲಿ ನಿರೂಪಿಸುವುದರಲ್ಲಿ ಅಡಕಗೊಂಡಿದೆ. ಈ ಐತಿಹಾಸಿಕ ಪ್ರಕ್ರಿಯೆಯ ಹಿಂದೆ ಒಂದು ಆಂತರಿಕ ತರ್ಕವಾದ ಅಥವಾ ವಿಚಾರಸರಣಿಯಂತೂ ಇದ್ದೆ ಇದೆ. ಜೊತೆಗೆ ಮಾಸ್ತಿ ಅವರೇ ಕಾದಂಬರಿಯಲ್ಲಿ ಮೇಲಿಂದ ಮೇಲೆ ಬಹಿರಂಗವಾಗಿ ಸೂಚಿಸಿದಂತೆ ಒಂದು ದೈವ ಸಂಕಲ್ಪವೂ ಈ ಪ್ರಕ್ರಿಯೆಯ ಒಂದು ಪ್ರೇರಣೆಯಾಗಿದೆ.

ಕೊಡಗಿನ ಸಂಸ್ಕೃತಿಯು ಉನ್ನತವಾದುದು. ಸಂಸ್ಕೃತಿ ಎಂಬುದು ನಾಗರಿಕತೆಯ ಸಂಸ್ಕೃತಿಯಲ್ಲ ಭರತನಾಟ್ಯ ಸಂಗೀತಕಲೆ ಜಾನಪದ ಹಾಡುಗಳು ಸಂಸ್ಕೃತಿಯ ಒಂದು ಮುಖ್ಯ ಅಂಗವಾಗಿದೆ. ವಿಶ್ವದಲ್ಲಿ ನಾಗರಿಕತೆಯು ಪ್ರಸಿದ್ಧಿಗೊಂಡು ನದಿಗಳು ದಡಗಳಲ್ಲಿ ಉದ್ಭವಾಗಿದೆ. ಈಜಿಪ್ಪಿನ ಜನರ ನಾಗರಿಕತೆಯು ನೈಲು ನದಿಯ ದಡದಲ್ಲಿಯೂ ಬೇನಿಯರ ಹೋ ಹಾಂಗ್ ಹೊ ಯಾಂಗ್ ಸಿಕಿಯಾಂಗ್ ದಡದಲ್ಲಿಯೂ ಬೇಬಿಲೋನಿಯನ್ ತೈಗ್ರಿಸ್ ನದಿಯ ದಡದಲ್ಲಿಯೂ ಕಳೆಯುತ್ತಿದ್ದರು ಹೀಗೆ ಒಂದು ಉತ್ಕೃಷ್ಟ ಸಂಸ್ಕೃತಿ ಅವರ ವಿರಾಮಕಾಲದಲ್ಲಿ ಬೆಳೆಯಿತು. ಭಾರತದ ಜನಸಂಖ್ಯೆಯಲ್ಲಿ ಬಹುಮತಸಲ್ಲಿರುವ ಹಿಂದುಗಳನ್ನು ಬಿಟ್ಟರೆ ಭಾರತದ ಸಂಸ್ಕೃತಿ ಯಾವ ಪರಿಮಾಣದಲ್ಲಿ ಇರುವುದೋ, ಹಾಗೆಯ 80 ಸಾವಿರ ಜನರಿಂದ ಕೊಡಿದ ಅಲ್ಪ ಸಂಖ್ಯಾತರಾದ ಮೂಲ ನಿವಾಸಿಗಳಂದ ಕೊಡವರನ್ನು ವರ್ಜಿಸಿದರೆ ಇತರ ಸಂಸ್ಕೃತಿಯು ಅದೇ ಗತಿಯಲ್ಲಿರುವುದು ಕಾಲ ಹೋಗುತ್ತಾ ಕೊಡಗರ ಜೀವನದ ಬಗೆಯಲ್ಲಿ ಮುಂದಿನ ಒರಟುತನ ಹೋಗಿ ಹೆಚ್ಚೆಚ್ಚು ನಾಗರಿಕತೆ ಪ್ರವೇಶಿಸಲಾರಬಿಸಿತು. ಕಲೆ ಮತ್ತು ಪಾಂಡಿತ್ಯಗಳು ಈಚೆಗೆ ಮಂದಗತಿಯನ್ನು ಹೊಂದುತ್ತಿರುವುದು ಶೋಚನಿಯ ಹಬ್ಬಗಳಲ್ಲಿ ಜಾನಪದ ಹಾಡುಗಳೂ ಕುಣಿತಗಳೂ ಕಡಿಮೆಯಾಗಿದೆ ಮಾದಕ ದ್ರವ್ಯ ಕಡಿಮೆಯಾಗಿ ಕಾಫಿ ಹೋಟೆಲ್‌ಗಳು ಹೆಚ್ಚಿವೆ.

ಜನರು ಹೆಚ್ಚಾಗಿ ರಾಜಕೀಯ ವಿಚಾರ ಮಾತಾಡುವುದರಲ್ಲಿಯೂ ದಿನದ ಸುದ್ದಿಗಳನ್ನು ಕೇಳುವುದರಲ್ಲಿಯೂ, ಪಟ್ಟಣಿಗರು ಸಿನಿಮಾಗಳಿಗೆ ಹೋಗುವುದರಲ್ಲಿ ಆಸಕ್ತರಾಗಿದ್ದಾರೆ.

ಆಂಗ್ಲರು ಕೊಡಗಿನವರ ಜಾನಪದ ಹಾಡುಗಳನ್ನು ಪದ್ಯ ರೂಪದಲ್ಲಿ ಭಾಷಾಂತರಿಸಿದ್ದಾರೆ ಅವರು ಅದರಲ್ಲಿ ಅಡಕವಾಗಿರುವ ಅರ್ಥ ಗರ್ಭಿತವಾಗಿರುವ ಸಂಸ್ಕೃತಿಯನ್ನು ಮನಗಂಡು ಅದನ್ನು ಶ್ಲಾಘಿಸಿರುವರು. ಸ್ವಾತಂತ್ರ್ಯ ತರುವಾಯ ಸಹ ಕೊಡಗಿನ ಕುಣಿತಗಾರರು ಡಿಲ್ಲಿ ಮೊದಲಾದ ಪ್ರದೇಶಗಳಿಗೆ ಹೋಗಿ ಕುಣಿತದ ಕೌಶಲ್ಯತೆಯನ್ನು ಪ್ರದರ್ಶಿಸಿ ಎಲ್ಲಾ ಜನರ ಮೆಚ್ಚುಗೆಯನ್ನು ಪಡೆದಿರುತ್ತಾರೆ. ಜಾನಪದ ಕುಣಿತವಲ್ಲದೆ ಕೊಡಗಿನ ಹೆಸರು ಜನರಲ್ ತಿಮ್ಮಯ್ಯ ಮತ್ತು ಕಾರಿಯಪ್ಪನವರ ದೆಸೆಯಿಂದ ಭಾರತದಲ್ಲೇ ಅಲ್ಲ ವಿಶ್ವದಲ್ಲಿ ಸಹ ಹಬ್ಬಿರುವುದು. ಹರಿದಾಸ ಅಪ್ಪಚ್ಚ ಕವಿಯ ನಾಟಕಗಳಿಂದ ಕೊಡಗು ಸಂಸ್ಕೃತಿಗೆ ಒಂದು ಹೊಸ ವಿಕಾಸವುಂಟಾಯಿತು. ಕೊಡಗಿನ ನಿವಾಸಿಗಳು ಮೈಸೂರಿನೊಂದಿಗೆ ವಿಲೀನದಿಂದ ಅವರ ಶೀಲ ಸ್ವಭಾವದಿಂದಲೂ ಅವರದೇ ಆದ ಒಂದು ವಿಧದ ನೀತಿ ನಡೆತೆಯಿಂದಲೂ, ದಕ್ಷತೆ, ಪ್ರಾಮಾಣಿಕತೆಯಿಂದಲೂ ಕೂಡಿ ಕೆಲಸ ಮಾಡುವುದರಿಂದ ಎಲ್ಲಾ ದೇಶಗಳಲ್ಲಿಯೂ ಅವರು ಯೋಗ್ಯತೆಯನ್ನು ಗಳಿಸಿರುತ್ತಾರೆ. ಈ ಗುಣಗಳು ಸಹ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಾದೆ ಹಿಮಾಲಯವು ವಿಶ್ವದ ಪರ್ವತಗಳಲ್ಲಿ ಹೇಗೆ ಶ್ರೇಷ್ಟವೋ ಪುಷ್ಪಗಳಲ್ಲೆಲ್ಲಾ ಸಂಪಿಗೆಯ ಕೊಡ ಉತ್ಕ್ರಷ್ಟವು ಸ್ಥಾನವನ್ನು ಗಳಿಸಿದೆಯೆಂದು ಕೊಡವ ಜಾನಪದ ಗೀತೆಗಳಲ್ಲಿ ಹಾಡುತ್ತಾರೆ.

ಈ ಮೇಲೆ ತಿಳಿಸಿದ ವಿಷಯ ಕೊಡುಗು ಯಾವ ವಿಶಿಷ್ಟ ಜನಾಂಗ ಸಂಸ್ಕೃತಿ ಮತ್ತು ಜೀವನ ವಿಧಾನವನ್ನು ರೂಪಿಸಿ ಕೊಡವ ಎಂದು ತಿಳಿಸಲಾಗಿದೆ. ಕಾದಂಬರಿಯ ಜೀವನ ಚಿತ್ರಣದ ವಿಶಾಲ ಅಂದಿನ ಸಮಾಜದ ಬೇರೆ-ಬೇರೆ ಮುಖಗಳ ಮತ್ತು ಅದರ ಬೇರೆ-ಬೇರೆ ಸ್ತರಗಳ ಪ್ರಜೆಗಳ ಚಿತ್ರಗಳು ಭೂತಕಾಲವನ್ನು ವರ್ತಮಾನವೋ ಎನ್ನುವಂತೆ ಕಣ್ಣಿಗೆ ಕಟ್ಟಸುತ್ತವೆ ಅಂಧಿನ ಧಾರ್ಮಿಕ ಜೀವನದ ಮುಖ್ಯ ಪ್ರತಿ ನಿಧಿಯಾಗಿ ದಿಕ್ಷಿತ ಕಾಣುತ್ತಾನೆ. ಗೌರಮ್ಮಾಜಿ ಲಕ್ಷ್ಮೀ ನಾರಯಣಯ್ಯ ಬೋಪಣ್ಣ ಚಿಕ್ಕಣ್ಣಶೆಟ್ಟಿ ಉತ್ತಯ್ಯತಕ್ಕ ಚೋಮ ಮುಂತಾದವರು ನಿಚ್ಚಳವಾಗಿ ಮೂಡುತ್ತದೆ ಪಾದ್ರಿ ಮೇಗ್‌ನಿಂಗ್ ಅಂದಿನ ಮಿಷನರಿಗಳನ್ನು ಪ್ರತಿನಿಧಿಸುತ್ತಾನೆ. ದೀಕ್ಷಿತನೂ ಭಗವತಿಯೂ ಅವನ ಮುಂದೆ ಹಿಂಧೂ ಧರ್ಮವನ್ನು ಎತ್ತಿಹಿಡಿಯುವ ವಾದದ ಕಥಾಭಾಗ ಸ್ವಾರಸ್ಯ ವಾಗಿದೆ. ಚಿಕ್ಕಣ ಶೆಟ್ಟ ಅರಮನೆಯೊಡನೆಇಟ್ಟುಕೊಂಡ ಸಂಬಂಧ ಮತ್ತು ರಾಜನ ತಂದೆ ಏರ್ಪಡಿಸಿದ್ದ ಕಂದಾಯ ವ್ಯವಸ್ಥೆ ಅಂದಿನ ಆರ್ಥಿಕ ವ್ಯವಸ್ಥೆಯನ್ನು ಕಾಣಿಸಿಕೊಡುತ್ತದೆ ರಾಜನ ದೊಡ್ಡಮ್ಮನ ನಿಧಿಯ ಬಗ್ಗೆ ಮತ್ತು ಅವರ ಬಡ್ಡಿಯ ಬಗ್ಗೆ ಕಂಪನಿಯೊಡನೆ ಹಾಗೂ ಆಭರಣಗಳ ಬಗ್ಗೆ ದೊಡ್ಡಮ್ಮನೊಡನೆಯೂ, ತಂಗಿಯೊಡನೆಯೂ ರಾಜನ ವ್ಯವಹಾರ ಮತ್ತು ಆತನ ದುಂದು ವೆಚ್ಚ ಇವುಗಳ ಚಿತ್ರಗಳೂ ಕಾಣಸಿಗುತ್ತದೆ.

ಬೇಟೆಯ ಕಾಲದಲ್ಲಿ ಉತ್ತಯ್ಯ ತನ್ನ ಪೌರುಷ ಪ್ರದರ್ಶನ ಮಾಡಿ ರಾಬಿನ್ ಹುಡ್ ಎಂದು ಪ್ರಶಂಸೆ ಪಡೆಯುತ್ತಾನೆ. ಹಾಗೇಯೇ ರಾಜನ ದೇಹ ಸ್ಥಿತಿ ಎಷ್ಟು ಕೆಟ್ಟಿದ್ದರೂ ರಾಜ ಕೋವಿಯನ್ನು ಉಪಯೋಗಿಸುವುದರಲ್ಲಿ ಸಮರ್ಥ ಎಂದು ತೋರಿಸಿಕೊಡುತ್ತಾನೆ.

ಕೆಳವರ್ಗದ ಸ್ವಾಮಿ ನಿಷ್ಠೆ ಚೋಮನಲ್ಲಿ ಎದ್ದು ಕಾಣುತ್ತದೆ ಕೈಲು ಹಬ್ಬದ ಆಚರಣೆಯಂತಹ ವಿಶಿಷ್ಟ ಸಾಮಾಜಿಕ ಜೀವನ ಚಿತ್ರಗಳು ಅಲ್ಲಲ್ಲಿ ಬರುತ್ತವೆ. ಎರವ ಕೊಗ್ಗಿನಿಂದ ಹಿಡಿದು ಅರಸನವರೆಗೆ ಎಲ್ಲ ಬಗೆಯ ಜನರ, ಹಾರವರ, ಕೊಡವರ, ಶೆಟ್ಟರ, ವರ್ತಕರ, ವೀರರ, ಮುತ್ಸದಿಗಳ, ಅರ್ಚಕರ, ಉಪಾಸಕರ ಅಂತೆಯೇ ಆಂಗ್ಲರ ಜೀವನ ಶೈಲಿಗಳನ್ನು ಯಥಾವತ್ತಾಗಿ ಚಿತ್ರಿಸುತ್ತದೆ ಕಾದಂಬರಿ. ಪಾತ್ರಗಳಾಡುವ ಮಾತಿನ ಔಚಿತ್ಯ ಮತ್ತು ಪ್ರಾದೇಶಿಕ ಸೊಗಡು ಕಾದಂಬರಿಯ ವಾಸ್ತವಿಕ ಜೀವನ ಚಿತ್ರಣಕ್ಕೆ ನೆರವಾಗುತ್ತದೆ. ಕಾದಂಬರಿ ಶಿಲ್ಪ ಕಾದಂಬರಿಯ ವಸ್ತು ವಿನ್ಯಾಸಕ್ಕೆ ಹೆಚ್ಚು ಸಂಬಂಧಿಸಿದರೂ ಸಾಹಿತ್ಯ ಶಿಲ್ಪಿ ಕಡೆದು ನಿಲ್ಲಿಸಿರುವ ಪಾತ್ರ ಮೂರ್ತಿಗಳನ್ನು ಮರೆಯುವಂತಿಲ್ಲ. ದುರಂತ ನಾಯಕ ಚಿಕವೀರರಾಜೇಂದ್ರ ಏಕೆ ಇಷ್ಟು ದುರುಳನಾದ, ಸ್ವೇಚ್ಛಾವರ್ತಿಯಾದ, ನಿರಕುಶನಾದ, ನೃಶಂಸನಾದ ಎಂಬ ಪ್ರಶ್ನೆ ಕಾದಂಬರಿಯ ಮೊದಲಲ್ಲೇ ಹೇಳುತ್ತದೆ. ಗೀತೆಯಲ್ಲಿ ಅರ್ಜುನನ ಪ್ರಶ್ನೆ 'ಅರ್ಥಕೇನ ಪ್ರಯುಕ್ತೇನ ಪಾಪಂ ಚರತಿ ಪುರುಷ:ಅನಿಚ್ಛನ್ನಿವ ವಾರ್ಷ್ಣೇಯ ಬಲಾವಿವ ನಿಯೋಜಿತ:' ದೀಕ್ಷಿತನ ಮನಸ್ಸಿನಲ್ಲಿ ಸುಳಿಯುತ್ತದೆ.

ರಾಜನು ಬಾಲ್ಯದಲ್ಲಿ ಬೆಳೆದ ಪರಿಸರ ಅವನನ್ನು ದುರ್ಮಾರ್ಗಕ್ಕೆ ಹಚ್ಚಿರಬಹುದೆಂದು ನಾವು ಸೂಚಿಸಬಹುದು. ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಲೇಖಕರು ಒಂದು ಪ್ರಸಂಗದಲ್ಲಿ ಕ್ರೈಸ್ತ ಹಾಗೂ ಹಿಂದೂ ಧರ್ಮದ ಪ್ರತಿನಿಧಿಗಳ ನಡುವಿನ ವಾಗ್ವಾದವನ್ನು ಚಿತ್ತಿಸಿದೆ. ಇಲ್ಲಿ ಬರುವ ಮೋಗ್ಲಿಂಗ್ ಐತಿಹಾಸಿಕ ವ್ಯಕ್ತಿ. ಆತ ಕೊಡಗಿನಲ್ಲಿ ಕ್ರೈಸ್ತ ಧರ್ಮವನ್ನು ಹರಡಲು ಬಹಳ ನಿಷ್ಠೆಯಿಂದ ಶ್ರಮಿಸಿದವನು. ಅವನು ತನ್ನ ಧರ್ಮದ ಘನತೆಯನ್ನು ಉತ್ಸಾಹದಿಂದ ವಿವರಿಸಿದಾಗ ದೀಕ್ಷಿತ ಹಿಂದೂ ಧರ್ಮದ ಮಹತ್ವವನ್ನು ಬಹು ಅರ್ಥಗರ್ಭಿತ ರೀತಿಯಲ್ಲಿ ಹೇಳಿದರು.(ಪುಟ-272-277) ರಾಜನ ಸಭೆಯಲ್ಲಿ ನಡೆದ ಈ ಚರ್ಚೆಯಲ್ಲಿ ಇದ್ದಕ್ಕಿದ್ದಂತೆ ಕಾಣಿಸಿಕೊಂಡ ವ್ಯಕ್ತಿ ಭಗವತಿ, ಕ್ರೈಸ್ತ ಧರ್ಮದ ನಂಬಿಕೆಗಳನ್ನು, ಪದ್ಧತಿಗಳನ್ನು ಪ್ರಶ್ನಿಸುವ ರೀತಿ ಹಿಂದೂಗಳಿಗೆ ಕ್ರೈಸ್ತ ವಂಶದ ಬಗ್ಗೆಯಿದ್ದ ಸಂದೇಹಗಳನ್ನು ಬಹು ಸುಲಭವಾಗಿ ವಿವರಿಸಿ ಹೇಳುತ್ತಾಳೆ. ಹೀಗೆ ಕೊಡಗಿನ ಸಮಾಜದ ಹಾಗೂ ಅಲ್ಲಿನ ರಾಜಕೀಯ ವಿದ್ಯಮಾನಗಳ ನಿರೂಪಣೆ ಹಾಸುಹೊಕ್ಕಾಗಿ ಕಾದಂಬರಿ ಮುಂದುವರಿಯುತ್ತದೆ. ಚಿಕವೀರರಾಜ ಹುಟ್ಟಿನಿಂದಲೇ ದುಷ್ಟನಲ್ಲ ಅವನಿಗೆ ಆರು ವರುಷದ ಹುಡುಗನಾಗಿ ಇತರ ಹುಡುಗರೊಂದಿಗೆ ಒಡನಾಡಬಹುದಾದ ದಿನಕ್ಕೆ ಇವನಿಗೆ ಬಸವ ಜೊತೆಗಾರನಾದ. ಬಸವ ಯಾರು ಎಂದು ತಿಳಿದಿರಲಿಲ್ಲ ಆದರೂ ಬಸವ ವೀರರಾಜನಿಗಿಂತ ಕೆಲವು ವರ್ಷ ಹಿರಿಯವನಾಗಿದ್ದನು. ಬಹು

ಚುರುಕಾಗಿದ್ದನು ಅವನನ್ನು ಜನ 'ಕುಂಟ' ಎಂದು ಕರೆಯುತ್ತಿದ್ದರು. ವೀರರಾಜನ ತಾಯಿಯ ಆರೋಗ್ಯ ಸರಿಯಿಲ್ಲದ ಕಾರಣ ಇವನು ದಾದಿಯ ಕೈಯಲ್ಲಿ ಬೆಳೆಯ ಬೇಕಾಗಿತ್ತು. ಇನ್ನು ಅವನ ತಂದೆ ಆಡಳಿತವೆಂದು ತನ್ನ ಮಗನ ಕಡೆಗೆ ಗಮನ ಹರಿಸುತ್ತಿರಲಿಲ್ಲ. ಇದರಿಂದ ಕುಂಟ ಬಸವನೇ ಎಲ್ಲಾ ರೀತಿಯಲ್ಲಿಯೂ ಹತ್ತಿರನಾದನು ತನ್ನ ತಂದೆ ತೀರಿಕೊಂಡ ನಂತರ ಚಿಕವೀರರಾಜ ಆಡಳಿತಕ್ಕೆ ಬಂದನು. ತಂದೆ ಸಾಯುವ ಮೊದಲೆ ಚಿಕವೀರರಾಜನಿಗೆ ಗೌರಮ್ಮ ಎಂಬ ಕೊಡಗರ ಹೆಣ್ಣನ್ನು ತಂದು ವಿವಾಹ ಮಾಡಿದರು. ಚಿಕವೀರರಾಜನಿಗೆ ಒಂದು ಹೆಣ್ಣು ಮಗಳು ಹುಟ್ಟಿದಳು ರಾಜನಿಗೆ ಮಗಳು ಎಂದರೆ ತುಂಬಾ ಅಕ್ಕರೆ ಎಷ್ಟೇ ಕೋಪವಿದ್ದರೂ ಮಗಳನ್ನು ನೋಡಿದ ತಕ್ಷಣ ಕೋಪದಿಂದ ಮುಕ್ತನಾಗುತ್ತಿದ್ದನು. ಆದರೆ ಗೌರಮ್ಮನ ಶುದ್ಧ ಪದ್ದತಿ ಶುಚಿ ರುಚಿಗಳಿಂದ ತೃಪಿ ದೊರೆಯುವುದು ಸಾಧ್ಯವಲ್ಲ.

ಬಸವನ ಸಹವಾಸದಲ್ಲಿ ಹವಣುತಪ್ಪಿದ ತರುಣ ಈ ತರುಣಿಯನ್ನು ಕಂಡದ್ದೇ ಮೊದಲ ಬಾರಿ ಆಗಿದ್ದರೆ ರಾಜಕುಮಾರನ ಜೀವನ ಯಾವ ತಪಸ್ಸಿಗೆ ಏರಬಹುದಾಗಿತ್ತೋ ಹೇಳುವಂತಿಲ್ಲ ಆದರೆ ಅವನ ದುರದೃಷ್ಟಕ್ಕೆ ಇವರ ಎರಡು ಬಾಳು ಬೆರೆತು ಒಂದಾಗುವ ದಿನಕ್ಕೆ ಅವನು (ಪುಟ–44 ಪೂರ್ವಕಥೆ) 'ಕೇಸರಲ್ಲಿ ಮುಳುಗುವುದೇ ಒಂದು ಸುಖ ಎನ್ನುವ ಎಮ್ಮೆಯಂತೆ' ದಾರಿ ತಪ್ಪಿದ್ದನು. ತನ್ನ ರುಚಿಯನ್ನು ಕೆಡಿಸಿಕೊಂಡಿದನು. ಲಿಂಗರಾಜನ ದಿನದಲ್ಲಿ ಭಯದಿಂದ ನಡೆದುಕೊಳ್ಳುತ್ತಿದ್ದ ಕುಂಟ ತನ್ನ ಗೆಳೆಯನೇ ದೊರೆಯಾದ ಮೇಲೆ ತೀರ ಧೈರ್ಯದಿಂದ ನಡೆದುಕೊಳ್ಳ ತೊಡಗಿದನು ಮೂರು ವರ್ಷದಲ್ಲಿ ವೀರರಾಜ ಅವನನ್ನು ಮಂತ್ರಿಯಾಗಿ ನೇಮಿಸಿಕೊಂಡನು. ವೀರರಾಜ ಅರಸನಾದಾಗ ಬೋಪಣ್ಣ ಲಕ್ಷ್ಮೀನಾರಾಯಣಯ್ಯನವರೊಂದಿಗೆ ನಾಡತಕ್ಕ ಪೊನ್ನಪ್ಪ ಎಂಬ ಮೂರು ಜನ ಮಂತ್ರಿಗಳಿರುತ್ತಾರೆ. ಅರಸನ ಅವಿವೇಕವನ್ನು ನೋಡಿ ಸಹಿಸುವಷ್ಟು ಸಹಿದ ಮೂರನೇ ವರ್ಷದ ಮೇಲೆ ಪೊನ್ನಪ್ಪ ತನ್ನ ಸ್ಥಾನದಿಂದ ಸರಿದು ನಿಂತನು. ನನಗೆ ದೇಹಸ್ಥಿತಿ ಚೆನ್ನಾಗಿಲ್ಲ ಬೇರೆಯವರನ್ನು ನೇಮಿಸಿಕೊಳ್ಳಬೇಕು ಎಂದು ಹೇಳಿದನು. (ಪುಟ–44). ಮೂರನೆಯ ಮಂತ್ರಿಯ ಸ್ಥಾನಕ್ಕೆ ರಾಜ ಬಸವನನ್ನು ನೇಮಿಸಿಕೊಂಡನು. ಕುಂಟ ಬಸವ ಮಂತ್ರಿಯಾಗಿರುವುದು ಬೋಪಣ್ಣ ಮತ್ತು ಲಕ್ಷ್ಮೀನಾರಾಯಣಯ್ಯನಿಗೆ ಇಷ್ಟವಿರಲಿಲ್ಲ.ವೀರರಾಜನಿಗೆ. ಇದು ಅರಮನೆಯಲ್ಲಿ ವಾಡಿಕೆ ತಂದೆ ಮಗಳಿಗಾಗಿ ಅಪ್ಪಂಗೊಳದ ಅರಮನೆಯನ್ನು ಮೀಸಲು ಮಾಡಿದ್ದರು. ಅವನಿಗೆ ಬೇಕಾದಷ್ಟು ಒಡವೆ ವಸ್ತ್ರವನ್ನು ತುಂಬಿದ್ದನು ಮಗಳು ಅಳಿಯನನ್ನು ಸುಖವಾಗಿ ಇಡಬೇಕು ಎಂಬ ಆಸೆ ಲಿಂಗರಾಜನದು. ಲಿಂಗರಾಜ ತಾನು ಸಾಯುವಾಗ ಮಗನಿಗೆ 'ತಂಗೀನ ಪ್ರೀತಿಯಿಂದ ನೋಡಿಕೊಳ್ಳಪ್ಪ' ಎಂದು ಹೇಳಿದ್ದರು ಅಷ್ಟೆ ಅಲ್ಲದೆ ಸೊಸೆ ಗೌರಮ್ಮನನ್ನು ಕರೆದು 'ನಾನು ನಿನಗೆ ಏನೂ ಕಡಿಮೆ ಮಾಡಿಲ್ಲ ನಿನ್ನ ಅತ್ತಿಗೆಗೆ ಕೊಟ್ಟಿರುವ ಯಾವ ವಸ್ತುವನ್ನು ಮುಟ್ಟಬೇಡ. ಅವಳಿಗೆ ಕೊಟ್ಟದು ಅವಳದಾಗಿ ಇದ್ದು ಬಿಡಲಿ' ಎಂದಿದ್ದನು. ಚನ್ನಬಸವ ತುಂಬಾ ಬುದ್ಧಿವಂತನಾಗಿದ್ದನು

ವೀರರಾಜನ ದುಷ್ಟತನವನ್ನು ನೋಡಿ ಅಳಿಯಂದಿರನ್ನು ನೋಡಿ ಕಲಿ ಎಂದು ಹೇಳುತ್ತಿದ್ದರು ಆದರೆ ಲಿಂಗರಾಜ ಮರಣ ಹೊಂದಿದ ನಂತರ ಅಪ್ಪಂಗೊಳಕ್ಕೆ ಹೋಗಿ ಚೆನ್ನ ಬಸವನನ್ನು ಹೊಡೆದು ರಂಪ ಮಾಡಿ ತಂಗಿಯನ್ನು ಹಿಡಿದು ಬಲಾತ್ಕಾರದಿಂದ ಎಳೆದು ತಂದು ಅರಮನೆಯಲ್ಲಿ ಸೆರೆಯಲ್ಲಿ ಇಟ್ಟಕೊಂಡಿದ್ದನು. ತನ್ನ ಹೆಂಡತಿ ಮಗಳು ಬೇಡಿಕೊಂಡರು ಬಿಡಲು ಒಪ್ಪುವುದಿಲ್ಲ ಕೊನೆಗೆ ಚೆನ್ನ ಬಸವ ಆಂಗ್ಲರಿಗೆ ಪತ್ರದ ಮೂಲಕ ದೂರು ಕಳುಹಿಸಿದನು ಇದನ್ನು ತಿಳಿದ ವೀರರಾಜನ ಮನಸ್ಸು ಮತ್ತಷ್ಟು ಕಲ್ಲಾಗಿ ದೇವಮ್ಮಾಜಿ ಕೊನೆಯವರೆಗೆ ಸೆರೆಯಲ್ಲಿಯೇ ಇರುವಂತೆ ಮಾಡುತ್ತೇನೆ ಎಂದು ನಿಶ್ಚಯಿಸಿಕೊಂಡನು. ಈ ಹೇಳಿಕೆಯೂ ಸಹ ರಾಜನ ಗುಣ ದೋಷ ಏನೂ ಎಂಬುದನ್ನು ತಿಳಿಯಬಹುದು. ಕುಂಟ ಬಸವನಿಗೆ ಮಂತ್ರಿ ಸ್ಥಾನವನ್ನು ಕೊಟ್ಟ ಜನರ ದ್ವೇಷವನ್ನು ಹೆಚ್ಚಿಸಿಕೊಂಡನು. ಮೊದಮೊದಲಲ್ಲಿ ಅರಸನಿಗೆ ಮಧ್ಯ ಮಾಂಸ ಸ್ತ್ರೀಯರನ್ನು ಒದಗಿಸಿ ಅವನ ಒಲುಮೆಯನ್ನು ಗಳಿಸಿದ ಕುಂಟ ಬರಬರುತ್ತ ತಾನೇ ಅವನಿಗೆ ಎಚ್ಚರ ಹೇಳಬೇಕಾಗುತ್ತದೆ. ಆದರೆ ವೀರರಾಜ ಅವನ ಮಾತಿನ ಕಡೆಗೆ ಗಮನ ಹರಿಸುವುದಿಲ್ಲ ದೊರೆ ಜಾರುಬಂಡೆಯಲ್ಲಿ ಕುಳಿತು ಜಾರಿತ್ತಿದ್ದಾನೆ ತನ್ನ ಸ್ಥಾನವನ್ನು ಅತಂತ್ರ ಮಾಡಿಕೊಳ್ಳುತ್ತಿದ್ದಾನೆ ಎಂಬುದು ಬಸವನಿಗೆ ತಿಳಿಯಿತು.

ಆಳ್ವಿಕೆಯ ಅವ್ಯವಸ್ಥೆ ಹೆಚ್ಚಾದಂತೆ ನಾಡ ಜನ ಅನೇಕರು ಸಹಜವಾಗಿ ವೀರರಾಜನ ವಿಷಯದಲ್ಲಿ ಬೇಸರಗೊಂಡರು ಕೊಟ್ಟ ಕಂದಾಯವನ್ನು ಮರಳಿ ಕೊಡಬೇಕೆಂಬ ಕಿರುಕುಳಕ್ಕೆ ಸಿಕ್ಕದವರು, ಇಷ್ಟವಿಲ್ಲದೆ ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಅರಮನೆಗೆ ಕಳುಹಿಸಬೇಕಾಗುತ್ತದೆ. ಭಾಗಮಂಡಲದ ಚೆನ್ನ ವೀರಣ್ಣ ಎಂಬುವನು ಅಂದರೆ ಇವರ ಹಿರಿಯರು ಅರಮನೆಯಲ್ಲಿ ಸೇವೆಯಲ್ಲಿದ್ದರು ಅಪ್ಪಾಜಿ ದೊರೆಯಾಗಬೇಕಾಗಿತ್ತು ಅವನನ್ನು ತಪ್ಪಿಸಿ ಲಿಂಗರಾಜ ದೊರೆಯಾದ. ಒಂದು ರೀತಿಯ ಅತೃಪ್ತಿ ಆದರೆ ನಾಡಿನ ಜನ ದೊಡ್ಡ ವೀರರಾಜ ಅಪ್ಪಾಜಿಯನ್ನು ಕೊಲ್ಲಿಸಿದನೆಂದು ನಂಬಿದ್ದಾರೆ. ಆದರೆ ಅವರು ಆಂಗ್ಲರ ಸಹಾಯ ಪಡೆದು ಮೈಸೂರಿನಲ್ಲಿ ಇದ್ದಾರೆ ಏನಾದರೂ ಮಾಡಿ ಅವರಿಗೆ ಈ ದೊರೆತನ ಸಿಗುವಂತೆ ಮಾಡಬೇಕೆಂದು ಪ್ರಯತ್ನಿಸಲು ಬಂದಾಗ ಈ ವಿಷಯ ತಿಳಿದ ಬಸವ ರಾಜನಿಗೆ ಹೇಳಿದಾಗ ಯಾರಿಗೂ ಗೊತ್ತಿಲ್ಲದ ರೀತಿಯಲ್ಲಿ ಅವನನ್ನು ಕೊಲ್ಲಿಸಿದನು. ಇದು ಒಂದು ರೀತಿಯ ಗುಣದೋಷ ಎಂಬುದನ್ನು ತಿಳೀಯಬಹುದು ಅಂದರೆ ರಾಜನ ಮನಸ್ಸು ಎಷ್ಟು ಕಠೋರ ಎಂಬುದನ್ನು ತಿಳಿಯಬಹುದು. ತಾನೊಬ್ಬನೇ ಈ ಕೊಡಗನ್ನು ಆಳಬೇಕು ಬೇರೆ ಯಾರಿಗೂ ಈ ಸ್ಥಾನ ಸಿಗಬಾರದು ನಮ್ಮ ಮನೆತನವೇ ಮುಂದುವರಿಯಬೇಕು ಎಂಬುದು ರಾಜನ ಆಕಾಂಕ್ಷೆಯಾಗಿತ್ತು.

ಆದರೆ ಇವನ ಈ ಹೇಳಿಕೆ ಹೆಚ್ಚು ದಿನ ಉಳಿಯಲಿಲ್ಲ ಆದರೆ ಮೈಸೂರಿನ ಚೀಫ್ ಕಮೀಷನರಿಗೆ ದೊರೆ ಒಂದು ಪತ್ರ ಬರೆದನು. ನಮ್ಮ ನಾಡಿನಲ್ಲಿ ದ್ರೋಹ ಮಾಡಿ ಅಪರಾಧಿಯಾದ ಚೆನ್ನವೀರ ಎಂಬುವವನು ನಿಮ್ಮ ನಾಡಿಗೆ ತಪ್ಪಿಸಿಕೊಂಡು ಬಂದ್ದಿದ್ದಾನೆ. ಅವನನ್ನು ಹಿಡಿದು ನಮ್ಮಲ್ಲಿಗೆ ಕಳುಹಿಸಿಕೊಡಬೇಕು ಎಂದು

ಕಳುಹಿಸಿದನು. ಆದರೆ ಚೆನ್ನವೀರಯ್ಯನನ್ನು ರಾಜ ಕೊಲ್ಲಿಸಿದನು. ಎಂಬುದು ಕಮೀಷನರ್‌ಗೆ ತಿಳಿಯಲಿಲ್ಲ ಜೊತೆಗೆ ಕಮೀಷನರ್ ಒಂದು ಪತ್ರದ ಮೂಲಕ ಚೆನ್ನವೀರಯ್ಯನ ಬಗ್ಗೆ ಕೇಳಿದರು ಅದಕ್ಕೆ ಯಾವುದೇ ಉತ್ತರ ರಾಜನಿಂದ ಬರಲಿಲ್ಲ ಇದರಿಂದ ರಾಜನ ಮೇಲೆ ಆಂಗ್ಲರಿಗೆ ಕೋಪ ಬಂದಿತು. ಚೆನ್ನವೀರಯ್ಯ ಕಣ್ಮರೆಯಾದ ಕೆಲವು ತಿಂಗಳಲ್ಲಿ ಮಡಿಕೇರಿಗೆ ಒಬ್ಬ ವೀರಶೈವ ಸ್ವಾಮಿ ಬಂದನು ಆತ ತನ್ನ ಹೆಸರು 'ಅಪರಂಪರ' ಎಂದು ಹೇಳಿಕೊಳ್ಳುವನು. ಎಲ್ಲಾರೂ ಸೇರಿ ಒಂದು 'ಕಾವೇರಿ ಮಕ್ಕಳ ಕೂಟ' ಏರ್ಪಡಿಸಿದರು ಈ ಕೂಟದ ಪ್ರಕಾರ ಕೇಲವು ಉದ್ದೇಶಗಳನ್ನು ಸ್ಪಷ್ಟವಾಗಿ ರೂಪುಗೊಂಡಿತು.

- ಅರಸ ಬಸವ ತೊಂದರೆ ಪಡಿಸುತ್ತಿದ್ದ ಜನರನ್ನು ಉಪಾಯವಾಗಿ ಆ ತೊಂದರೆಗಳಿಂದ ಬಿಡಿಸುವುದು.
- ಆಡಳಿತದ ವಿಷಯದಲ್ಲಿ ಬೇಸರ ಪಟ್ಟಿದ್ದ ಪ್ರಮುಖರನ್ನು ಕಂಡು ತಮ್ಮ ಉದ್ದೇಶದ ಸಾಧನೆಗೆ
- ಅವರಿಂದ ಸಾಧ್ಯವಾದ ಸಹಾಯವನ್ನು ಪಡೆಯುವುದು.
- ಬೇಸರಪಟ್ಟಿರುವವರಲ್ಲಿ ಮುಖಂಡರನ್ನು ಜೊತೆಗೂಡಿಸಿ ಸಾಧ್ಯವಾದರೆ ಅರಸ ಬಸವ ಇವರಿಗೆ ವಿರೋಧವಾದ ಒಂದು ಪಕ್ಷವನ್ನು ಕಟ್ಟುವುದು ಅರಸನಿಗೆ ವಿರೋಧ ಇರುವುದು ತಿಳಿದು ಆಂಗ್ಲರು ಮೈಸೂರಂತೆ ಕೊಡಗನ್ನು ತಮ್ಮ ವಶಕ್ಕೆ ಹಾಕಿಕೊಳ್ಳದಂತೆ ನೋಡಿಕೊಳ್ಳುವುದು. ವೀರರಾಜ ಆಂಗ್ಲರನ್ನು ಕರೆಸಿ ಅವರಿಗೆ ಉಪಚರಿಸಬೇಕೆಂದುಕೊಂಡನು ಆದರೆ ಅರಸನ ದುಂದಿಗೆ ಹಣ ಸಾಲದೆ ಹೋದದ್ದಕ್ಕೆ ಈಚೆಗೆ ಬೇರೆ ಒಂದು ಕಾರಣ ಸೇರಿತು. ದೇವಮ್ಮಾಜಿಯ ಎಲ್ಲಾ ಆಭರಣಗಳನ್ನು ಕಿತ್ತುಕೊಂಡನು ಅರಸ ಚಿಕ್ಕಣ್ಣ ಶೆಟ್ಟಿಯನ್ನು ಕರೆದು ಹಣವನ್ನು ಹಿಂದಿರುಗಿಸುವಂತೆ ಕೇಳಿದನು. ಅದಕ್ಕೆ ಚಿಕ್ಕಣ್ಣ ಶೆಟ್ಟಿ ನಮ್ಮಲ್ಲಿ ಹಣವಿಲ್ಲ ಎಂದಾಗ ಅರಸ ಅವರ ಮನೆಯ ಹೆಣ್ಣು ಮಕ್ಕಳನ್ನು ಕಳುಹಿಸುವಂತೆ ಕೇಳಿದಳು ಇದು ಒಂದು ರೀತಿಯ ದುಷ್ಟತನವೆಂದು ಹೇಳಬಹುದು.
- ಈ ವಿಷಯ ತಿಳಿದ ಚಿಕ್ಕಣ್ಣ ಶೆಟ್ಟಿ ತನ್ನ ಸೊಸೆಯನ್ನು ಅರಕಲಗೂಡಿಗೆ ಕಳುಹಿಸಿಬಿಟ್ಟನು. ಅಂದರೆ ಅವನಿಗೆ ರಾಜನಲ್ಲಿ ಇದ್ದ ಭಯ ಎಂದು ಹೇಳಬಹುದು ಈ ಎಲ್ಲಾ ವಿಷಯವನ್ನು ಶೆಟ್ಟಿ ಬೋಪಣ್ಣನಿಗೆ ತಿಳಿಸಿದರು. ಈ ವಿಷಯವನ್ನು ಎಲ್ಲರಿಗೂ ತಿಳಿಸುತ್ತೇನೆ ಮುಂದಿನ ದಾರಿ ಏನು ಎಂಬುದನ್ನು ನಾವು ನಾಲ್ಕು ಜನ ಯೋಚನೆ ಮಾಡುತ್ತೇವೆ ನೀನು ಹೆದರ ಬೇಡವೆಂದು ಶೆಟ್ಟಿ ಬೋಪಣ್ಣನಿಗೆ ಸಮಾಧಾನ ಹೇಳಿದನು. ಊರಿನ ಜನಕ್ಕೆ ವಿಷಯ ತಿಳಿಸಿದರು ರಾಜನನ್ನು ಅಧಿಕಾರದಿಂದ ಕೆಳಗಿಳಿಸುವುದೇ ಸರಿ ಎಂದು ಹೇಳಿದರು ಹಾಗಾದರೆ ಗೌರಮ್ಮನನ್ನೇ ರಾಜ್ಯ ಆಳುವಂತೆ ಮಾಡಬೇಕೆಂದು ಒಪ್ಪಿದರು. ಇದಕ್ಕೆ ರಾಣಿ ಒಪ್ಪಲಿಲ್ಲ ಆಗ ಮತ್ತೆ ರಾಜಕುಮಾರಿಯನ್ನು ಕುರಿಸುವುದೋ ಇಲ್ಲವೆ ದೇವಮ್ಮಾಜಿಯನ್ನು ಕುರಿಸುವುದೋ ಎಂದು ಅವರಲ್ಲಿ

ತೀರ್ಮಾನಿಸಿದರು. ಇವರಿಬ್ಬರು ಬೇಡ ಅಪ್ಪಾಜಿ ಎಂದು ಇದ್ದಾರಲ್ಲಾ ಅವರನ್ನು ಕುರಿಸುವುದಾಗಿ ತೀರ್ಮಾನಿಸ್ಸಿದರು. ಅವರು ಒಪ್ಪದಿದ್ದರೆ ಅವರ ಮಗನನ್ನೇ ಗಾದಿಗೇರಿಸುವುದು ಎಂದು ಮಾತುಕತೆಯಾಯಿತು.

- ಆದರೆ ರಾಣಿಗೆ ಈ ವಿಷಯವನ್ನು ಹೇಗೆ ತಿಳಿಸುವುದು ಎಂದು ಹೇಳಿ ಅರಮನೆಯಿಂದ ಪೇಟೆಗೆ ಸಲ್ಲಬೇಕಾದ ಸಾಲ ಬಹಳವಾಗಿ ನಿಂತಿದೆ ದೇಶದ ಭಂಡಾರದಿಂದ ಅರಮನೆಯ ಭಂಡಾರಕ್ಕೆ ಸಲ್ಲಬೇಕಾದದ್ದೆಲ್ಲ ಸಂದಿರುವುದರಿಂದ ಇನ್ನು ಹಣ ಕೊಡಲು ಸಾಧ್ಯವಿಲ್ಲ ಆಡಳಿತ ಬೇರೆಯಾಗದಿದ್ದರೆ ದಾರಿಯೇ ಇಲ್ಲ ಎಂದು ತಿಳಿಸಿದರು. ಸ್ವಲ್ಪ ಸಾಲ ಇರುವಾಗಲೇ ಹೇಳದೇ ಇಷ್ಟು ಸಾಲವಾದ ಮೇಲೆ ಹೇಳಿದರೆ ಏನು ಪ್ರಯೋಜನ ಎಂದಳು. (ಪೂರ್ವಕಥೆ ಪುಟ–78–79). ನನ್ನ ಮಗಳು ಏನೂ ಅರಿಯದವಳು ಒಡವೆಗಳನ್ನು ಕೊಡುತ್ತೇನೆ ಆಗಿರುವ ಸಾಲವನ್ನು ತೀರಿಸುವುದಾಗಿ ರಾಣಿ ಹೇಳಿದಳು. ಲಕ್ಷ್ಮಿನಾರಾಯಣ್ಣಯ್ಯ, ಬೋಪಣ್ಣ ಬಂದ ವಿಷಯ ತಿಳಿದ ರಾಜ ರಾಣಿಗೆ ಬಾಯಿಗೆ ಬಂದಂತೆ ಬೈದನು. ನಂತರ ರಾಜನ ಆರೋಗ್ಯ ಸರಿಯಿಲ್ಲದೆ ಹಾಸಿಗೆ ಹಿಡಿದನು ಆಗ ರಾಣಿ ವೈದ್ಯರನ್ನು ಕರೆಸಿದಳು ನಂತರ ದೇವಸ್ಥಾನಕ್ಕೆ ಪೂಜೆ ಮಾಡಿಸಿದಳು.

ಈ ಎಲ್ಲಾ ಸನ್ನಿವೇಶವನ್ನು ತಿಳಿದ ಆಂಗ್ಲರು ಮೈಸೂರಾಗಲಿ ಕೊಡಗಿನ ನಾಡಾಗಲಿ ಚಿನ್ನದ ಭೂಮಿ ಇಂಥ ನೆಲ ಕೈಗೆ ಸಿಕ್ಕುವುದು ಅಪರೂಪದ ಪುಣ್ಯ ಎಂದು ಕೊಂಡರು. ಏನಾದರೂ ಮಾಡಿ ದೇಶವನ್ನು ತಮ್ಮ ಕೈಗೆ ತೆಗೆದುಕೊಳ್ಳುವ ನಿರ್ಧಾರವನ್ನು ಆಂಗ್ಲರು ತೀರ್ಮಾನಿಸಿದರು ಅದರಲ್ಲಿ ರಾಜನ ಆಡಳಿತ ಈ ಮಡಿಕೇರಿಯ ಜನರಿಗೆ ಸರಿಯಾಗಿ ಕಾಣುತ್ತಿಲ್ಲ ಅವನನ್ನು ಕೆಳಗಿಳಿಸಿದರೆ ಅದನ್ನು ತಾವೇ ಆಳಬೇಕು ಎಂದು ತೀರ್ಮಾನಿಸಿದರು. ಸೆರೆಯಲ್ಲಿಟ್ಟಿದ್ದ ತನ್ನ ತಂಗಿ ಬಸುರಾಗಿರುವುದು ತಿಳಿದು ನೀನು ಯಾರಿಗೆ ಬಸುರಾದಿ ಹೇಳು ಇಲ್ಲದಿದ್ದರೆ ಹಾಕಿಸುತ್ತೇನೆ. ಆಗಲೂ ಅವಳು ಸುಮ್ಮನಿರಲು ಅರಸ ಬಸವನಿಗೆ ಇವಳನ್ನ ತೊಡೆ ಮೇಲೆ ಕೂರಿಸಿಕೊಳ್ಳೋ ಬಸವ ಎಂದು ಹೇಳಿದನು. ಇದರಿಂದ ದೇವಮ್ಮಾಜಿ ದು:ಖಿತಳಾದಳು ಅತ್ತೆ ದು:ಖವನ್ನು ನೋಡಲಾರದೆ ಅಪ್ಪಾಜಿ ಅತ್ತೆಯನ್ನು ಅಪ್ಪಂಗೊಳಕ್ಕೆ ಕಳುಹಿಸಿ ಇಲ್ಲದಿದ್ದರೆ ನಾನು ಊಟ ಮಾಡುವುದಿಲ್ಲವೆಂದು ಹಠ ಹಿಡಿದಾಗ ರಾಜ ತನ್ನ ಮಗಳ ಮಾತಿಗೆ ಒಪ್ಪಿ ದೇವಮ್ಮಾಜಿಯನ್ನು ಅವಳ ಗಂಡನ ಮನೆಗೆ ಕಳುಹಿಸಿದನು. ದೇವಮ್ಮಾಜಿಯನ್ನು ಸೆರೆಯಲ್ಲಿಟ್ಟಿದ್ದ ವಿಷಯವನ್ನು ಚೆನ್ನ ಬಸವ ಆಂಗ್ಲರಿಗೆ ಪತ್ರದ ಮೂಲಕ ತಿಳಿಸಿದನು. ರಾಜನ ದುರಾಡಳಿತ ದಿನೇ–ದಿನೇ ಹೆಚ್ಚಾಗುತ್ತಿದೆ ಇದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಆಂಗ್ಲರು ತೀರ್ಮಾನಿಸಿಕೊಳ್ಳುತ್ತಿದ್ದರು. ಅಷ್ಟೆ ಅಲ್ಲ ಪಾಣೆ ಸೂರ್ಯನಾರಾಯಣನ ಹೆಂಡತಿಯನ್ನು ಸೆರೆಯಲ್ಲಿಟ್ಟಿದ್ದರು.

ಈ ವಿಷಯವು ಸಹ ಆಂಗ್ಲರಿಗೆ ತಿಳಿದಿತ್ತು. ದೇವಮ್ಮಾಜಿ ಗಂಡನ ಮನೆಗೆ ಹೋದ ಮೇಲೆ ಒಂದು ಗಂಡು ಮಗುವಿಗೆ ಜನ್ಮ ನೀಡಿದಳು ಈ ವಿಷಯ ರಾಣಿಗೆ ತಿಳಿಯಿತು ಮಗುವಿನ ಜಾತಕವನ್ನು ನೋಡಿ ಹೇಳುವಂತೆ ರಾಣಿ ದೀಕ್ಷಿತರಿಗೆ ತಿಳಿಸಿದರು. ಅದಕ್ಕೆ ದೀಕ್ಷಿತ ಒಂದು ವರ್ಷ ದೇವಮ್ಮಾಜಿ ಮತ್ತು ಚೆನ್ನ ಬಸವ

ಯಾತ್ರೆಗೆ ಕಳುಹಿಸಿದರೆ ಕ್ಷೇಮ ಎಂದರು. ಉಳಿದ ವಿಷಯವನ್ನು ಸ್ವಲ್ಪ ದಿನದ ನಂತರ ಹೇಳುವುದಾಗಿ ತಿಳಿಸಿದರು.ರಾಣಿಗೆ ಸಂದೇಹ ಉಂಟಾಯಿತು. ಮತ್ತೇ ದೀಕ್ಷಿತನನ್ನು ಕೇಳಿದಾಗ "ಕಂಸನ ಯೋಗದ ಮಾನವ ಹತ್ತಿರ ಅಲ್ಪಯುಷ್ಯದ ಅಳಿಯ" (ಪುಟ–182 ಕಥಾಗರ್ಭ) ಸೋದರ ಮಾವನಿಂದ ಮಗುವಿಗೆ ಮರಣ ಎಂಬುದು, ಜೊತೆಗೆ ಮಗುವಿನ ಆಯುಸ್ಸು ಬಹು ಕಡಿಮೆ ಎಂದು ಕಂಡಿತು. ಈ ವಿಷಯ ತಿಳಿದ ಗೌರಮ್ಮ ತನ್ನ ನಾದಿನಿ ಮತ್ತು ಗಂಡ ಮಗು ಒಂದು ವರ್ಷ ಯಾತ್ರೆಗೆ ಹೋಗುವಂತೆ ಹೇಳಿ ಕಳುಹಿಸುತ್ತಾಳೆ.

ಒಡಯ–ಒಡತಿ,ಮೊಗಾನ ಕಾಯಿರಿ ನಾ, ಸಂತೋಷವಾಗಿ ಸಾಯುತನಿ ಎಂದನು. ಅಂದರೆ ತನ್ನ ಅರಸನಿಗಾಗಿ ತನ್ನ ಪ್ರಾಣವನ್ನು ಕೊಡುವ ಚೋಮನನ್ನು ನೋಡಿದರೆ ಅಯ್ಯೋ ಎನಿಸುತ್ತದೆ. ಇತ್ತಾವರು ಹತ್ತಕ್ಕೆ ಒಬ್ಬರು ನಮ್ಮ ದೇಶದಲ್ಲಿ ಇರಲಾರರು. ಮಡಕೇರಿಗೆ ತಂದ ಮಗುವನ್ನು ನೋಡಿ ರಾಣಿ ತುಂಬಾ ಸಂತೋಷಪಟ್ಟಳು. ಅದನ್ನು ತಾನೇ ಸಾಕುವುದಾಗಿ ಹೇಳಿದಳು. ಚೋಮನನ್ನು ವೀರರಾಜ ಶೂಲಕ್ಕೇರಿಸಿದನು ಎಂಬ ವಿಷಯ ತಿಳಿದು ಚೆನ್ನಬಸವ ತನ್ನ ಮಗುವನ್ನು ತಮ್ಮ ಹತ್ತಿರಕ್ಕೆ ಕರೆಸುವಂತೆ ಆಂಗ್ಲರಿಗೆ ಪತ್ರ ಬರೆದನು. ಆಂಗ್ಲರು ವೀರರಾಜನಿಗೆ ಆ ಮಗುವನ್ನು ತಾಯಿಯ ಹತ್ತಿರ ಕಳುಹಿಸಿ, ನಾವು ನಿಮ್ಮ ತಂಗಿ–ತಂಗಿಯ ಗಂಡನನ್ನು ಕಳುಹಿಸುತ್ತೇವೆ ಎಂದು ಪತ್ರ ಬರೆದರು. ಆದರೆ ರಾಜ ಮೊದಲು ದೇವಮ್ಮಾಜಿ ಮತ್ತು ಚೆನ್ನಬಸವನನ್ನು ಕಳುಹಿಸಿದರೆ ನಾವು ಮಗುವನ್ನು ಕೊಡುತ್ತೇವೆ ಎಂದು ಮತ್ತೆ ಒಂದು ಪತ್ರವನ್ನು ಕಳುಹಿಸಿದನು. ಇದರಿಂದ ಆಂಗ್ಲರಿಗೆ ಗೊತ್ತಾಗುತ್ತಾದೆ ಈ ರಾಜ ಎಷ್ಟು ದಷ್ಟನು ಎಂದು. ರಾಜ ಮಗುವಿಗೆ ಯಾವಾಗ ಬೇಕಾದರು ಏನು ಮಾಡುತ್ತಾನೆಯೋ ಎಂಬ ಭಯದಿಂದ ರಾಣಿ ಮಗುವನು ಹೇಗಾದರು ಮಾಡಿ ಕಳುಹಿಸುವುದಾಗಿ ತೀರ್ಮಾನಿಸಿಕೊಳ್ಳುತ್ತಾಳೆ. ಆದರೆ ಅಷ್ಟರಲ್ಲಿ ವೀರರಾಜ ಅರಮನೆಯಲ್ಲಿ ಎಲ್ಲಾರೂ ನಿದ್ರಿಸುತ್ತಿರುವಾಗ ಮಗುವನ್ನು ಯಾರಿಗೂ ಗೊತ್ತಾಗಾದ ಹಾಗೇ ಕೊಂದನು. ಬಂದ ಸ್ವಲ್ಪ ಸಮಯದ ನಂತರ ಬಸವನನ್ನು ಕರೆದು ತಂಗಿ ಮಗುವನ್ನು ಮುಗಿಸಿ ಬಂದೆ ಎಂದು ಹೇಳಿದನು. ಈ ವಿಷಯ ಆಂಗ್ಲರಿಗೂ ತಿಳಿಯಿತು. ಆಂಗ್ಲರ ಇಬ್ಬರು ಸೇವಕರನ್ನು ಸಹ ಬಂಧಸಿದನು. ಇದರಿಂದ ಕೊಂಪಗೊಂಡುಆಂಗ್ಲರು ಇದೇ ಸರಿಯಾದ ಸಮಯವೆಂದು ತಿಳಿದು ಕೊಡಗಿನ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುವುದಾಗಿ, ಅರಸನನ್ನು ಗಾದಿಯಿಂದ ಕೆಳಗಿಳಿಸಿ, ಬೇರೆ ಕಡೆಗೆ ಕಳುಹಿಸುವುದಾಗಿ ತೀರ್ಮಾಸಿಕೊಂಡು ಕೊಡಗಿಗೆ ಮುತ್ತಿಗೆ ಹಾಕಿ ಕೊಡಗನ್ನು ತಮ್ಮ ವಶಕ್ಕೆ ತೆಗೆದುಕೊಂಡು ಕೊಡಗಿಲ್ಲಿಯೇ ಬೇರೂರಿದರು.

ಆದರೆ ಈ ವಿಷಯ ತಿಳಿದ ರಾಜ ಅದನ್ನು ತಪ್ಪಿಸಲು ತನ್ನ ಸೇವಕರನ್ನು ಕಳಹಿಸುತ್ತಾನೆ. ಆದರೆ ಚೆನ್ನಬಸವ ಉಪಾಯದಿಂದ ಕೈಲು ಹಬ್ಬವೆಂದು ಸುಳ್ಳು ಹೇಳಿ ಪಾಯಸಕ್ಕೆ ಅಫಿಮೂ ಬೆರೆಸಿ ಅವರು ನಿದ್ರಿಸುವಂತೆ ಮಾಡಿ, ಅಪ್ಪಂಗೊಳದಿಂದ ತಪ್ಪಿಸಿಕೊಂಡು ಚೆನ್ನಬಸವ, ದೇವಮ್ಮಾಜಿ, ಅವನ ಮಂತ್ರಿ ಚೋಮ

ಮುಂತಾದವರು ಕುದುರೆ ಏರಿ ಹೋಗುತ್ತಾರೆ. ಆದರೆ ಹೋಗುವ ದಾರಿಯಲ್ಲಿ ಮಗುವಿನ ತೊಟ್ಟಿಲು ಸಡಿಲವಾಗಿ ಮಗು ಜಾರಿ ಕೆಳಕ್ಕೆ ಬಿದ್ದು ಹೋಗುತ್ತದೆ. ಆದರೆ ಇದನ್ನು ಯಾರು ಗಮನಿಸುವುದಿಲ್ಲ. ಸ್ವಲ್ಪ ದೂರ ಹೋಗಿ ನೋಡಿಕೊಳ್ಳುತ್ತಾರೆ. ತೊಟ್ಟಿಲು ಮತ್ತು ಮಗು ಎರಡು ಇರಿವುದಿಲ್ಲ. ಇದರಿಂದ ದೇವಮ್ಮಾಜಿಗೆ ದು:ಖ ಹೆಚ್ಚಾಗುತ್ತದೆ. ಎಲ್ಲಿ ಅರಸನ ಕೈಗೆ ಸಿಕ್ಕಿ ಅದನ್ನು ಕೊಂದು ಹಾಕುತ್ತಾನೆ ಎಂಬ ಭಯ ಹೆಚ್ಚಾಗತ್ತದೆ. ಆದರೆ ಚೆನ್ನಬಸವ ಸಮಾಧಾನ ಮಾಡುತ್ತಾನೆ, ಮತ್ತೆ ಹಿಂದಕ್ಕೆ ಹೋಗಿ ಆಮಗುವನ್ನು ಹುಡುಕಿಕೊಂಡು ಬರುವುದಾಗಿ ಹೇಳಿದಾಗ ಚೋಮ ನೀವು ಯಾರು ಬರಬೇಡಿ ನಾನು ಮಗುವನ್ನು ಹುಡುಕಿಕೊಂಡು ಬರುವಂತೆ ಸಮಾಧಾನ ಹೇಳಿ, ಚೋಮ ಮತ್ತೆ ಕುದುರೆ ಏರಿ ಉಕ್ಕಡದ ಕಡೆಗೆ ಬಂದನು. ಮಗು ಒಬ್ಬ ಕಾವಲುಗಾರನಿಗೆ ಸಿಕ್ಕತು.

ಆದರೆ ಅವನು ಈ ಮಗುವಿನ ಬಟ್ಟೆ ನೋಡಿದರೆ ಗೊತ್ತಾಗುತ್ತದೆ ಇದು ಅಪ್ಪಂಗೊಳದ ಅರಮನೆಯ ಮಗು ಎಂದು ಅದನ್ನು ಅಪ್ಪಂಗೊಳದ ಅರಸನಿಗೆ ಕೊಡುವುದಾಗಿ ಚೋಮ ಮತ್ತು ಮಗುವನ್ನು ಕರೆದುಕೊಂಡು ಹೋಗುವಾಗ ಮಧ್ಯದಲ್ಲಿಯೇ ವೀರರಾಜ ಬರುತ್ತಿರುತ್ತಾರೆ. ಅದನ್ನು ಉಕ್ಕಡದವರು ವೀರರಾಜನನ್ನು ಮಾತನಾಡಿಸಿ ಹೋಗುವ ವಿಷಯವನ್ನು ತಿಳಿಸಿದರು. ಆ̨ಗ ವಿಷಯ ತಿಳಿದ ವೂರರಾಜ ಆ ಮಗು ತನ್ನ ಅರಮನೆಯ ಮಗು ಎಂದು ಹೇಳಿ, ಜೊತೆಯಲ್ಲಿದ್ದ ಚೋಮನನ್ನು ವಿಚಾರಿಸಿದನು. ಆದರೆ ಚೋಮ ಯಾವುದೇ ಕಾರಣಕ್ಕೂ ಒಡಯ-ಒಡತಿಗೆ ದಕ್ಕೆ ಬಾರದಂತೆ ನೋಡಿಕೊಳ್ಳುವಂತೆ ಯೋಚನೆ ಮಾಡಿದನು. ಇವನು ಯಾವುದಕ್ಕೂ ಬಾಯಿ ಬಿಡುವುದಿಲ್ಲ, ಇವನನ್ನು ಶೂಲಕ್ಕೆ ಹಾಕುವುದಾಗಿ ವೀರರಾಜ ಕಂಟನಿಗೆ ಹೇಳಿದನು. ಚೋಮ ತಟ್ಟನೆ ಬಸವನ ಕಾಲಿಗೆ ಬಿದ್ದು "ಒಡೆಯರ ಕಾಲಿಗೆ ಬಿದ್ದೆ, ದಣೀರೆ ನನ್ನ ಶೂಲಕ್ಕೆ ಏರಿಸಿರಿ, ಒಲ್ಲೆ ಅನ್ನೋಲ್ಲ, ಒಡೆಯ-ಒಡತಿ ಮೊಗನ ಕಾಯಿರಿ. ನಾ ಸಂತೋಷವಾಗಿ ಸಾಯುತ್ತಿನಿ" ಎಂದನು.

ಅರಸ "ಸಂತೋಷ ಅಲ್ಲದಿದ್ದರೆ ಅಳತಾ ಸಾಯುವಿಯಂತೆ, ನಿನ್ನ ಒಡೆಯನ್ನ ಒಡತಿನ ಏನು ಮಾಡುತೀವಿ ಅದನ್ನು ಹೇಳಬೇಡ, ಕೇಳಿದ ಮಾತಿಗೆ ದಿಟ ಹೇಳು"* ಎಂದನು. "ದಿಟ ಹೇಳಿದರು ಸಾಯೋದು, ಸಟೆಹೇಳಿದರು ಸಾಯವುದು, ಅಂದರೆ ನಾ. ಏನು ಮಾಡ್ಯೇನು ಒಡೆಯರೆ? ನಿಮ್ಮಿಚ್ಚೆ ತೊಚ್ಚಿದಂತೆ ಮಾಡಿ, ಆದಾಗಿ ಮುಗೀತಿನಿ"[17] ಎಂದು ಚೋಮ ಎದ್ದು ಹಿಂದಕ್ಕೆ ಸರಿದು ನಿಂತನು. ಅರಸನಿಗೆ ಇವನ ಧೈರ್‍ಯವನ್ನು ನೋಡಿ ಆಶ್ಚರ್ಯ, ಮೆಚ್ಚಗೆ ಒಬ್ಬ ಆಳಿನಲ್ಲಿ ಇಂತ ಪ್ರೇಮವನ್ನು ಸಂಪಾದಿಸಿದ ತನ್ನ ತಂಗಿಯ ಗಂಡನ ವಿಷಯಕ್ಕೆ ಅವನಿಗೆ ಆಸೂಯೆಯಾಯಿತು. ಮೇಲಾಗಿ ಈ ಆಳಿನ ಆಳು, ಈ ಬಣಗು ಹುಳು, ತನ್ನನ್ನು ಇಷ್ಟು ಧಿಕ್ಕರಿಸುವುದೆ ಎಂದು ಅವನು ತುಂಬಾ ಕೆರಳಿದನು. ತಪ್ಪಿಸಿಕೊಂಡು ಹೋಗಿದ್ದ ತಂಗಿಯ ಗಂಡನ ಮೇಲಿನ ಕೋಪವನ್ನು ತಕ್ಷಣ ತೀರಿಸಿಕೊಳ್ಳುವುದಕ್ಕೆ ಈ ತುಂಟ ಸಿಕ್ಕಿದಾನೆ ಎಂದು ಅವನಿಗೆ ತೋರಿತು. ಅವನು ಬಸವನಿಗೆ

"ಲೋ ಕುಂಟ ಒಂದು ದಸೀ ನೆಡಿಸಿ ಇಲ್ಲೇ ಇವನ್ನು ಶೂಲಕ್ಕೆರಿಸು ಬೇಗನೇ ಎಂದನು. ಅರಸ ನಾನು ಹೇಳಿದ ಮಾತನ್ನು ನೀನು ಎಷ್ಟು ಚೆಂದಗಿ ನಡೆಸುತ್ತಿಯ ಎಂದು ಕಂಡದಾಗಿದೆ, ಈ ಕೆಲಸ ನಮ್ಮ ಎದುರಿಗೆ ಆಗಬೇಕು ಎಂದು ಅರಸ ಕುಂಟನಿಗೆ ಹೇಳಿದನು. ಮರದ ಕೊಂಬೆಯನ್ನು ಕಡಿದು, ಎರಡು ಮಾರು ಎತ್ತರದ ಒಂದು ದಸೀಯನ್ನು ಮಾಡಿಸಿ ಅದನ್ನು ಮೂರು ದಾರಿಯ ಒಂದು ಪಕ್ಕದಲ್ಲಿ ಊಳಿಸಿ ದಸೀಯ ಮೊನೆ ಹೊಟ್ಟೆಯನ್ನು ಹೊಕ್ಕು ಎದೆಗೂಡಿನೊಳಕ್ಕೆ ಹೋಗುವಂತೆ ಅದರ ಮೇಲೆ ಏರಿಸಿದನು. ಚೋಮ"[18] ಕರಿಂಗಾಳಿ ನನ್ನ ತಾಯಿ, ನನ್ನ ಒಡೆಯ–ಒಡತಿಯನ್ನು ಕಾಯಿಕೊ ಅವ್ವ ಅವರ ಮಗುವನ್ನು ಕಾಯಿಕೊ" ಎಂದು ಕೇಳಿಕೊಂಡು ಪ್ರಾಣವನ್ನು ಬಿಟ್ಟನು.

"ಪ್ರೋ.ಎ.ಎನ್.ಮೂರ್ತಿರಾಯರು ಈ ಸನ್ನವೇಶನ್ನು ಷೇಕ್ಸಪಯರನ 'ಮ್ಯಾಕ್‌ಬೆತ್' ನಾಟಕದಲ್ಲಿಯ ಒಂದೆರಡು ಸನ್ನಿವೇಶಗಳನ್ನು ನೆನಪಿಗೆ ತರುತ್ತವೆ ಎಂದು ಈ ನಾಟಕ ಓದುವುದರ ಮೂಲಕ ತಿಳಿದುಕೊಳ್ಳಬಹುದು. ಹಸ್ತಕರಂದಲೇ ಕೊಲೆಯಾಗಿದ್ದ ಬ್ಯಾಂಕೋನ ಪ್ರೇತ ಔತಣಕೂಟದ ಸಂದರ್ಭದಲ್ಲಿ ಕಾಣಿಸಿದಾಗ ತನ್ನ ವಾಡಿಕೆಯ ಸ್ಥೈಯವನ್ನು ಕಳೆದುಕೊಂಡ ಮ್ಯಾಕ್‌ಬೆತ್ ಮನಸ್ಥಿತಿಯಾಗಲಿ, ಅದೇ ನಾಟಕದ ಕೊನೆಯ ಅಂಕದಲ್ಲಿ ಮನೋವೈಕಲ್ಯಕ್ಕೊಳಗಾದ ಸತಿ ಮ್ಯಾಕ್‌ಬೆತ್ಳ ದರವಸ್ಥೆಯಾಗಲಿ, ಮಗುವನ್ನು ಕೊಂದು ಬಂದ ನಂತರದ ವೀರರಾಜೇಂದ್ರನ ಮನಸ್ಥಿತಿಯಿಂದ ಬೇರೆಯಾದುದಲ್ಲ. ಅಲ್ಲಿಯಂತೆಯೆ ಇಲ್ಲಿಯಾದರೂ ಅದುವರೆಗೆ ಹತ್ತಿಕ್ಕಿರಿಸಲಾಗಿದ್ದ ವಿವೇಕ ಸಿಡಿದೆದ್ದು ತನ್ನ ಸೇಡು ತೀರಿಸಿಕೊಳ್ಳುತ್ತದೆ."

ಭಾರತಕ್ಕೆ ಬ್ರಿಟಿಷರು ಆಗಮಿಸಿದ್ದು 1834 ರಲ್ಲಿ. ಬ್ರಿಟಿಷ್ ಸೈನ್ಯವು ಐದು ದಿಕ್ಕುಗಳಿಂದ ಕೊಡಗಿನೊಳಗೆ ನುಗ್ಗಲು ಪ್ರಯತ್ನಿಸಿತು. ಆಗ ಕೊಡಗು ರಾಜನಿಗೆ ನಾಲ್ಕು ದಿವಾನರಿದ್ದರು ಕುಂಟ ಬಸವ, ಪೊನ್ನಪ್ಪ, ಬೋಪಣ್ಣ, ಲಕ್ಷ್ಮೀನಾರಾಯಣ. ಒಂದು ದಿವಸ ರಾಜನು ಕುಂಟ ಬಸವ ಮತ್ತು ಪೊನ್ನಪ್ಪ ದಿವಾನರೊಂದಿಗೆ ಕಂಪನಿ ಸರ್ಕಾರದೊಂದಿಗೆ ಯುದ್ಧ ಮಾಡಬಾರದೆಂದು ಸಲಹೆ . ನೀಡಿದನು. ಬ್ರಿಟಿಷರು ಒಂದು ಸಮುದ್ರ, ನಾವು ಒಂದು ಕಾಲುವೆ ಆದ್ದರಿಂದ ಶಾಂತಿಯುತವಾಗಿ ರಾಜಿಯಿಂದ ನಮ್ಮ ಭಿನ್ನಾಭಿಪ್ರಾಯವನ್ನು ಇತ್ಯರ್ಥ ಮಾಡಿಕೊಳ್ಳೋಣವೆಂದು ಹೇಳಿದನು. ಇದನ್ನು ಕೇಳಿದ ಕುಂಟ ಬಸವನು ಕಡುಕೋಪದಿಂದ ಕಬ್ಬಿಣದ ಕಡಲೆಯಾಗೆ ಇದ್ದು ತನ್ನ ಮುಷ್ಠಿಯಿಂದ ಪೊನ್ನಪ್ಪನ ಹಣೆಗೆ ಹೊಡೆದನು. ತಕ್ಷಣದಲ್ಲಿ ಪೊನ್ನಪ್ಪ ಸತ್ತವನಂತೆ ಕೆಳಗೆ ಬಿದ್ದು ಬಿಟ್ಟನು. ಅವನನ್ನು ಅಲ್ಲೆ ಬಿಟ್ಟು ರಾಜನೂ ಕುಂಟ ಬಸವನೂ ಅರಮನೆಗೆ ತೆರಳಿದರು. ಮೂರು ದಿಕ್ಕುಗಳಿಂದ ಬಂದ ಇಂಗ್ಲೀಷ್ ಸೈನಿಕರನ್ನು ಕೊಡವರು ಹಿಂದಕ್ಕೆ ಹೊಡೆದೊಡಿಸಿದರು. ಪೊನ್ನಪ್ಪ ಮತ್ತು ಬೋಪಣ್ಣ ಇವರಿಬ್ಬರ ಯಾವ ಕಾರಣದಿಂದಲೋ ಕುಶಾಲನಗರದಿಂದ ಬಂದ ಇಂಗ್ಲೀಷ್ ಸೈನ್ಯಕ್ಕೆ ಸ್ವಾಗತ ನೀಡಿ ಮಡಿಕೇರಿ ಕೋಟೆಯನ್ನು ಅವರಿಗೆ ಒಪ್ಪಿಸಿದರು. ದಿವಾನ್ ಲಕ್ಷ್ಮೀನಾರಾಯಣ ನಾಲ್ಕುನಾಡು ಅರಮನೆಯಲ್ಲಿದ್ದ

ರಾಜನ ಜೊತೆಯಲ್ಲಿದ್ದನು. ಕೊಡವರು ಬ್ರಿಟಿಷರ ಆಳ್ವಿಕೆಗೆ ಸರ್ವಾನುಮತದಿಂದ ಒಪ್ಪಿಗೆ ನೀಡಿದರು. ಆದರೆ ರಾಜನನ್ನು ಕಾಶಿಗೆ ಕೊಂಡೊಯ್ಯಬಾರದೆಂದೂ ಕೊಡಗಿನಲ್ಲಿಯೇ ಇಟ್ಟುಕೊಳ್ಳಬೇಕೆಂದೂ ಇಂಗ್ಲೀಷ್ ಅಧಿಕಾರಿಯೊಂದಿಗೆ ಮನವಿ ಮಾಡಿದರು. ಆದರೆ ಸರಕಾರ ಇದಕ್ಕೆ ಒಪ್ಪಲಿಲ್ಲ ರಾಜನ ಮೇಲೆ ಹಲವಾರು ಆಪಾದನೆಗಳನ್ನು ಹೊರಿಸಲಾಯಿತು. ಅವನ್ನಲ್ಲದೆ ಕೊಡವ ಮುಖ್ಯಸ್ಥರನ್ನು ಸೇರಿಸಿ ಪಂಚಾಯಿತಿಯ ಮೂಲಕ ಇತ್ಯರ್ಥ ಮಾಡಲಾಯಿತು. ಅಂದರೆ ವೀರರಾಜ ತನ್ನ ತಂಗಿಗೆ ಚಿತ್ರ ಹಿಂಸೆಗೆ ಗುರಿಮಾಡಿ ಎಂದು ಹೇಳಿದರು. ತನ್ನ ಅಣ್ಣ ವೀರರಾಜನೇ ಕೊಲ್ಲಿಸಿದನೆಂದು ಕೋರ್ಟ್ ಆಫ್ ಡೈರೆಕ್ಟರ್ ಅಪ್ಪಣೆಯ ಮೇರೆಗೆ ಮದ್ರಾಸಿನ ಅಡ್ವೊಕೇಟ್ ಜನರಲ್ ಸ್ಮಿತ್ ಎಂಬುವವನಿಂದ ಒಂದು ವಿಚಾರಣೆ ನಡೆಯಿತು. ತಂಗಮ್ಮಾಜಿಯಿಂದೆ ಚೆನ್ನ ಬಸಪ್ಪನು ಎಲ್ಲಿಗೆ ಓಡಿಹೋದನೆಂಬ ಗುಟ್ಟನ್ನು ಬಯಲಿಗೆ ಬರುವಂತೆ ಮಾಡುವ ಸಲುವಾಗಿ ಆದರೆ ಅವಳು ನಿರಪರಾಧಿ ಹಾಗೂ ನಿರ್ದೂಷಿಯಾಗಿದ್ದಳು. ಅಡ್ವೊಕೇಟ್ ರಾಜನನ್ನು ಅಪರಾಧಿಯೆಂದು ಖಂಡಿಸಿದನು. ಇದರಿಂದಾಗಿ ರಾಜನು ಇಂಗ್ಲೆಂಡಿನಲ್ಲಿ ತನ್ನನ್ನು ಕೊಡಗಿನ ರಾಜನನ್ನಾಗಿ ಮತ್ತೆ ಮಾಡಬೇಕೆಂದು ವಿಕ್ಟೋರಿಯ ರಾಣಿಗೆ ಮಾಡಿದ ಅಪ್ಪಣೆ ತಿರಸ್ಕರಿಸಲಾಯಿತು.

ವ್ಯಾಪಾರದ ದೆಸೆಯಿಂದ ಭಾರತಕ್ಕೆ ಬಂದ ಬ್ರಿಟಿಷರು ಆಳರಸರಾದರು ಇಂಗ್ಲೆಂಡಿನ ರಾಣಿಯು ಭಾರತದ ಚಕ್ರವರ್ತಿಯಾದಳು. ಆಗ ಅವರ ವ್ಯಾಪಾರ ಬೆಳವಣಿಗೆಗೆ ಅನಿರ್ಬಾಧಕವಾದ ಅವಕಾಶ ಉಂಟಾಯಿತು. ಭಾರತದ ಸಂಪತ್ತು ಬ್ರಿಟಿಷರಿಗೆ ಸೇರಿತು ಇದರಿಂದಾಗಿ ಭಾರತವು ಬಡತನದ ಪಾಶಕ್ಕೆ ಸಿಕ್ಕಿ ನರಳುತ್ತಿದ್ದಾಗ ಭಾರತದ ನಾಯಕರಿಗೆ ಸ್ಥಾನ ದೊರೆಯಿತು. ತಮ್ಮ ಗಾಢ ನಿದ್ರೆಯಿಂದ ಎಚ್ಚೆತ್ತು 1885 ರಿಂದ ಸ್ವರಾಜ್ಯಕ್ಕೆ ಹೋರಾಡಿದ ಫಲವಾಗಿ ಪ್ರಜಾಸತ್ತಾತ್ಮಕ ಸರಕಾರವು 1947ರಲ್ಲಿ ದೊರೆಯಿತು. ಅಂದು ಭಾರತವು ಬ್ರಿಟಿಷರ ಬಂಧನದಿಂದ ಮುಕ್ತವಾಯಿತು. ಅಲ್ಲಿಂದ ಭಾರತದ ವ್ಯಾಪಾರವು ಯಾವುದೇ ತೊಂದರೆ ಇಲ್ಲದೆ ನಿರಂತರವಾಗಿ ಬೆಳೆಯಲಾರಂಭಿಸಿಸಿತು. 1947ರಲ್ಲಿ ಸ್ವಾತಂತ್ರೋದಯವಾದ ಮೇಲೂ ಕೊಡಗು ಒಂದು ಪ್ರತ್ಯೇಕ ರಾಜ್ಯವಾಗಿಯೇ ಮುಂದುವರಿಯಿತು. 1950 ರಲ್ಲಿ ಹೊಸ ಸಂವಿಧಾನ ಆಚರಣೆಗೆ ಬಂದಾಗ 'ಸಿ' ವರ್ಗದ ರಾಜ್ಯವಾಗಿ ಪರಿಗಣಿಸಲ್ಪಟ್ಟಿತು. 1952 ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆ ನಡೆದ ಮೇಲೆ ಕೊಡಗಿಗೆ ಜವಾಬ್ದಾರಿ ಸರಕಾರ ದೊರಕಿ ಮೊದಲನೆಯ ಮಂತ್ರಿ ಮಂಡಲ ರೂಪುಗೊಂಡಿತು. 24 ಮಂದಿ ಸದಸ್ಯರುಳ್ಳ ವಿಧಾನ ಸಭೆ ಅಸ್ತಿತ್ವಕ್ಕೆ ಬಂದಿತು. ಶ್ರೀ ಸಿ.ಎಂ.ಪೂಣಚ್ಚ ಭವಿಷ್ಯದ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದರು. 1956 ನವಂಬರ್ ಒಂದರಂದು ರಾಜ್ಯ ಪುನರ್ಘಟನೆಯಾದಾಗ ಕೊಡಗು ಹೊಸ ಮೈಸೂರು ರಾಜ್ಯದಲ್ಲಿ ಸೇರ್ಪಡೆ ಹೊಂದಿತು.

ಈ ಮೇಲೆ ತಿಳಿಸಿರುವ ವಿಷಯವು ಕೊಡಗಿನಲ್ಲಿ ಬ್ರಿಟಿಷರ ಚಕ್ರಾಧಿಪತ್ಯ ಚಿಕ ವೀರರಾಜೇಂದ್ರ ಕಾದಂರಿಯಲ್ಲಿ ಹೇಗೆ ಚಿತ್ರಿತವಾಗಿದೆ, ಮತ್ತು ಕೊಡಗಿನ ಆರ್ಥಿಕ ಸಾಮಾಜಿಕ ಹಾಗೂ ಧಾರ್ಮಿಕ ಜೀವನ

ಹೇಗಿತು, ಬ್ರಿಟಿಷರು ಅದನ್ನು ಆಡಳಿತದಲ್ಲಿ ಹೇಗೆ ನೋಡಿಕೊಂಡರು ಎಂಬುದನ್ನು ತಿಳಿಸಲಾಗಿದೆ. ಇಷ್ಟೆ ಅಲ್ಲದೆ ಚಿಕವೀರರಾಜೇಂದ್ರನ ಆಡಳಿತದಲ್ಲಿ ಕಂಡು ಬಂದ ದೋಷಗಳಿಂದ ಆಂಗ್ಲರು ಕೊಡಗನ್ನು ತಮ್ಮ ಅನುಕೂಲಕ್ಕೆ ಹೇಗೆ ಬಳಸಿಕೊಂಡರು ಎಂಬುದನ್ನು ವಿವರವಾಗಿ ತಿಳಿಸಲಾಗಿದೆ. ಬ್ರಿಟಿಷ್ ಆಡಳಿತ ಮತ್ತು ಧಾರ್ಮಿಕ ವ್ಯವಸ್ಥೆ ಕೊಡಗಿನಲ್ಲಿ ಹೇಗೆ ಬೇರೂರಿತು ಎಂಬುದನ್ನು ಸಹ ಈ ಅಧ್ಯಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ –5

ಚಿಕವೀರ ರಾಜೇಂದ್ರ ಕಾದಂಬರಿಯಲ್ಲಿ ಪಾತ್ರ ಚಿತ್ರಣ.

ಒಂದು ವ್ಯಕ್ತಿಯ ಬದುಕನ್ನು ರೂಪಿಸುವುದರಲ್ಲಿ ಅವನ ನಡವಳಿಕೆ ಹಾಗೂ ದೈವದಾಟ ಎರಡು ಸೇರಿಕೊಳ್ಳುತ್ತವೆ ಎನ್ನುವುದು ಮಾಸ್ತಿಯವರ ಎಲ್ಲ ಕಾದಂಬರಿಗಳಲ್ಲಿಯೂ ಪ್ರಕಟವಾಗುವ ಅಂಶವಾಗಿದೆ. ಚಿಕವೀರರಾಜೇಂದ್ರ ಕಾದಂಬರಿಯಲ್ಲಿ ಹಲವಾರು ಪಾತ್ರಗಳು ಕಂಡು ಬರುತ್ತವೆ. ಅದರಲ್ಲಿ ಪ್ರಮುಖ ಪಾತ್ರಗಳು ಮತ್ತು ಸಾಮಾನ್ಯ ಪಾತ್ರಗಳು ಸಹ ಕಂಡು ಬರುತ್ತವೆ. ಪ್ರಮುಖ ಪಾತ್ರಗಳೆಂದರೆ ಚಿಕವೀರರಾಜೇಂದ್ರ, ಗೌರಮ್ಮ, ಬೋಪಣ್ಣ, ದೀಕ್ಷಿತ, ಲಕ್ಷೀನಾರಾಯಣಯ್ಯ, ದೇವಮ್ಮಾಜಿ, ಚೆನ್ನಬಸವ, ಕುಂಟಬಸವ, ಭಗವತಿ, ಪುಟ್ಟಮ್ಮಾಜಿ ಇನ್ನೂ ಮುಂತಾದವು ಪ್ರಮುಖ ಪಾತ್ರಗಳು. ಸಾಮಾನ್ಯ ಪಾತ್ರಗಳೆಂದರೆ ಪೊನ್ನಪ್ಪ, ಚಿಕ್ಕಣ್ಣ ಶೆಟ್ಟಿ, ಉತ್ತಯ್ಯತಕ್ಕ, ಉತ್ತಯ್ಯ, ಸಾವಿತ್ರಮ್ಮ, ಪಾಣೆ ಸೂರ್ಯನಾರಾಯಣ, ಚೆನ್ನವೀರಯ್ಯ, ಚೋಮ. ಇನ್ನೂ ಮುಂತಾದ ಪಾತ್ರಗಳು ಬರುತ್ತವೆ ಇಲ್ಲಿ ಬರುವ ಪ್ರಮುಖ ಪಾತ್ರಗಳ ಗೌರಮ್ಮನ ಬಗೆ ತಿಳಿದುಕೊಳ್ಳಬಹುದು.

ಗೌರಮ್ಮ :- ಹೆಣ್ಣಿನ ಅಂತರಂಗದ ಸೂಕ್ಷ್ಮನೂ ಸೂಕ್ಷ್ಮಗಳನ್ನು ಮಾಸ್ತಿಯವರು ಅಂತ:ಕರಣ ಪೂರ್ಣ ಪರಿಭಾವಿಸುತ್ತಾರೆ ಎಂಬುದನ್ನು ಗೌರಮ್ಮಾಜಿಯ ಬದುಕು ಒಂದು ಉದಾಹರಣೆ. ಗೌರಮ್ಮ ಕೊಡಗರ ಹೆಣ್ಣು ವೀರರಾಜನ್ನು ಮದುವೆಯಾದ ಹೊಸದರಲ್ಲಿ ಸ್ತ್ರೀಸಹಜ ಬಿಗುಮಾನ ಸೂಕ್ಷ್ಮವಾಗಿ ವರ್ತಿಸಿದರೆ ಅದೇ ಅತ್ತೆ ಮಾವನವರ ಬುದ್ದಿ ಮಾತು ಕೇಳದ ಅನಂತರ ಹೊಂದಿಕೊಳ್ಳುವುದನ್ನು ಅರಿತ ಅವರ ಮನೋಧರ್ಮ ತಾಳಿಕೊಳ್ಳುವ ಸೂಕ್ಷ್ಮತೆಗೆ ಸಿಲುಕಿ ನರಳುತ್ತದೆ. ನಿತ್ಯದ ಈ ನೇರಳಿನಲ್ಲೇ ಗೌರಮ್ಮನ ಸ್ವಭಾವ ಗಂಭೀರವೂ, ದಿಟ್ಟವೂ, ಮಾನವೀಯವೂ ಆಗುತ್ತ ಬೆಳೆಯುತ್ತದೆ. ಗೌರಮ್ಮನ ಈ ಗುಣಸ್ವಭಾವವೇ ವೀರರಾಜನನ್ನು ತಾಳಿಕೊಳ್ಳುವಂತೆ ಸುತ್ತಲಿನ ಜನರ ಮೇಲೆ ಅವ್ಯಕ್ತ ಒತ್ತಡವಾದ ಪ್ರಭಾವಿಶಕ್ತಿಯಾಗಿದೆ. ಮದುವೆಯಾದ ಹೊಸದರಲ್ಲಿ ವೀರರಾಜ ತನ್ನ ತಂಗಿಯಾದ ದೇವಮ್ಮಾಜಿಯನ್ನು ತೊಡೆ ಮೇಲೆ ಕೂರಿಸಿಕೊಂಡು ಅನುಭವಿಸುತ್ತಿದ್ದ ಸ್ನೇಹ ಪ್ರೇಮ ಸಲಿಗೆಗಳಿಗೆ ಕರುಬುವ ಗೌರಮ್ಮನ ಸೂಕ್ಷ್ಮಭಾವ ಅದೇ ದೇವಮ್ಮಾಜಿ ಸೆರೆಯಲ್ಲಿ ಕೊಳೆಯುವ ದುಸ್ಥಿತಿಯಲ್ಲಿದ್ದಾಗ ಅನುಕಂಪವಾಗುತ್ತದೆ, ಪ್ರೇಮವಾಗುತ್ತದೆ, ಅಂತ:ಕರಣ ತುಂಬಿ ವೀರರಾಜನ ಕಣ್ತಪ್ಪಿಸಿ ಹೆಂಡರ ಸಮಾಗಮಕ್ಕೆ ಸಹಾಯಕವಾಗುತ್ತಾಳೆ. ಅವಳ ಬಿಡುಗಡೆಗೆ ತುಡಿವ ಜೀವವಾಗಿದ್ದಾಳೆ ಇದರ ಹಿಂದೆ ತನ್ನ ಕುಟುಂಬಕ್ಕೆ ತಟ್ಟುವ ನಿಟ್ಟುಸಿರಿನ ಬಿಸಿತಾಪದ ಭಯದಂಶವೂ ಇದೆ. ಇವಳ ಧೀರಶಕ್ತಿ ಎಷ್ಟು – ಎಲ್ಲಿ – ಹೇಗೆ ಎಂಬಿತ್ಯಾದಿ ಸ್ಥಾನಮಾನ ಕುರಿತ ಹಾಳತದಲ್ಲಿ ಸೂಕ್ತವಾಗಿ ಪ್ರವಹಿಸುವಂಥದ್ದು. ಇಂಥ ಗುಣ ಶೀಲತೆ ಇದ್ದದ್ದರಿಂದಲೇ ಸಾಮಾನ್ಯರಿಂದ ಮಂತ್ರಿಗಳವರೆಗೆ ಎಲ್ಲರೂ ಇವಳನ್ನು ಗೌರವದಿಂದ ಕಾಣುತ್ತಾರೆ.

ಇವಳಿಗೆ ಸಂದ ಈ ಗೌರವವೇ ಅರಮನೆಯ ಘನತೆಯನ್ನು ಅಷ್ಟೋ – ಇಷ್ಟೋ ಜೀವಂತವಾಗಿ ರಕ್ಷಿಸಿದ ಗಂಡ ವ್ಯವಸ್ಥೆಯನ್ನು ಕೆಡಿಸುತ್ತಾ ಬಂದರು ಅದನ್ನು ಎದುರು ಹಾಕಿಕೊಂಡು ನಡೆದಾಗ ಆ ಸ್ಥಿತಿಯನ್ನು ಹೋಗಲಾಡಿಸುವ ಕಾಳಜಿ, ಆ ಸಂದರ್ಭದ ಅಸಹಾಯಕ ನೋವು ಇವುಗಳ ನಡುವೆ ಹೊಣೆಗಾರಿಕೆಯ

ಸೃಜನಶೀಲ ಗಂಭೀರ ಗೃಹಿಣಿಯಾಗಿ ರಾಣಿಗೆ ತಕ್ಕ ಘನತೆಯಿಂದ ವರ್ತಿಸುತ್ತಾಳೆ. ಲಕ್ಷ್ಮೀನಾರಾಯಣಯ್ಯ ಮತ್ತು ಚಿಕ್ಕಣ್ಣ ಶೆಟ್ಟಿ ಇಬ್ಬರೇ ಇವಳ ಹತ್ತಿರ ಒಂದು ಅಧಿಕಾರ ಸೂತ್ರ ಬದಲಾವಣೆಯ ಮಾತನಾಡತೊಡಗಿದಾಗ ಅನ್ನುವುದರಲ್ಲಿಯೇ ಅದರ ಸೂಕ್ಷ್ಮವನ್ನು ಗ್ರಹಿಸಿ ಶೆಟ್ಟಿಯನ್ನು ಬಿಟ್ಟು ಬೋಪಣ್ಣನವರೊಡನೆ ನಾಳೆ ಬಂದು ಕಾಣುವಂತೆ ಅಯ್ಯನವರಿಗೆ ಹೇಳುವುದು, ಅದೇ ರೀತಿ ಆ ಮೂವರು ಆ ದಿನ ಸಮಾಲೋಚಿಸುತ್ತಿದ್ದಾಗ ಅದರ ಎಳೆ ಗೊತ್ತಾದ ಅರಸ ಅಲ್ಲಿಗೆ ಒಂದು ರಾಣಿ ಬೋಪಣ್ಣರ ಹೆಸರೆತ್ತಿ ಅವಾಚ್ಯ ವೈಪರೀತ್ಯಗಳನ್ನು ಆಡುವುದು ; ಆ ಸಂದರ್ಭದ ಗೌರಮ್ಮನ ಗಂಭೀರ ಸಂಯಮಶೀಲ ನಡೆವಳಿಕೆ. ಬಸವನಂಥವನದಲ್ಲಿ ಗೌರವಾಶ್ಚರ್ಯವನ್ನು ಹುಟ್ಟಿಸುವ ಪ್ರಭಾವೀ ಶಕ್ತಿಯಾಗಿ ಅರಳಿದೆ ಎಲ್ಲರನ್ನೂ ಏಕವಚನದಿಂದ ಸಂಬೋಧಿಸುವ ಭಗವತಿ ಕೂಡ ರಾಣಿಯನ್ನು ಕಂಡಾಗ ಆಯಾಚಿತವಾಗಿ ಅವಳನ್ನು ಬಹುವಚನದಲ್ಲಿಯೇ ಗೌರವಭಾವದಿಂದ ಮಾತನಾಡಿಸುತ್ತಾಳೆ. ಯಾರಿಗೂ ಕೈಮುಗಿಯದುವಳು ರಾಣಿಗೆ ಕೈ ಜೋಡಿಸುತ್ತಾಳೆ. ಇಡೀ ಕೃತಿಯಲ್ಲಿ ಜರುಗುವ ಒಳ್ಳೆಯ ಘಟನೆಗಳ ಹಿಂದೆ ಒಂದಲ್ಲ ಒಂದು ರೀತಿಯಲ್ಲಿ ಕೈ ಜೋಡಿಸುತ್ತಾಳೆ. ಇಡೀ ಕೃತಿಯಲ್ಲಿ ಜರುಗುವ ಒಳ್ಳೆಯ ಘಟನೆಗಳ ಹಿಂದೆ ಒಂದಲ್ಲ ಒಂದು ರೀತಿಯಲ್ಲಿ ರಾಣಿಯ ಮನ: ಶಕ್ತಿ ದುಡಿದಿರುತ್ತದೆ ಅರಸ ಕುಡಿದು ಕೆಡುತ್ತಿದ್ದಾನಲ್ಲಾ ಎಂದು ಸಾಮಾನ್ಯವಾಗಿ ದು:ಖ ಪಡುತ್ತಿದ್ದ ರಾಣಿ ಉತ್ತಯ್ಯನನ್ನು ಉಳಿಸುವ ಸಂದರ್ಭ ಬಂದಾಗ ಅರಸ ಕುಡಿದು ಮೈಮರೆತರೆ ಸಾಕಪ್ಪ ಎಂದು ಅಶಿಸುತ್ತಾಳೆ. ಸಂದರ್ಭವಶದಲ್ಲಿ ಒಳ್ಳೆಯದಕ್ಕಾಗಿ ಕೆಟ್ಟದ್ದನ್ನೂ ಆಶಿಸುವ ಮಾನವೀಯ ತಾಡಿತ ರಾಣಿಯ ಈ ಅಪೇಕ್ಷೆ.

ಚೋಮನ ಹೆಂಡತಿ–ತಂಗಿ ಅರಮನೆ ಶಾಪಹಾಕಿ ಬಾಯಿ ಬಡಿದುಕೊಂಡದ್ದು ಕಂಡಾಗ ಗೌರಮ್ಮಾಜಿಗಾಗಿರುವ ದು:ಖ ಭಯ ಎರಡೂ ಅವಳ ಮನಸ್ಸಿನ ಸಹಜ ಸ್ಥಿತಿಗಳು. ಅನ್ಯರ ದು:ಖ ತನ್ನ ಕುಟುಂಬಕ್ಕೆ ಶಾಪವಾಗುವ ಭಯ ಇಡೀ ಇವಳ ಬದುಕಿನುದ್ದಕ್ಕೂ ಇವಳನ್ನೂ ತಬ್ಬಿದ್ದ ನೋವೇ ಆಗಿದೆ. ಚೋಮನ ಹೆಂಡತಿ–ತಂಗಿ ಬೆಂಗಳೂರಿನ ರೆಸಿಡೆಂಟನ ಮನೆ ಮುಂದೆ ಲಬೋ ಅಂದು ದೊರು ಕೊಟ್ಟ ಸಂದರ್ಭದಲ್ಲಿ ಗೌರಮ್ಮಾಜಿಯ ಭಯ ನೋವು ಮೂರ್ತರೂಪ ಪಡೆದ ಧ್ವನಿ ಇದೆ.

ಗೌರಮ್ಮಾಜಿಯ ಬದುಕಿನ ದುರಂತ ವ್ಯಂಗ್ಯವೆಂದರೆ ದೇವಮ್ಮಾಜಿಯ ಮಗು ಯಾವ ಮಗುವಿನ ಜನನಕ್ಕೆ ತಾನು ಕಾರಣವಾದಳೋ, ಯಾವ ಮಗುವಿನ ಹಿಟ್ಟನಿಂದಾಗಿ ಕಂಸ ಭೀತಿಯ ಭವಿಷ್ಯ ಕೇಳಿ ನಡುಗಿದಳೋ ಅದೇ ಮಗುವನ್ನು ಗಂಡನಿಂದ ತನ್ನ ವಶಕ್ಕೆ ತೆಗೆದುಕೊಂಡರು ತನ್ನ ಗಂಡನಿದ ಮಗುವನ್ನು ಉಳಿಸಲಾರದೇ ಹೋದೆನು ಎಂಬ ದು:ಖ ಗೌರಮ್ಮಾಜಿಯಲ್ಲಿ ಉಳಿಯುತ್ತದೆ, ನೋವಿಗೆ ಗುರಿ ಮಾಡುತ್ತದೆ. ಗಂಡ ಕೆಟ್ಟಿದ್ದರೂ ಅವನನ್ನು ಸೀತೆಯಂತೆ ಅನುಸರಿಸಿದಳು. ಬ್ರಿಟಿಷರ ಯೋಜನೆಯಂತೆ ಅರಸ ಅರಮನೆ ಬಿಟ್ಟು ವೇಲೂರಿಗೆ ಹೊರಟಾಗ ರಾಣಿ ಅವನನ್ನು ಅನುಸರಿಸುತ್ತಾಳೆ. ಹೊರಡುವ ಮುನ್ನ ಅರಮನೆಯನ್ನು ಅವಲಂಭಿಸಿದ್ದ ಎಲ್ಲಾ

ಆಳು ಕಾಳು ಹೆಣ್ಣು ಮಕ್ಕಳಿಗೂ ಅಗತ್ಯವಾದ ಅನುಕೂಲ ಕಲ್ಪಿಸುವ ಜವಾಬ್ದಾರಿ ಮೆರೆಯುವುದು ಅವಳ ಗುಣ ಸ್ವಭಾವಕ್ಕೆ ಕಿರೀಟವಿಟ್ಟ ವರ್ತನೆ ಅರಮನೆಯ ಜೀವ ಬಸಿದ ಆ ಎಲ್ಲ ಜೀವಗಳ ಬಗ್ಗೆ ಕೊನೆಯಲ್ಲಿ ರಾಣಿ ತೋರುವ ವಾತ್ಸಲ್ಯ, ಪ್ರೀತಿ, ಅನುಕರಣೆ ಕಳಕಳಿಗಳು ಮಾನವೀಯ ಬದುಕಿನ ಜೀವಸ್ಯಂಧಿ ಶಕ್ತಿಗಳು ರಾಣಿಯ ಈ ಒಂದು ಉದಾರತೆಯೇ, ಜೀವಸ್ಯಂಧಿ ಮೌಲ್ಯವೇ ಅರಮನೆಯನ್ನು ಇದುವರೆಗೆ ಬಾಳಿಸಿದೆ, ರಾಜನನ್ನು ರಕ್ಷಿಸಿದೆ ಎಂಬುವುದು ವಾಸ್ತವವಾಗುತ್ತದೆ. ರಾಣಿಯ ಪಾತ್ರ ಕಲ್ಪನೆಯ ಗರ್ಭದಲ್ಲಿ ಮಾಸ್ತಿರವರು ನಮ್ಮ ಗಂಭೀರ ಗೃಹಿಣಿಯ ಆದರ್ಶ ರೂಪವನ್ನೇ ಸಾಕ್ಷಾತ್ಕರಿಸಿದ್ದಾರೆ. ವೇಲೂರು ಕಾಶಿಯಲ್ಲಿದ್ದಾಗಲೂ ರಾಣಿ ತನ್ನ ಮಗಳ ಮದುವೆ, ಧರ್ಮಶ್ರದ್ಧೆ ವಿಷಯ ಕುರಿತು ನೋವುಣುವುದೇ ಆಯಿತು. ಕೊನೆಗೆ ಆ ನೋವೇ ಅವಳ ಇಚ್ಛಾನು ಮರಣಕ್ಕೆ ಕಾರಣವಾಯಿತು. ವ್ರತಧರ್ಮದಲ್ಲಿ ಮುಳುಗಿ ಅದೇ ತನ್ನನ್ನು ಮೃತ್ಯುಗರ್ಭಕ್ಕೆ ಕರೆದುಕೊಳ್ಳುವಂತೆ ಮಾಡಿಕೊಂಡಳು. "ಗೌರಮ್ಮಾಜಿಯ ಅಂತಿಮ ಮುಖಮುದ್ರೆ ಅವಳ ಜೀವನದ ಪ್ರತೀಕವಾಯಿತು, ಶಾಂತವಾಯಿತು, ಗಂಭೀರವಾಯಿತು."[19] (ಪುಟ– 492) ಎಂಬ ನಿರೂಪಣೆ ಇಡೀ ಅವಳ ವ್ಯಕ್ತಿತ್ವ ಶಕ್ತಿಯನ್ನು ಸಾಂದ್ರವಾಗಿ ವ್ಯಂಜಿಸುತ್ತದೆ.

ಪುಟ್ಟಮ್ಮಾಜಿಯ ಪಾತ್ರ :– ಗೌರಮ್ಮಾಜಿ ತಾಯಿ ತಂದೆ, ಚಿಕವೀರರಾಜನ ತಾಯಿ ತುಂಬಾ ಮುಗ್ಧೆ ಆದರೆ ತಂದೆ ಕ್ರೂರಿ. ರಾಜ ಎಷ್ಟೇ ಕ್ರೂರಿಯಾದರೂ ಪುಟ್ಟಮ್ಮಾಜಿ ಕಂಡರೆ ಪ್ರೀತಿ ಮಗಳು ತಂದೆಗೆ ಇದನ್ನು ಮಾಡಬೇಡ ಎಂದು ಹೇಳಿದರೆ ರಾಜ ಕೇಳುತ್ತಿದ್ದನು. ಅಂದರೆ ತನ್ನ ಮಗಳನ್ನು ರಾಜ ಎಷ್ಟು ಪ್ರೀತಿಸುತ್ತಿದ್ದ ಎಂಬುದು ತಿಳಿಯುತ್ತದೆ. ಆದರೆ ಬೇರೆಯವರ ವಿಷಯದಲ್ಲಿ ಒಂದು ರೀತಿಯ ವಿಷಸರ್ಪದಂತೆ ತಾನು ಹೇಳಿದಂತೆ ಕೇಳಬೇಕೆಂಬ ಹಂಬಲ ರಾಜಕುಮಾರಿ ತಂದೆಯ ಆಸೆಯಾಗಿತ್ತು. ರಾಜ ತನ್ನ ತಂಗಿಯನ್ನು ಅರಮನೆಯಲ್ಲಿ ಬಂಧಿಸಿದನು ಇದರಿಂದ ಕೋಪಗೊಂಡ ದೇವಮ್ಮಾಜಿ ಏನನ್ನು ಸೇವಿಸುತ್ತಿರಲಿಲ್ಲ. ಒಂದು ದಿನ ಪುಟ್ಟಮ್ಮಾಜಿಗೆ ವಿಷಯ ತಿಳಿದು ಅಂದರೆ ತನ್ನ ಅತ್ತೆ ಬಂಧಿಸಿರುವ ಕೋಣೆಗೆ ಬಂದಳು. ಊಟ ಮಾಡುವುದಕ್ಕೆ ಬಸವ ಮತ್ತು ಸೇವಕ ಬಲವಂತ ಪಡಿಸುತ್ತಿದುದ್ದನ್ನು ನೋಡಿದಳು. ಅಮೇಲೆ ಕಾರಣ ತಿಳಿದು ಅತ್ತೆಯ ಹತ್ತಿರ ಬಂದು ನೀವು ಊಟ ಮಾಡಿ ನಾನು ಅಪ್ಪಾಜಿಗೆ ಒಪ್ಪಿಸಿ ನಿಮ್ಮ ಮನೆಗೆ ಕಳುಹಿಸುತ್ತೇನೆಂದು ಹೇಳಿ ತನ್ನ ತಾಯಿಯ ಹತ್ತಿರ ಅಮ್ಮ ಅತ್ತೆಯನ್ನು ಅವರ ಮನೆಗೆ ಕಳುಹಿಸಿಬಿಡಿ ಇಲ್ಲವಾದರೆ ಅತ್ತೆ ಊಟ ತಿಂಡಿ ಬಿಟ್ಟು ಸತ್ತು ಹೋಗಬಹುದೆಂದು ಹೇಳಿದಳು. ತನ್ನ ತಂದೆಯ ಹತ್ತಿರ ಹೋಗಿ "ಅಪ್ಪಾಜಿ ಅತ್ತೆ ಎಷ್ಟು ಹೇಳಿದರು ಊಟ ಮಾಡುವುದಿಲ್ಲವೆಂದು ಕುಳಿತ್ತಿದ್ದಾರೆ ಅವರನ್ನು ಅವರ ಮನೆಗೆ ಕಳುಹಿಸಿಬಿಡಿ ಎಂದು ಕೇಳಿದಳು. ಆದರೆ ರಾಜ ಮಗಳ ಮಾತಿಗೆ ಕಿವಿ ಕೊಡಲಿಲ್ಲ ಪುಟ್ಟಮ್ಮಾಜಿ ತನ್ನ ತಂದೆಗೆ ಅತ್ತೆನ ಅವರ ಮನೆಗೆ ಕಳುಹಿಸಿದರೆ ನಾನು ಉಣ್ಣುತ್ತೇನೆ, ಕಳುಹಲಿಲ್ಲ ನಾನು ಉಣ್ಣೋದಿಲ್ಲ"[20] ಎಂದಳು.

ಜೊತೆಗೆ ಅತ್ತೆಯನ್ನು ಸಮಾಧಾನ ಮಾಡಿದಳು ಪುಟ್ಟಮ್ಮಾಜಿಯ ಮಾತಿನಂತೆ ದೇವಮ್ಮಾಜಿಯನ್ನು ತಮ್ಮ ಸೇವಕರ ಜೊತೆ ಮಾಡಿ ಅಪ್ಪಂಗೊಳಕ್ಕೆ ಕಳುಹಿಸಿದನು. ಇದರಿಂದ ರಾಜಕುಮಾರಿಗೆ ತುಂಬಾ ಸಂತೋಷವಾಯಿತು. ಗೌರಮ್ಮಾಜಿ ಉತ್ತಯ್ಯ ತಕ್ಕನನ್ನು ನೋಡಿ ತನ್ನ ಮಗಳನ್ನು ಇವನಿಗೆ ಕೊಟ್ಟು ವಿವಾಹ ಮಾಡಿದರೆ ಎಂದು ಯೋಚಿಸಿ ರಾಜಕುಮಾರಿಯ ಒಪ್ಪಿಗೆಯನ್ನು ಕೇಳಿದಳು. ಅದಕ್ಕೆ ರಾಜಕುಮಾರಿ ತಂದೆಯಿಂದ ಏನಾದರೂ ಅಪಾಯವಾಗುವುದೆಂದು ಹೆದರಿ ಬೇಡವೆಂದಳು. ಆದರೆ ರಾಜಕುಮಾರಿಯ ಮನಸ್ಸಿನಲ್ಲಿ ಉತ್ತಯ್ಯ ತಕ್ಕನ ಬಗ್ಗೆ ಒಳ್ಳೆಯ ಭಾವನೆ ಇತ್ತು. ಅವನ ಮೇಲೆ ಪ್ರೀತಿಯೂ ಇತ್ತು ಆದರೆ ರಾಜಕುಮಾರಿ ತೋರಿಸಿಕೊಳ್ಳಲಿಲ್ಲ. ತಂದೆಯ ವಿರುದ್ಧ ನಡೆಯಬಾರದೆಂದು ಕೊಂಡಳು. ರಾಜಕುಮಾರಿ ತನ್ನ ಅತ್ತೆಯ ಮಗುವನ್ನು ರಾಜ ಅರಮನೆಗೆ ಕರೆದುಕೊಂಡು ಬಂದಾಗ ತುಂಬಾ ಸಂತೋಷಪಟ್ಟಳು. ಆದರೆ ತನ್ನ ತಂದೆ ಈ ಮಗುವನ್ನು ಕೊಲ್ಲಲು ತಂದಿದ್ದಾರೆ ಎಂದು ತಿಳಿದಿರಲಿಲ್ಲ. ತನ್ನ ತಾಯಿಗೆ ಅಮ್ಮ ಅತ್ತೆಯ ಮಗುವನ್ನು ನಾವೇ ಸಾಕಿಕೊಳ್ಳೋಣ ಎಂದು ಕೇಳಿದಾಗ ರಾಣಿ ಆಗಲಿ ಎಂದಳು. ರಾಜಕುಮಾರಿ ತುಂಬಾ ಸಂತೋಷಪಟ್ಟಳು ಆದರೆ ತನ್ನ ಮಗಳಿಗೆ ರಾಣಿ ಒಂದು ಮಾತನ್ನು ಹೇಳಿದಳು. ನೀನು ನನ್ನನ್ನು ಬಿಟ್ಟು ಹೇಗೆ ಇರುವುದಿಲ್ಲವೋ ಹಾಗೆ ಮಗುವು ತನ್ನ ತಾಯಿ ಬಿಟ್ಟು ಇರಲಾರದು ಎಂದು ಹೇಳಿದಾಗ ರಾಜಕುಮಾರಿಗೆ ಏನಾದರೂ ಮಾಡಿ ಮಗುವನ್ನು ತನ್ನ ಅತ್ತೆಯ ಹತ್ತಿರ ಕಳುಹಿಸುವಂತೆ ತಂದೆಯ ಹತ್ತಿರ ಬಂದು ಕೇಳಿದಳು. ಆದರೆ ವೀರರಾಜ ಈ ಮಾತಿನಿಂದ ಕೋಪಗೊಂಡು ಹೊಯ್ಯಲು ಯತ್ನಿಸಿದನು. ತಂದೆ ಆ ರೀತಿ ನಡೆದುಕೊಂಡದ್ದನ್ನು ನೋಡಿ ರಾಜಕುಮಾರಿ ಕಕ್ಕಾಭಿಕ್ಕಿಯಾದಳು. ಅವನು ಅವಳನ್ನು ಹೀಗೆ ಗದರಿಸಿದ್ದೂ ಎಂದೂ ಇಲ್ಲ. ಎಲ್ಲಾ ಹೊತ್ತಿನಲ್ಲೂ ಪ್ರೀತಿಯನ್ನೇ ತೋರಿದ್ದ ತನ್ನ ಅಪ್ಪಾಜಿ ಬೇರೆಯವರ ಮೇಲಿನ ದ್ವೇಷವನ್ನು ತನ್ನ ಮೇಲೆ ತೋರಿಸಿದ್ದು ಇದೇ ಮೊದಲು, ಆದರೂ ಇದು ನಿಜ ಎಂಬುದು ಹೇಳಿಕೊಳ್ಳಲು ಆಗಲಿಲ್ಲ. ಇದು ನಿಜ ಎಂದು ತಿಳಿದಾಗ ಭಯ ಅವಳ ಕೈಕಾಲು ಆಡದೆ ಹೋಯಿತು. ತನ್ನ ತಂದೆ ತನ್ನನ್ನು ಹೀಗೆ ಕಂಡನೆ ಎಂದು ಕರುಳನ್ನು ಕಿವಿಚುವ ಅಪಮಾನದಿಂದ ನೊಂದಳು.

ಇದರಿಂದ ದುಃಖ ಹೆಚ್ಚಾಗಿ ಅಳತೊಡಗಿದಳು. ಸಾವೆಂದರೆ ಏನೆಂದು ತಿಳಿಯದ ಎಳೆ ಹುಡುಗಿ ಇನ್ನು ಜೀವದಿಂದಿರುವುದು ಬೇಡ ಎಂದು ಕೊಂಡಳು. ಮಗು ಸತ್ತ ವಿಷಯ ಕೇಳಿ ಪುಟ್ಟಮ್ಮಾಜಿ ನೆಲದ ಮೇಲೆ ಉರುಳಿ ಬಿದ್ದಳು. ಆದರೂ ತಂದೆಯನ್ನು ದ್ವೇಷಿಸಲಿಲ್ಲ ತನ್ನ ತಂದೆ ಮೊದಲು ತನ್ನ ಮಗಳನ್ನು ಕ್ರೈಸ್ತ ಮತಕ್ಕೆ ಮತಾಂತರಿಸಲು ಹೇಳಿದಾಗ ಒಪ್ಪಲಿಲ್ಲ. ಆದರೆ ತನ್ನ ದುರಾಡಳಿತದಿಂದ ರಾಜ್ಯವನ್ನೇ ಬಿಟ್ಟು ಹೋದಾಗ ತನ್ನ ರಾಜ್ಯ ಮತ್ತೆ ತಮ್ಮ ವಂಶಕ್ಕೆ ಬರಬೇಕಾದರೆ ನನ್ನ ಮಗಳನ್ನು ಕ್ರೈಸ್ತ ಮತಕ್ಕೆ ಮತಾಂತರಿಸುವುದಾಗಿ ನಿರ್ಧರಿಸಿದನು. ಪುಟ್ಟಮ್ಮಾಜಿ ತಂದೆಯ ಮಾತಿನಂತೆ ಒಪ್ಪಿಕೊಂಡಳು. ಮೇಗ್ ಲಿಂಗ್ ಪಾದ್ರಿ ಕ್ರೈಸ್ತ ಧರ್ಮದ

ಬಗ್ಗೆ ತಿಳಿಸಿಕೊಡುವುದಾಗಿ ಹೇಳಿ ರಾಜಕುಮಾರಿಯನ್ನು ನೋಡಿಕೊಳ್ಳಲು ಲೂಸಿ ಹಾಕರ್‌ನನ್ನು ನೇಮಿಸಿದರು. ಉತ್ತಯ್ಯ ರಾಜಕುಮಾರಿಯನ್ನು ಮದುವೆಯಾಗಲು ಒಪ್ಪಿಸಿದನು. ಆದರೆ ಲೂಸಿ ಹಾಕರ್‌ಗೆ ರಾಜಕುಮಾರಿ ವಿದ್ಯಾಭ್ಯಾಸದ ನಂತರ ಮದುವೆಯಾಗುವೇ ಎಂದು ಪತ್ರದಲ್ಲಿ ತಿಳಿಸಿದಳು.

ಲೂಸಿ ರಾಜಕುಮಾರಿಯನ್ನು ಕ್ರೈಸ್ತಳನ್ನಾಗಿ ಮಾಡಿದರೆ ಇಡಿ ಕೊಡಗು ಕ್ರೈಸ್ತ ಮತಾವಲಂಬಿಯಾಗಿ ಮಾಡಬಹುದೆಂದು ಲೂಸಿಯ ಅಭಿಪ್ರಾಯವಾಗಿತ್ತು. ವಿದ್ಯಾಭ್ಯಾಸ ಮುಗಿದ ಮೇಲೆ ರಾಜಕುಮಾರಿಯನ್ನು 'ಕ್ಯಾಪ್ಟನ್' ಸಾಹೇಬನಿಗೆ ಕೊಟ್ಟು ವಿವಾಹ ಮಾಡಿದರು. ಸಾಹೇಬನು ತನ್ನ ಹೆಂಡತಿಗೆ ಆಂಗ್ಲರ ಉನ್ನತ ಸಮಾಜದ ರೀತಿ ನೀತಿಗಳನ್ನು ಹಾಗೆಯೇ ಕ್ರೈಸ್ತ ಧರ್ಮದ ವಿಶೇಷ ತತ್ವಗಳನ್ನು ತಿಳಿಸಲು ತನ್ನ ಅಕ್ಕ ಲೋಗನ್ ಎಂಬಾಕೆಯನ್ನು ನೇಮಕ ಮಾಡಿದನು. ರಾಜಕುಮಾರಿಯ ಮನಸ್ಸು ಕ್ರೈಸ್ತ ಮತದತ್ತ ಸೆಳೆಯಿತು. ರಾಜಕುಮಾರಿ ಕೆಲವು ವರ್ಷದಲ್ಲಿ ಒಬ್ಬ ಮಗಳಿಗೆ ಜನ್ಮ ಕೊಟ್ಟಳು. ಆ ಮಗು ಹುಟ್ಟಿದ ಮೂರು ವರ್ಷದಲ್ಲಿ ವೀರರಾಜ ತೀರಿಕೊಂಡನು. ಇದಾದ ಎರಡು ವರ್ಷದ ಒಳಗಾಗಿ ರಾಜಕುಮಾರಿ ತೀರಿಕೊಂಡಳು. ಕೊಡಗಿನ ಅರಮನೆಯ ಆಂಗ್ಲ ಜೀವನದ ಗುರುತಾಗಿ ಎಡಿತ್ ಸಾತು ವಿಕ್ಟೋರಿಯಾ ಗೌರಿ ಕ್ಯಾಂಬೆಲ್ ಎಂಬ ಎಳೆ ಹುಡುಗಿ ಒಂದು ತನ್ನ ತಂದೆ ಕ್ಯಾಪ್ಟನ್ ಕೈಯಲ್ಲಿ ಇಂಗ್ಲೆಂಡಿನಲ್ಲಿ ಉಳಿಯಿತು. ಈ ವೇಳೆಗೆ ಕೊಡಗು ಆಂಗ್ಲರ ಕೈಯಲ್ಲಿ ಮೂವತ್ತು ವರುಷ ಬಾಳಿತ್ತು. ಕೊಡಗಿನ ಜನ ಇದಾವುದನ್ನೂ ಅರಿಯದೆ ನಡೆದರು.

ಕುಂಟ ಬಸವ:- ವೀರರಾಜನ ಎಲ್ಲಾ ವರ್ತನೆಗಳ ಹಾಸಿಗೆ ಹೊಕ್ಕುದಂತೆ ಹೆಣೆದುಕೊಂಡ ಪಾತ್ರ ಕುಂಟ ಬಸವನದು. ಕುಸಂಸ್ಕಾರದಲ್ಲಿ ಬೆಳೆದು ಸಹವಾಸ ಪ್ರಭಾವವೇ ಮಂತ್ರಿ ಪದವಿಗೆ ಕಾರಣವಾಗಿ ದಾಸ್ಯಭಾವದ ಕೀಳರಿಮೆಯಲ್ಲಿ ಕುಬ್ಜನಾಗಿರುವನು. ಚಿಕವೀರರಾಜನ ಎಲ್ಲಾ ದುಷ್ಟ ನಡವಳಿಕೆಗೂ ಇವನು ತಲೆಹಿಡುಕ. ಇವನಿಗೆ ಮಂತ್ರಿ ಪದವಿಯನ್ನು ಕೊಡಮಾಡಿದ ಸಂದರ್ಭದಲ್ಲಿ ಬೋಪಣ್ಣ ಆಡುವ "ನಾಯಿಂದ ನಮ್ಮ ಪಕ್ಕದಲ್ಲಿ ಕೂರುವ ಮಾತಿಗೆ ನಾಡಿಗೆ ಒಂದು ಪಿಳ್ಳೆ ಒಪ್ಪೋದಿಲ್ಲ. (ಪುಟ-47) "ಕುಂಟ ನಿಮ್ಮ ಮೈವಳಿಗ ಆಗಿರಬಹುದು, ಕಿವಿ ಮಂತ್ರಿ ಆಗಬಹುದು, ನಾಡಮಂತ್ರಿ ಆಗುವುದು ನಮಗೆ ಒಪ್ಪಿಗೆ ಇಲ್ಲ"[21](ಪುಟ-48) ಎಂಬ ಮಾತುಗಳು ನಿಷ್ಟುರವಾದರೂ ವ್ಯವಸ್ಥೆಯಲ್ಲಿದ್ದ ಜಾತಿ ರೀತಿ-ನೀತಿಗಳ ಬಳಗವನ್ನು ಧ್ವನಿಸುತ್ತವೆ. ಹೆಚ್ಚಿನದಾಗಿ ಬಸವನ ಸಹವಾಸ ಸಂಸ್ಕಾರದಿಂದಾಗಿ ಆಗಿರುವ ಆಗುತ್ತಿರುವ ಅಪಹಾಸ್ಯಕ್ಕೆ ತೋರಿದ ಪ್ರತಿಭಟನಾ ಸೂಚನೆಯೂ ಬೋಪಣ್ಣನ ಮಾತಿನಲ್ಲಿದೆ. ಬಸವನ ಮಂತ್ರಿ ಪದವಿ ಕೇವಲ ಹೆಸರಾಗಿ ಕಥೆಯಲ್ಲಿ ಉಳಿದಿದೆಯೇ ಹೊರತು ಇವನ ಸರಿಸಮ ಸ್ಥಾನಮಾನದವರಾರೂ ಇವನನ್ನು ಮಂತ್ರಿಯಾಗಿ ಗೌರವಿಸಿಲ್ಲ, ಗಮನಿಸಲಿಲ್ಲ, ಬೇರೆಯವರು ಹಾಗೆ ಗಮನಿಸಿದ ಸಂದರ್ಭಗಳಿದ್ದರೆ ಅವುಗಳ ಹೂರಣ ವ್ಯಂಗ್ಯ "ಗಾದೆ ಉಂಟಲ್ಲ ಕೊಡಗರಲ್ಲಿ ಪುಟ್ಟಪ್ಪಾಜಿ ದೊಡ್ಡ ಕೆಲಸಕ್ಕೆ ದೊಡ್ಡಕೆಣ, ಚಿಕ್ಕ ಕೆಲಸಕ್ಕೆ ಚಿಕ್ಕಕೆಣ. ಕೂಕರೀನ ತಂದಾ ತಕ್ಕ ಎಂದರೆ ಮಂದಿ ಎದುರು ಮೈಕಣಾ.

ಅರವತ್ತು ವರ್ಷದ ತಕ್ಕನ ಮುಂದೆ ಮೂರು ವರ್ಷದ ಮಂತ್ರಿ ಮರ್ಯಾದೆ ಮೇಲೆ ನಿಲ್ಲುತ್ತಾರಲ್ಲ"[22](ಪುಟ-185).

ಉತ್ತಯ್ಯ ತಕ್ಕನ ಈ ಮಾತುಗಳು ಇಡೀ ಕೃತಿಯ ಆಶಯ ಧೋರಣೆಯ ಪ್ರಾತಿನಿಧಿಕ ದನಿಯಾಗಿವೆ. ಬ್ರಿಟಿಷರು ಬಂದಾಗ ಮಾತ್ರ ಬಸವನ ಮಂತ್ರಿ ಪದವಿಗೆ ಒಂದು ಗಮನಿಕೆ ಚಾಲನೆ ಸಿಕ್ಕಿದೆ. ತೀರಹದಗೆಟ್ಟ ಸ್ಥಿತಿಗಿಳಿದಾಗ ಆ ದುಷ್ಚಟಗಳ ಬಗೆಗೆ ಅರಸನಿಗೇ ಇವನು ಎಚ್ಚರ ಬುದ್ಧಿ ಹೇಳಲು ತೊಡಗುತ್ತಾನೆ. ಚಿಕ್ಕಣ್ಣ ಶೆಟ್ಟಿಯ ಸೊಸೆ ಮಗಳ ಪ್ರಶ್ನೆ ಬಂದಾಗ ಬಸವ ಶೆಟ್ಟಿಗೆ ಸೂಚನೆ ಕೊಡಬೇಕೆಂದು ಯೋಚಿಸುವುದು ಅವನ ಆಳದಲ್ಲಿರುವ ಒಳ್ಳೆಭಾವದ ದನಿಯಾಗಿದೆ. ಆದರೆ ಪರಿಸ್ಥಿತಿ ಬಸವನನ್ನು ಮೀರಿದಂತೆ ಉಲ್ಬಣವಾಗಿದೆ ಅರಸ ಜಾರುವಲ್ಲಿಯೇ ಪಡೆಯುವ ವಿಕೃತ ಖುಷಿಯ ದಾಸನಾಗಿದ್ದಾನೆ. ಶೆಟ್ಟಿ ಸೊಸೆ ಮಗಳನ್ನು ಅರಕಲಗೂಡಿಗೆ ಸಾಗಿಸಿ ಮಾತಿನ ಬೆಣ್ಣೆಯಲ್ಲಿ ವಂಚಿಸುವುದು ಮತ್ತು ಆ ಮಾತಿನಲ್ಲಿಯೇ ಮಾರ್ಮಿಕವಾಗಿ ಗಡುಸಾಗಿ ಅಷ್ಟೇ ಸೂಕ್ಷ್ಮವಾಗಿ ತಿರುಗಿ ಬಿದ್ದಿರುವುದು ಅರಿವಿಗೆ ಬಂದಾಗ ಬಸವನಲ್ಲೂ "ಇದು ತಮ್ಮ ದೌಷ್ಟಕ್ಕೆ ಎಲ್ಲೆ ಇರಬೇಕು" ಎಂಬ ಎಚ್ಚರದ ಯೋಚನೆ ಹುಟ್ಟುತ್ತದೆ. ಇದರ ಅನಂತರ ಬಸವನ ಒಳ ನೋಟ ತನ್ನ ಅರಸನ ಕೃತ್ಯಗಳನ್ನು ಕುರಿತ ಅಳುಕು ಪ್ರಶ್ನಿತ ಭಾವದಲ್ಲೇ ಬೆಳೆಯುತ್ತದೆ. ದೇವಮ್ಮಾಜಿಯನ್ನು ಬಿಡುಗಡೆಗೊಳಿಸಿ ಕಳಿಸುವ ಸಂದರ್ಭದಲ್ಲಿ "ಅಮ್ಮಾಜಿಯವರು ನನ್ನ ಮನಸಿನಾಗೆ ಮುನಿಸು ಮಡಗಬಾರದು"(ಪುಟ-156) ಎಂದು ಪಶ್ಚಾತಾಪಭಾವದಿಂದ ಕೇಳುವ ಕ್ಷಮೆಯಾಚನೆಯ ಈ ನುಡಿಗಳು ಅವನ ಅಂತಃಕರಣದ ಮಾನವೀಯ ಸಂಬಂಧ ಸೆಲೆಯಲ್ಲಿ ಮಿಡಿದವುಗಳಾಗಿವೆ. ಆದರೆ ಇವನ ಈ ಮಾತುಗಳನ್ನು ಕೇಳಿ ರಾಣಿ ರಾಜಕುಮಾರಿ ದೀಕ್ಷಿತ ದೇವಮ್ಮಾಜಿ ತೋರಿದ ನಗುವಿನ ಪ್ರತಿಕ್ರಿಯೆ ಮತ್ತು ಅದಕ್ಕೆ ಪ್ರತಿಯಾಗಿ ಬಸವ ಉತ್ತರ ನಿರೀಕ್ಷಿಸದೆ ಹೊರಕ್ಕೆ ನಡೆದದ್ದು ಈ ಘಟನೆ ವ್ಯವಸ್ಥೆ ಮತ್ತು ಬಸವನ ವ್ಯಕ್ತಿತ್ವಗಳ ನಡುವಿನ ಶೀತಲ ಘರ್ಷಣೆಯನ್ನು ತುಂಬಾ ಮಾರ್ಮಿಕವಾಗಿ ಧ್ವನಿಸುತ್ತದೆ. ಪಾತ್ರದ ಮನಸ್ಸಿನ ಒಳ ಪಾತಳಿಗಳನ್ನು ಶೋಧಿಸುವ ಮತ್ತು ಅದರ ಸ್ಥಿತಿಯನ್ನು ವ್ಯವಸ್ಥೆಯ ಮಿತಿಯಲ್ಲಿ ಅನ್ವೇಷಿಸುವ ಈ ದೃಷ್ಟಿ ಮಾಸ್ತಿಯವರ ಸೂಕ್ಷ್ಮ ನಿರೀಕ್ಷಣಾ ಪ್ರಜ್ಞೆಯ ಫಲ ಭಗವತಿ ಯಾವುದು ಪಿತೂರಿ ನಡೆಸುತ್ತಿದ್ದಾಳೆ ಎಂಬ ಅನುಮಾನ ಬಂದಾಗ ಬಸವ ರಾಜನ ಬಗ್ಗೆ ಪ್ರೀತಿಯುತ ಕಾಳಜಿ ವಹಿಸಿತ್ತಾನೆ. ಅವನ ನಿಷ್ಠೆ ನೇಹಗಳು ನಿಷ್ಕಲ್ಮಷ ನಿರ್ವ್ಯಾಜ ರೀತಿಯಲ್ಲಿ ರಾಜನ ಕ್ಷೇಮ ರಕ್ಷಣೆಗೆ ಹಾತೊರೆಯುತ್ತವೆ.

ಒಂದು ಮಿತಿಯಲ್ಲಿ ರಾಮಾಯಣದ ಕೈಕೆ ಮಂಥರೆಯ ಸಂಬಂಧವನ್ನು ನೆನೆಪಿಗೆ ತರುತ್ತದೆ. ಬಸವ ಮತ್ತು ವೀರರಾಜನ ಈ ಸ್ನೇಹ ಬಂಧ ಸುತ್ತಲಿನವರೆಲ್ಲ ನಾಯಿಂದ ಕುಂಟ ಎಂದು ತಿರಸ್ಕಾರಭಾವದಿಂದ ಕಾಣುತ್ತಿದ್ದಾಗ ವೀರರಾಜ ಒಬ್ಬ ಆತ್ಮೀಯವಾಗಿ ಕಂಡದ್ದರ ಫಲ ಬಸವನ ಪ್ರೀತಿ ನಿಷ್ಠೆ. ಆದರೆ ಅದೇ ವೀರರಾಜನ ಬಾಯಲ್ಲಿ

ಬರುವ 'ಲೇ ಕುಂಟ' ಇವನ ಕಿವಿಗೆ ಆ ಅರ್ಥವನ್ನು ಕಳೆದುಕೊಂಡಿತ್ತು. ಬಸವ ಎಂದಂತೆಯೇ ಒಂದು ಹೆಸರಾಗಿತ್ತು. ಈ ಪ್ರತಿಯೇ ಭಗವತಿಯ ಹತ್ತಿರಕ್ಕೆ ಅವನನ್ನು ಎಳೆತಂದು ಅವಳು ನಡೆಸುವ ಕಾರಸ್ಥಾನದ ಬಗ್ಗೆ ನೇರವಾಗಿ ಕೇಳುವಂತೆ ಮಾಡಿದೆ. "ನಾನು ಒಂದು ಜೀವ ಅಂತ ಒಲಿದು ನೋಡಿರೋರು ಈ ಲೋಕದಾಗೆ ಅವರೊಬ್ಬರೇ ಅಂಥ ದಣಿಯ ಹತ್ತಿರ ನಾಯಿ ಆಗೋದು ಮಾನಕ್ಕೆ ಕಡಿಮೆ ಅಲ್ಲ."[23](ಪುಟ–130) ಎಂದು ಭಗವತಿಗೆ ಅವನು ಕೊಡುವ ಉತ್ತರದಲ್ಲಿ ಅವನ ಅಂತರಗವೇ ತೆರೆದುಕೊಂಡಿದೆ. ಅರಸ ಮಾಡಿದ ತಪ್ಪನ್ನು ತಾನು ಹೊರುವ ಪ್ರಸಂಗ ಬಂದರೆ ಬಸವಯ್ಯ ಅದಕ್ಕೆ ಸದಾ ಸಿದ್ಧ ಉತ್ತಯ್ಯ ತಕ್ಕನಿಗೆ ಪಡಿ ನಿಲ್ಲಿಸಿದ್ದು ಅರಸನಾದರೂ ಅದರ ತಪ್ಪನ್ನು ರಾಜ ಬಸವನ ಮೇಲೆ ಹಾಕಿದಾಗ ಅದನ್ನು ಅವನು ಹೊಯುತ್ತಾನೆ. ಇವನ ಇಂಥ ಗುಣವೇ ಇವನನ್ನು ರಾಜನ ಆಪ್ತನನ್ನಾಗಿಸಿದೆ.

ಪಡೆವಳ ಉತ್ತಯ್ಯನನ್ನು ರಾಜನ ಕೋಪದಿಂದ ತಪ್ಪಿಸುವುದಕ್ಕೆ ಬಸವ ಪ್ರಯತ್ನಿಸುವ ಪ್ರಸಂಗ, ಪಾಣೆ ಹುಡುಗಿಯನ್ನು ಬಿಡಿಸಿಕೊಂಡು ಹೋಗುವಾಗ ಆ ಗಂಡಹೆಂಡಿರಾಡುವ ಮಾತು ಕೇಳಿ ಬಸವಯ್ಯನಾಳದಲ್ಲಿ ಅಳುಕು ಮುಡುವುದು. ಈ ಇತ್ಯಾದಿ ಪ್ರಸಂಗಗಳಲ್ಲಿ ಬಸವಯ್ಯನಲ್ಲಿ ಮೊಳೆತ ಪಾಪಭೀತಿ ಅವನನ್ನು ಮೃದುವಾಗಿಸುತ್ತಿರುವುದನ್ನೇ ಕಾಣಿಸುತ್ತವೆ. ಆದರೆ ಪಾಣೆ ಸೂರ್ಯನಾರಾಯಣ ಅಣುಕು ನಾಟಕದಲ್ಲಿ ಮಾಡಿದ ಬಹಿರಂಗ ಅಪಮಾನ ಅವನಲ್ಲಿ ಮೊಳೆತ ಈ ಮೃದು ಭಾವವನ್ನು ಕೊಂದು ಅವನ ದುಷ್ಟತನವನ್ನೇ ತಬ್ಬಿಕೊಳ್ಳುವಂತೆ ಕ್ರೂರಿಯಾಗಿಸುತ್ತದೆ. ಪರಿಣಾಮ ಕುಂಟ ಲಕ್ಕನನ್ನು ವಿಕೃತ ಹಿಂಸೆಗೆ ನೂಕಿದ್ದು, ಉತ್ತಯ್ಯ ತಕ್ಕನನ್ನು ಹೊಡೆಯಲು ಪುಂಡ ಮಾಲಿಗನನ್ನು ಬಿಟ್ಟಿದ್ದು ಇಷ್ಟಾಗಿಯೂ ಒಳಿತನ್ನು ಹಂಬಲಿಸುವ ಹಾಳದ ಇವನ ತುಡಿತ ಪೂರ್ಣ ಮಾಲಿಗನನ್ನು ಬಿಟ್ಟಿದ್ದು ಇಷ್ಟಾಗಿಯೂ ಒಳಿತನ್ನು ಹಂಬಲಿಸುವ ಹಾಳದ ಇವನ ತುಡಿತ ಪೂರ್ಣ ಕಳೆದು ಹೋಗಿಲ್ಲ. ಮಗುವನ್ನು ಅರಸನೇ ಮುಗಿಸಿದ ಘಾತುಕ ಸಂಗತಿಯನ್ನು ಅರಸನ ಬಾಯಿಂದಲೇ ಕೇಳಿದ ಬಸವ ಬೆಚ್ಚಿಬೀಳುತ್ತಾನೆ. ಈ ಕೆಲಸವನ್ನು ತಾನು ಮಾಡುವುದು ತಪ್ಪಿತಲ್ಲ ಅಷ್ಟರ ಮಟ್ಟಿಗೆ ಒಳ್ಳೆಯದಾಯಿತು ಎಂದು ಒಂದು ತೆರನ ಸಮಾಧಾನ ಪಡುತ್ತಾನೆ. ಮರುಕ್ಷಣದಲ್ಲಿಯೇ ಮುಂದೆ ಆಗಬಹುದಾದ ಅಪಾಯಗಳ ಕಲ್ಪನೆ ಮೂಡಿ ಈ ನಿಟ್ಟಿನಲ್ಲೂ ತನ್ನ ಒಡೆಯನಿಗಾಗಿ ಅವನ ಜೀವ ತಳಮಳಗೊಳ್ಳುತ್ತದೆ. ಈ ಸಂದರ್ಭದಲ್ಲಿನ ಅವನ ಊಹೆ ಒಳತೋಟಗಳು ಇಡಿಯಾಗಿ ನಿಜದ ನೆಲೆಗೆ ಹಾತೊರೆದು ಒಳಿತಿನ ಆರೈಕೆ, ನಿಷ್ಠೆ, ಪ್ರೀತಿಭಾವಗಳನ್ನೇ ವ್ಯಂಜಿಸುತ್ತವೆ. ಅರಸನಿಗೆ ಮತಿಭ್ರಮಣೆಯಾದ ಸಂದರ್ಭದಲ್ಲಿ ಅದು ಹೊರಕ್ಕೆ ತಿಳಿಯದಂತೆ ಗೋಪ್ಯವಾಗಿಟ್ಟ ಇವನ ನಡವಳಿಕೆ ಈ ನಿಷ್ಠೆಯ ಗಟ್ಟಿತನವನ್ನು ನಿಚ್ಚಳವಾಗಿ ಬೆಳಗಿಸಿದೆ. ತನ್ನ ಉಸಿರಿನ ಕೊನೆಯವರೆಗೂ ನಿಷ್ಠೆಯನ್ನು ನಿಷ್ಕಲ್ಮಷವಾಗಿ ತನ್ನ ದಣಿಗೆ ತೋರಿದ ಆತ್ಮೀಯ ಸೇವಕ ಬಸವ. ಆದರೆ ಅದೇ ದುರಂಹಕಾರಿ ದೊರೆಯ ದುರ್ಬಲ ಮನಸ್ಸಿನ ಅನುಮಾನಕ್ಕೆ ಇವನ ಈ ನಿಷ್ಠೆ ಬಲಿಯಾಯಿತು. ಬಸವನ

ಪ್ರಾಣ ಅವನ ಪ್ರೀತಿಯ ಕೈಯಿಂದಲೇ ಹೋಗಿದ್ದು ಅವನ ನಿಷ್ಠಾವಂತ ಬದುಕಿನ ದುರಂತ ವ್ಯಂಗ್ಯ. ಹುಟ್ಟಿಸಿದ ತಂದೆ ಕಾಲು ತಿರುಚಿದ, ನಂಬಿದ ದಣಿ ಕೊಂದು ಹಾಕಿದ ತನ್ನ ಹುಟ್ಟಿನ ರಹಸ್ಯ ತನಗೆ ಗೊತ್ತಾಗದಂತೆಯೇ ಬದುಕ ಹೊರೆದು ಉರಿದು ಹೋದ ಬಸವನ ಸ್ಥಿತಿಗತಿ ಮರ್ಮಭೇದಕವಾಗಿದೆ. "ಕತೆಗಾರ ಕಾದಂಬರಿಕಾರ ಶ್ರೀನಿವಾಸರು ಶುದ್ಧ ಕೆಟ್ಟತನಗಳನ್ನು, ದುಷ್ಟಕಾರ್ಯಗಳನ್ನು ಸಂತೋಷದಿಂದ, ಹೆಮ್ಮೆಯಿಂದ ಮಾಡುವ ಕೆಟ್ಟತನಗಳನ್ನು ಅವರ ಕಾದಂಬರಿಗಳಲ್ಲಿ ನಾವು ಕಾಣುವುದಿಲ್ಲ."[24] ಎಂಬುದಕ್ಕೆ ವೀರರಾಜ ಮತ್ತು ಬಸವನ ಪಾತ್ರಗಳಿಗೆ ಉತ್ತಮ ನಿದರ್ಶನಗಳಾಗಿವೆ ಎಂದು ತಿಳಿಸಿದ್ದೇನೆ.

ಕಾದಂಬರಿಯಲ್ಲಿ ಇನ್ನು ಗಮನಿಸಬಹುದಾದ ಬಹು ಮುಖ್ಯ ಪಾತ್ರಗಳು ಲಕ್ಷ್ಮೀನಾರಾಯಣಯ್ಯ ಮತ್ತು ಬೋಪಣ್ಣ ಕಥಾಮುಖದಲ್ಲಿಯೇ ವರ್ಣಿತವಾಗಿರುವ ಇವನ ಅನ್ನದಾನದ ನಿತ್ಯ ವಿಧಿ ಇವರ ಮನೋಧರ್ಮ ಮತ್ತು ಜನ ಸಂದರ್ಭದ ಮುಖವನ್ನು ಸೂಕ್ಷ್ಮವಾಗಿ ವ್ಯಂಜಿಸುತ್ತದೆ. ಅಧೋಗತಿಗಿಳಿಯುತ್ತಿರುವ ಬದುಕನ್ನು ಸುಭದ್ರ ನೆಲೆಯಲ್ಲಿ ನಿಲ್ಲಿಸಬೇಕೆಂದು ತುಡಿಯುವವರು ಈ ಇಬ್ಬರು ಮಂತ್ರಿಗಳು. ಇವರಲ್ಲಿ ಲಕ್ಷ್ಮೀನಾರಾಯಣಯ್ಯ ಇತ್ತ ರಾಜನನ್ನು ನೇರವಾಗಿ ಎದುರಿಸಲೂ ಆಗದ ಅತ್ತ ವಸ್ತುಸ್ಥಿತಿಯ ಕ್ರೂರತೆಯನ್ನು ನುಂಗಲೂ ಆಗದ ಇರುಕಿನಲ್ಲಿ ನಯವಾಗಿ ನಡೆದುಕೊಳ್ಳುವ, ನಯದ ನೀತಿಯಲ್ಲಿಯೇ ಒಂದು ಪರಿಹಾರಕ್ಕೆ ಹವಣಿಸುವ ಮನೋಧರ್ಮವನು, ಬೋಪಣ್ಣನಲ್ಲಿ ಈ ನಯಗಾರಿಕೆಯ ಹೊಂದಣಿಕೆ ಸಾಧ್ಯವಿಲ್ಲ. ಅವನಲ್ಲಿನ ರಾಜನ ಸ್ವಾಭಿಮಾನ ಕೆಟ್ಟದ್ದನು ಸದ್ಯಕ್ಕೆ ಸಹಿಸುವಂತೆ ಕಂಡುಬಂದರು ಸಂದರ್ಭ ಒದಗಿದಾಗ ವಿರೋಧ ವ್ಯಕ್ತಪಡಿಸುವ ಬೂದಿಮುಚ್ಚಿದ ಬೆಂಕಿಗುಣವಾಗಿದೆ. ಆದರೆ ಬೋಪಣ್ಣನ ಈ ಬೆಂಕಿಗುಣಕ್ಕೆ ತಾಳಬೇಕೆನ್ನುವ ಲಕ್ಷ್ಮೀನಾರಾಯಣಯ್ಯನ ಕಡಿವಾಣವಿದೆ. ಇದು ಇಡೀ ಕೃತಿಯುದ್ದಕ್ಕೂ ಇವರಬ್ಬರ ಸಂಬಂಧದ ಸ್ನೇಹಕೊಂಡಿಯಾಗಿ ಹರಿದ ಶಕ್ತಿಯಾಗಿದೆ.

ಬೋಪಣ್ಣನಿಗೆ ಕೊಡಗರು, ಕೊಡಗರ ಹೆಣ್ಣು, ಕೊಡಗರ ಸ್ವಾಭಿಮಾನ ಇವುಗಳಿಗೆ ಇತ್ಯಾಧಿ ಬಗ್ಗೆ ಹೇಳಿಕೊಳ್ಳದ ಸ್ವಾಭಿಮಾನ ಇವಿಗಳಿಗೆ ಯಾರಿಂದ ಧಕ್ಕೆ ಬಂದಗಲೂ ಈ ಸ್ವಾಭಿಮಾನ ಹೆಡೆಬಿಚ್ಚುವ ಫಣಿಯಾಗುತ್ತದೆ. ಅದೇ ಲಕ್ಷ್ಮೀನಾರಾಯಣಯ್ಯನಿಗೆ ತನ್ನ ಜಾತಿಯ ಬಗ್ಗೆ ಈ ಭಾವ ಇದ್ದರೂ ಅವನು ಅದನ್ನು ಹೇಳಿ ತೋರಿಸಿಕೊಳ್ಳುವುದಿಲ್ಲ. ರಾಜನ ಜಾತಿಯ ಬಗ್ಗೆ ಇವರಿಬ್ಬರಿಗೂ ಗುಪ್ತದ್ವೇಷ ಇರುವ ಸೂಚನೆಗಳಿವೆ. ರಾಜನನ್ನು ಕುರಿತು ಅವನ ಸಂಸ್ಕಾರ ನಡವಳಿಕೆ ಕುರಿತು ಆಡುವ ಮಾತುಗಳಲ್ಲಿ ಈ ಅಂಶ ಮಾರ್ಮಿಕವಾಗಿ ಬಿಚ್ಚಿಕೊಳ್ಳುತ್ತದೆ. ನಿದರ್ಶನಕ್ಕೆ ಬೋಪಣ್ಣನ ಈ ಮಾತುಗಳು "ದೊರೆ ಕೆಲಸಕ್ಕೆ ಬರಬೇಕಾದರೆ ಬಿಕ್ಕೆ ಜನವೇ ಸರಿ, ಕೊಡಗರಲ್ಲ. ಬೇಕಾದ ಅಬ್ಬೇಪಾರಿ ಬರಲಿ ಗಾದಿ ಮೇಲೆ ಕೂರಲಿ ರಾಜ. ಅಂತ ನಡೆಸೋಣ"[25](ಪು–461) "ಕಂಡಿರಾ ಅಯ್ಯನವರೇ ಈ ತಿರುಕ ಅರಸನ ಮನೆತನ ಎಂಥ ಮಾತನ್ನು ಆಡಬಲ್ಲದು? ಕೊಡಗಿತಿ

ಹೊಟ್ಟೆಯಲ್ಲಿ ಹುಟ್ಟಿ, ಕೊಡಗಿತಿನ ಮದುವೆಯಾಗಿ ಇವನಿಗೆ ಇನ್ನೂ ತಿಳಿದಲ್ಲ ಕೊಡಗರು ಅನ್ನೋರ ಗುಣ" (ಪು–102) ಅರಸನನ್ನು ಗಾದಿಯಿಂದ ಇಳಿಸುವುದಕ್ಕೆ ಬೋಪಣ್ಣ ಹಾಕದ್ದ ಮೂರು ತಪ್ಪಿನ ಷರತ್ತು ಕೂಡ ಜಾತಿಯ ಪರೀಧಿಯೊಳಗೇ ಗಮನಕ್ಕೆ ಬಂದಿದೆ. "ಹಾರೋರ ಹುಡುಗೀನ ಕದ್ದಿದ್ದಾರೆ; ಕೊಡಗಿನ ಮನೇನ ಕೆಣಕಿದ್ದಾರೆ; ತಕ್ಕನ ಪಡಿ ತಪ್ಪಿಸಿದ್ದಾರೆ" (ಪು–173) ಲಕ್ಷ್ಮೀನಾರಾಯಣಯ್ಯ ಒಳ್ಳೆಯಾದಕ್ಕಾಗಿ ಎಷ್ಟೇ ಆಶಿಸಿದರೂ ಅದನ್ನು ಬದುಕಿನ ಸಂದರ್ಭದಲ್ಲಿ ಹಾಗೇ ಮಾಡುವುದಕ್ಕೆ ಬೇಕಾದ ಗಟ್ಟಿಧೈರ್ಯ ಇವನಲ್ಲಿಲ್ಲ. ಪಾಣೆ ಹೆಣ್ಣನು ಬಿಡಿಸಿ ತರುವುದರಲ್ಲಿ ಇವನು ತೋರಿದ ವತ್ನೆ ಇವನ ತಾಯಿಯೇ ಹೇಳುವ "ಅಪ್ಪಯ್ಯ ಮಂದಿ ಕೆಲಸದಲ್ಲಿರೋರು ಇನ್ನೂ ಸ್ವಲ್ಪ ಗಟ್ಟಿಯಾಗಿ ನಿಲ್ಲಬೇಕು." (ಪು–196) ಈ ಮಾತು ಇವನ ಹಿಂಜರಿತ ಸ್ವಭಾವಕ್ಕೆ ಹಿಡಿದ ಕನ್ನಡಿಯಂತಿದೆ.

ಇಷ್ಟಾಗಿಯೂ ಈ ಇಬ್ಬರು ಮಂತ್ರಿಗಳ ನಡುವಿನ ಸ್ನೇಹ ಸಂಬಂಧ ಜಾತಿ–ನೀತಿಗಳ ಎಲ್ಲೆ ಕಟ್ಟನ್ನು ಮೀರಿ ಹರಿದ ಆತ್ಮೀಯತೆಯ ಆಳದ್ದಲ್ಲಿ ಕೇವಲ ಅನುಕೂಲ ಹಾರೈಕೆಯ ಹೊಂದಾಣಿಕೆಯ ಗುಣದ್ದು. ಅರಸನನ್ನು ನಿರ್ಲಕ್ಷಿಸಿದ ಬೋಪಣ್ಣ ಕರ್ನಲ್ ಜೊತೆ ಒಪ್ಪಂದ ಮಾಡಿಕೊಂಡಿದ್ದನ್ನು ಕಂಡು ಅಸಮಾಧಾನಿತನಾದ ಲಕ್ಷ್ಮೀನಾರಾಯಣಯ್ಯ "ಕೊಡಗು ನಿಮ್ಮದು ಬೋಪಣ್ಣ ಅದನ್ನು ಹೆರವರ ಕೈಗೆ ಕೊಡಬಹುದು"(ಪುಟ–437) ಎನ್ನುವಲ್ಲಿ ಈ ಜಾತಿ ರೇಖೆಯ ಬಿರುಕಿನ ಅಸಮಾಧಾನವೂ ಹೊಗೆಯಾಡಿದೆ. ರಾಜನನ್ನು ಗಾದಿಯಿಂದ ಇಳಿಸುವುದಕ್ಕೆ ತಕ್ಕ ಅನುಕೂಲ ಒದಗಿ ಬಂದಾಗ ಬೋಪಣ್ಣ ವರ್ತಿಸುವ ರೀತಿಗೂ ಲಕ್ಷೀನಾರಾಯಣಯ್ಯ ನಡೆದುಕೊಳ್ಳುವ ರೀತಿಗೂ ಫರಕು ಈ ಕಂದರವನ್ನೂ ಕಂದರದ ಹೊಂದಾಣಿಕೆಯನ್ನು ಮಾರ್ಮಿಕವಾಗಿ ಧ್ವನಿಸುತ್ತದೆ. ಮೂವತ್ತೈದು ತಕ್ಕುಮೆ ಹಿರಿಯರೂ ಬೋಪಣ್ಣನಿಗೆ ಒಕ್ಕೊರಲಿನ ಸಹಕಾರ ಸಾರುವುದನ್ನು ನೋಡಿದರೆ ಈ ಸಹಕಾರಕ್ಕೆ ವೀರರಾಜನ ಬಗೆಗಿನ ಜುಗುಪ್ಸೆ ಪರೋಕ್ಷವಾಗಿ ಸ್ಥಾಪಿಸಿಕೊಂಡಿದ್ದ ಪ್ರಭಾವ ಕೂಡ ಎಂಬ ಧ್ವನಿ ಮೊಳೆಯುತ್ತದೆ. ಲಕ್ಷ್ಮೀನಾರಾಯಣಯ್ಯ ಹೇಳುವ 'ರಾಜ್ಯವನ್ನು ನಡೆಸುವ ನಾಯಕ ನಿಮ್ಮಂತೆ ಇರಬೇಕು, ನನ್ನಂತಲ್ಲ'(ಪುಟ–397) "ಅರಸರಲ್ಲ, ಅಮ್ಮಾಜಿ ಅಲ್ಲ, ಮಗಳಲ್ಲ ಎಂದ ಮೇಲೆ ನೀವೆ ದೊಡ್ಡ ಮನಸ್ಸು ಮಾಡಿ ಗಾದಿ ಮೇಲೆ ಕೂರಬೇಕು"(ಪುಟ–460), 'ನೀವು ಎನ್ನುವುದು ಬೇಡ ಬೋಪಣ್ಣ ದ್ರೋಹ ಅಲ್ಲ ಅಂತ ನಾನು ಎನ್ನುತ್ತೇನೆ, ನಾನು ಬೇಡಿಕೊಂಡೆ ಅನ್ನುತ್ತೇನೆ'(ಪುಟ–460). ಈ ಮೂರು ಮಾತುಗಳೂ ಮೇಲಿನ ಅಭಿಪ್ರಾಯದ ಒಳಗನ್ನು ವ್ಯಂಜಿಸುತ್ತವೆ. ಹೆಚ್ಚಿನದಾಗಿ ಗೆದ್ದ ಶಕ್ತಿಗೆ ನಿಷ್ಠೆ ಸಾರುವ ಲಕ್ಷ್ಮೀನಾರಾಯಣಯ್ಯನ ದೌರ್ಬಲ್ಯದ ಅಂಶವನ್ನು ಸೂಚ್ಯವಾಗಿ ಕಾಣಿಸುತ್ತಿದೆ. ಬಹಿರಂಗ ಸಭೆಯಲ್ಲಿ ಬೋಪಣ್ಣನ ವರ್ತನೆ ಕಾರಸ್ಥಾನದ ಮುಖಂಡನ ವರ್ತನೆಯನ್ನೇ ನೆನೆಪಿಸುತ್ತದೆ. ಮಾಜಿ ಮಂತ್ರಿ ಪೊನ್ನಪ್ಪನನ್ನು ಕರೆತಂದು

ಕೂರಿಸಿಕೊಂಡಿರುವುದು, ಕಣ್ಣ ಸನ್ನೆಯಲ್ಲೆ ಊರ ಮುಖಂಡರ ಬಾಯಿಂದ ಉತ್ತರ ಹೇಳಿಸುವುದು ಇತ್ಯಾದಿ ಕೃತ್ಯಗಳು ಅವನ ಮನೋಗರ್ಭವನ್ನು ಅನುಮಾನಿಸುವುದಕ್ಕೆ ಅವಕಾಶವಾಗುತ್ತದೆ. ಸಾರ್ವಜನಿಕರ ಕರ್ತವ್ಯಗಳನ್ನು ಸ್ಪಷ್ಟವಾಗಿ ಕಂಡು ಬೇರೆ-ಬೇರೆಯಾಗಿ ನಿಲ್ಲಿಸದೆ ವೈಯಕ್ತಿಕ ಭಾವನೆ ಕರ್ತವಕ್ಕೆ ಪ್ರಾಧಾನ್ಯ ನೀಡಿ ಇಡೀ ಸಮುದಾಯದ ವಿಪತ್ತಿಗೆ ಕಾರಣರಾಗುತ್ತಾರೆ. ಹೊರಗಿನ ಇಂಗ್ಲೀಷರವರನ್ನು ಪ್ರವೇಶ ಮಾಡುವುದಕ್ಕೆ ಸುಲಭಗೊಳಿಸುತ್ತಾರೆ ಬೋಪಣ್ಣ ಮತ್ತು ಲಕ್ಷ್ಮೀನಾರಾಯಣಯ್ಯ. ದೀಕ್ಷಿತ ಅರಮನೆಯ ಪುರೋಹಿತ ಜ್ಯೋತಿಷ್ಯ ದೇವರ ಪೂಜೆಗಳಲ್ಲಿ ನಿರತನಾಗಿದ್ದಂತೆ ಅರಮನೆಯ ಹಿತ ಹಾರೈಸುವವನು ಸತ್ಯ ಪಕ್ಷಪಾತಿ. “ತಂಗಿ ಮ್ಯಾಲೆ ಕೋಪಕ್ಕೆ ಅಳಿಯನ್ನ ಕೊಲ್ಲುವ ಅರಸ ನಾನಿರ್ತ ಕಂಸ ಯಾಕೆ ಅಂದ್ಹಾಗಾತಲ್ಲ”(ಪುಟ-393) ಎಂಬ ದನಿಯಾಗಿ ಇಡೀ ಕೃತಿಯಗಲಕ್ಕೆ ಉಸಿರಾಡಿದ ವಟವೃಕ್ಷವಾಗಿದೆ ಈ ನಂಬಿಕೆ. “ಹರಿವಾಣದ ತುಂಬ ಅನ್ನ ಉಂಡ ಬಾಯಿಗೆ ಒಂದು ಕಲ್ಲು ಸಿಕ್ಕಿದ್ದರೆ ಏನು ಬಹಳ, ತಣಿಗೆ ಅನ್ನ ಉಂಡದ್ದು ಸುಳ್ಳೆ”(ಪುಟ-155) ದೀಕ್ಷಿತನ ಈ ಮಾತುಗಳು ರಾಜವಂಶದ ಬಗೆಗೆ ಹೃದಯಾದಾಳದ ಕೃತಜ್ಞತಾಭಾವದಿಂದ ಮೂಡಿದವು. ಭಗವತಿ ಬಂದು ಮಗ ರಾಜನಾಗಲು ಸಹಾಯ ಮಾಡು ಎಂದಾಗ ಇವನು “ನೀನು ನಮ್ಮ ಮನೆ ಮಗು, ಆದರೂ ನಿಮ್ಮಮ್ಮ ನಮ್ಮ ಮನೆ ಹೆಂಗಸಲ್ಲ, ಆದರಿಂದೇನಾಯ್ತು? ನೀನು ನಮ್ಮ ಮನೆ ಒಳಗಿಲ್ಲ, ಹೀಗೆಯೇ ನೋಡು ನಿನ್ನ ಮಗ ಅರಸನ ಮಗ, ಆದರೆ ನೀನು ಅರಸನ ಮನೆ ಹೆಂಗಸಲ್ಲ, ಮಗ ಅರಮನೆ ಮಗನಲ್ಲ.”[26](ಪುಟ-167) ಎನ್ನುತ್ತಾನೆ.

ಈ ನಿಲುವು ರಾಜ ನಿಷ್ಠೆಯ ನಿಲುವಾದಷ್ಟೆ ಸಂಪ್ರದಾಯದ ಜಾತಿ ನೀತಿಯ ಲಕ್ಷ್ಮಣ ರೇಖೆಯನ್ನು ಗಟ್ಟಿಗೊಳಿಸುವ ನಂಬಿಕೆಯೂ ಆಗಿದೆ. ಹುಟ್ಟಿದ ಕಡೆ ನ್ಯಾಯವಾಗಿ ಬಾಳಬೇಕು, ಧರ್ಮದಿಂದ ನಡೆಯಬೇಕು ಎಂಬುದು ಈ ಪಾತ್ರದ ಜೀವನ ದೃಷ್ಟಿ ಇದು ಮಾಸ್ತಿಯವರ ಜೀವನ ದೃಷ್ಟಿಯೂ ಹೌದು ನನ್ನ ದೃಷ್ಟಿ ಹೌದು. ಗೌರಮ್ಮಾಜಿಯನ್ನು ಕಾಶಿಯಲ್ಲಿ ಸಂಸ್ಕಾರ ಮಾಡಿ ಬಂದ ನಂತರ ಆಕೆಯ ಹೆಸರನ್ನು ಹೇಳಿ ಓಂಕಾರೇಶ್ವರ ದೇವಾಲಯದಲ್ಲಿ ಅನ್ನ ಸಂತರ್ಪಣೆ ಮಾಡುವ ಕೃತಜ್ಞತೆಯವರೆಗೆ ತನ್ನ ಪೌರೋಹಿತ್ಯ ನಿಷ್ಠೆಯನ್ನು ಸರಾಗವಾಗಿ ಬದುಕಿದ ಜೀವ ದೀಕ್ಷಿತ. ಭಗವತಿ ಒಂದು ಕಾಲ್ಪನಿಕ ಪಾತ್ರವನ್ನು ನೋಡಬಹುದು ಇವಳನ್ನು ಯಾವುದೇ ಪಾತ್ರದೆದುರು ನಿಲ್ಲಿಸಿದಾಗಲೂ ಇವಳ ರೂಪ, ಗಾಂಭೀರ್ಯ, ವಿದ್ವತ್ ಶಕ್ತಿಗಳನ್ನು ಕುರಿತು ವರ್ಣಿಸುವುದನ್ನು ಲೇಖಕರು ಮರೆಯುವುದಿಲ್ಲ. ಲಿಂಗರಾಜನ ಕಾಮುಕ ಭಾವಕ್ಕೆ ಪ್ರೀತಿಯ ಹೆಸರಿನಲ್ಲಿ ಬಲಿಯಾದ ಹೆಣ್ಣು ಭಗವತಿ ಮೂವತ್ತನಾಲ್ಕು ವರ್ಷಗಳ ಅನಂತರ ಮಡಕೇರಿಯಲ್ಲಿ ನಿಂತು ಇವಳು ನಡೆಸುವ ಸ್ಥಾನದ ಹಿಂದೆ ಸೇರಿದೆ. ದೀಕ್ಷಿತ ಸೌಮ್ಯ ದೇವೋಪಾಸಕನಾದರೆ ಈ ಭಗವತಿ ಉಗ್ರದೇವತೆಯ ಉಪಾಸಕಳು. ಈ ಎರಡು ಉಪಾಸನೆಗಳನ್ನು ಲೇಖಕರು ವೈರುಧ್ಯ ಸಂಘರ್ಷಗಳಿಲ್ಲದಂತೆ ಒಪ್ಪಕೊಂಡು ನಿರೂಪಿಸಿದ್ದಾರೆ. ಇದು ಮಾಸ್ತಿಯವರ ಆಲೋಚನಾ ಕ್ರಮದ ನಿಲುವೂ ಆಗಿದೆ. ಮಗ ಬಸವನನ್ನು ಕಂಡು ಭಗವತಿಗೆ ದು:ಖವಿದೆ.

ಸಮಾಜದಲ್ಲಿ ಅವನಿಗಿರುವ ಸ್ಥಾನಮಾನ ಕುರಿತು ನೋವಿದೆ. ಅವನನ್ನು ರಾಜನನ್ನಾಗಿ ಮಾಡುವುದಕ್ಕೋಸ್ಕರ ಬದುಕಿದ್ದಾಳೆ. ಆದರೆ ಅವಳ ನಿರೀಕ್ಷೆ ದುರಂತ ಹೊಂದುತ್ತದೆ ಅವಳ ಜ್ಯೋತಿಷ್ಯದ ಫಲ ಸುಳ್ಳಾಗುತ್ತದೆ. ಈ ಒಂದು ಕಡೆ ಜ್ಯೋತಿಷ್ಯದ ಮಿತಿಯನ್ನು ಸೂಕ್ಷ್ಮವಾಗಿ ಧ್ವನಿಸಬಹುದು ಈ ಕಾಲ್ಪನಿಕ ಪಾತ್ರ ಕಡೆಯಲ್ಲಿ ಓದುಗರ ಕಲ್ಪನೆಯಲ್ಲಿ ಉಳಿದು ಆಲೋಚಿಸುವಂತೆ ಮಾಡಿ ಬಂದಂತೆಯೇ ಅದೃಶ್ಯವಾಗುತ್ತದೆ.

"ತನ್ನ ಮಗನಿಗೆ ರಾಜ್ಯವಾಗಬೇಕೆಂದು ಭಗವತಿ ಪ್ರಯತ್ನಿಸುತ್ತಿದ್ದುದು ದೀಕ್ಷಿತರಿಗೆ ತಿಳಿದಿದ್ದರೂ ಅವಳ ಮಗ ಬಸವ ಎನ್ನುವುದು ತಿಳಿದಿರಲಿಲ್ಲ. ಅವರಿಬ್ಬರ ಸಂಬಂಧ ಬಹಿರಂಗವಾಗುವುದು ಅರಸನ ಪದಚ್ಯುತಿಯ ನಂತರ, ಸಿಂಹಾಸನಕ್ಕೆ ಬರಬೇಕಾದವರು ಯಾರು ಎಂದು ಫ್ರೇಜರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಭಗವತಿ ಹೇಳಿದಾಗಲೇ ಆ ಮೊದಲು ಸಿಂಹಾಸನಕ್ಕೆ ಹಕ್ಕುದಾರನೆಂಬ ಮಗ ಯಾರು ಎಂದು ದೀಕ್ಷಿತ ಕೇಳಿದಾಗ, ಫ್ರೇಜರ್ ಸಕಾಲದಲ್ಲಿ ಅದನ್ನು ತಿಳಿಸುತ್ತೇನೆ ಎಂದಿರುತ್ತಾಳೆ. 533 ಪುಟಗಳ ಕಾದಂಬರಿಯಲ್ಲಿ ಭಗವತಿ ಬಸವನ ತಾಯಿ ಎಂದು ತಿಳಿಯುವುದು."[27] ಲಿಂಗರಾಜನಿಂದ ಇಷ್ಟೆಲ್ಲ ಅನ್ಯಾಯವಾದರೂ ಭಗವತಿ ಅವರ ಕುಟುಂಬಕ್ಕೆ ಯಾವುದೇ ರೀತಿ ಕೆಟ್ಟದನ್ನ ಬಯಸಲಿಲ್ಲ. ರಾಜನಿಗೆ ಆರೋಗ್ಯ ಸರಿಯಿಲ್ಲದಾಗ ಅರಮನೆಗೆ ಅಂದರೆ ನಾಕುನಾಡಿಗೆ ಹೋಗಿ ಅವನಿಗೆ ಆರೈಕೆ ಮಾಡುತ್ತಾಳೆ. ಆದರೆ ಅವಳಿಗೆ ಒಂದೇ ಆಸೆ ತನ್ನ ಮಗ ಅರಸನಾಗಬೇಕು. ನಾನೇ ಅವನ ತಾಯಿ ಎಂದು ತಿಳಿಯಬೇಕು ಎಂಬುದು ಆದರೆ ಅವಳ ಆಸೆ ಕೈಗೂಡಲಿಲ್ಲ.

ಲಿಂಗರಾಜ ಭಗವತಿಯನ್ನು ಮದುವೆಯಾಗದೆ ಯಾವ ರೀತಿ ವಂಚಿಸಿ ಮೋಸ ಮಾಡಿದ ಎಂಬುವುದು ಈ ಮೇಲಿನ ವಿಷಯದಿಂದ ತಿಳಿದುಕೊಳ್ಳಬಹುದು. ಅಷ್ಟೆ ಅಲ್ಲ ಹಿಂದೆ ನಮ್ಮ ಪ್ರಪಂಚದಲ್ಲಿಯೂ ಇಂತಹ ಶ್ರೀಮಂತ ವ್ಯಕ್ತಿಗಳು ಬಡವರ ಹೆಣ್ಣು ಮಕ್ಕಳನ್ನು ಹಾಳು ಮಾಡುತ್ತಿದ್ದರು ಎನ್ನುವುದಕ್ಕೆ ಲಿಂಗರಾಜ ಮತ್ತು ಭಗವತಿಯ ಸಂಬಂಧವೇ ಕಾರಣ ಆದರೆ ಈಗ ಎಲ್ಲಾ ತರಹದ ವ್ಯಕ್ತಿಗಳು ಅಂದರೆ ಬಡವರು, ಮಧ್ಯಮ ವರ್ಗದವರು ಕೂಡ ಈ ಕೆಲಸ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಹಿಂದೆ ರಾಜ ಎಂದರೆ ಅವರಿಗೆ ಇಷ್ಟ ಬಂದಷ್ಟು ವಿವಾಹವಾಗಬಹುದಿತ್ತು. ಅದಕ್ಕೆ ಉದಾಹರಣೆ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ದಶರಥನಿಗೆ ಮೂರು ಜನ ಹೆಂಡತಿಯರು ಇರುವುದೇ ಒಂದು ಪ್ರಮುಖ ಉದಾಹರಣೆಯಾಗಿದೆ. ಈ ಹಿಂದೆ ಈ ರೀತಿ ವಿವಾಹ ಮಾಡಿಕೊಂಡರೆ ಯಾವುದೇ ಶಿಕ್ಷೆ ವಿಧಿಸುತ್ತಿರಲಿಲ್ಲ, ಜೊತೆಗೆ ಮಹಿಳೆಯ ಜೊತೆ ಸಂಬಂಧವಿದ್ದರೆ ಜೀವನಕ್ಕೆ ಬೇಕಾದ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದರು.

ಮೊಗ್ಲಿಂಗ್‌ನ ಪಾತ್ರವು ಪ್ರಮುಖವಾಗಿದೆ. ಈ ಕಥೆಯಲ್ಲಿ ದೀಕ್ಷಿತನೊಂದಿಗೆ ಭಗವತಿಯೊಂದಿಗೆ ವಾದ ಮಾಡಿದ ಕ್ರೈಸ್ತ ಪಾದ್ರಿ (Herrmann moegling). ಚಿಕವೀರರಾಜನ ಕಾಲದಲ್ಲಿ ಕೊಡಗಿನಲ್ಲಿ ಓಡಾಡಿದ ಪ್ರಾಟೆಸ್ಟಂಟ್ ಪಂಥದ ಜರ್ಮನ್ ಮೂಲದ ಕ್ರೈಸ್ತ ಪಾದ್ರಿ. 1811ರಲ್ಲಿ ಜನಿಸಿದನು. 1829ರಲ್ಲಿ ಟ್ಯೂಬಿಂಗೆನ್

ವಿಶ್ವವಿದ್ಯಾಲಯದಿಂದ ಡಾಕ್ಟರೇಟ್; ಬಾಸೆಲ್ ಮಿಷನ್ನ ಪಾದ್ರಿಯಾಗಿ 1836ರಲ್ಲಿ ಭಾರತಕ್ಕೆ-ಮಂಗಳೂರಿಗೆ ಬಂದನು. 1836-1838ರಲ್ಲಿ ಧಾರವಾಡದಲ್ಲಿ; 1839-51ರಲ್ಲಿ ಮಂಗಳೂರಿನಲ್ಲಿ, 1852-60ರಲ್ಲಿ ಕೊಡಗಿನಲ್ಲಿ; ಈ ಎಲ್ಲ ಕಡೆಗಳಲ್ಲೂ ಮತ ಪ್ರಚಾರ ಕಾರ್ಯ ನಡೆಸಿದನು: ಆನಂದರಾವ್ ಕೌಂಡಿನ್ಯಾ, ಭಗವಂತರಾವ್ ಕೌಶಿಕ್, ಮುಕುಂದರಾವ್ ಕೌಶಿಕ್, ಮುಂತಾದವರಿಗೆ ಕ್ರೈಸ್ತ ಮತದೀಕ್ಷೆಯನ್ನು ಕೊಟ್ಟವನು. ಕೊಡಗಿನಲ್ಲಿ ಮತಪ್ರಚಾರ ಕೆಲಸದೊಂದಿಗೆ ಕೊಡವರ ಜೀವನ, ಪುರಾಣ, ಇತಿಹಾಸ ಹಬ್ಬ ಉತ್ಸವಗಳ ಬಗ್ಗೆ ಲೇಖನ ಪುಸ್ತಕ ಪ್ರಕಟಿಸಿದನು. 1858 'Coorg memoirs' ಎಂಬ ಪುಸ್ತಕ ಪ್ರಕಟಿಸಿದರು. ಶಿಕ್ಷಣದ ಬಗ್ಗೆ ಆಸಕ್ತಿ ತಳೆದು ಕೊಡಗಿನಲ್ಲಿ ಶಾಲೆಗಳನ್ನು ನಡೆಸಿದನು. ಸಿ. ಕ್ಯಾಸಮೈಜರ್ ಸಹಾಯದಿಂದ 'Bibliotheca Carnation' ಎಂಬ ಲೇಖನವನ್ನು ಜಾರಿಗೆ ತಂದನು. ಕನ್ನಡದಲ್ಲಿ 'ಮಂಗಳೂರು ಸಮಾಚಾರ' ಪತ್ರಿಕೆಯನ್ನು 1843 ರಲ್ಲಿ ಪ್ರಾರಭಿಸಿದನು.

ಆದರೆ ಇವನ ಉದ್ದೇಶ ಕೊಡಗಿನ ಜನರನ್ನು ಕ್ರೈಸ್ತ ಮತಕ್ಕೆ ಮತಾಂತರಿಸಲು ಪ್ರಯತ್ನಸಿದರು. ಇದಕ್ಕೆ ಒಂದು ಉದಾಹರಣೆ ಎಂದರೆ ಕುವೆಂಪು ಬರೆದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿಯೂ "ಕ್ರೈಸ್ತ ಪಾದ್ರಿ ದೇವೇಗೌಡನನ್ನು ಮತ್ತು ಹೊಲೆಯರ ಭೈರನನ್ನು ತಮ್ಮ ಮತಕ್ಕೆ ಮತಾಂತರಿಸಲು ಬಹಳ ಪ್ರಯತ್ನಗಳು ನಡೆದವು. ಅಷ್ಟೆ ಅಲ್ಲದೆ ಆ ಊರಿನಲ್ಲಿ ಶಾಲೆ, ಅಸ್ಪತ್ರೆ, ಚರ್ಚ್‌ಗಳನ್ನು ಸ್ಥಾಪಿಸಿದರು. ಈ ವಿಷಯ ತಿಳಿದ ಮುಕುಂದಯ್ಯ ಇದಕ್ಕೆ ಅವಕಾಶಕೊಡಲ್ಲಿಲ್ಲ."[28] ಅದೇ ರೀತಿ ಮೊಗ್ಲಿಂಗ್ ಕೊಡಗಿನಲ್ಲಿ ಮಾಡಿದ ಪ್ರಯತ್ನ ಸಂಪೂರ್ಣವಾಗಿ ಫಲಿಸದಿದ್ದರು, ರಾಜ ತನ್ನ ಮಗಳನ್ನು ಇದಕ್ಕೆ ಮತಾಂತ ಮಾಡಲು ಒಪ್ಪದದ್ದರು ಕೊನೆಯಲ್ಲಿ ಪರಿಸ್ಥಿತಿ ಹದಗೆಟ್ಟು, ತನ್ನ ಮಗಳನ್ನು ಕ್ರೈಸ್ತ ಮತಕ್ಕೆ ಮತಾಂತರವಾಗುವಂತೆ ಮಾಡಿದನು. ಜೋತೆಗೆ ಕ್ರೈಸ್ತ ಮತದವನಿಗೆ ಕೊಟ್ಟು ವಿವಾಹ ಮಾಡಿದನು.

ಕಾದಂಬರಿಯಲ್ಲಿ ಕೊಡವರ, ವೀರಶೈವರ ಕೊಡುಕೊಳ್ಳುಗಳ ಸಂಬಂಧ ಇತಿಹಾಸವನ್ನು ಗೌರವಿಸಿಯೇ ಬೆಳೆದಿದೆ. ಈ ರಾಜ ಮನೆತನದಲ್ಲಿ ಈ ಕೊಳು ಕೊಡೆ ನಿಷಿದ್ಧವೇನೂ ಅಲ್ಲ, ಅನುಲೋಮ ಪ್ರತಿಲೋಮಗಳ ಪ್ರಶ್ನೆಯಿಲ್ಲದಂತೆ ಈ ಸಂಬಂಧ ಪ್ರವಹಿಸಿಲ್ಲ. ಪ್ರತಿಲೋಮದ ಪ್ರಶ್ನೆ ಬಂದಾಗ ಕೊಡಗರ ಗಂಡನ್ನು ಲಿಂಗಕಟ್ಟಿ ವೀರಶೈವರನ್ನಾಗಿಸಿಕೊಂಡು ಹೆಣ್ಣು ಕೊಟ್ಟಿರುವುದು ನಡೆದಿದೆ. ದೇವಮ್ಮಾಜಿಯನ್ನು ಮದುವೆಯಾಗಿರುವ ಚೆನ್ನ ಬಸವನೇ ಇದಕ್ಕೆ ನಿದರ್ಶನ. ಚೆನ್ನ ಬಸವನಲ್ಲಿ ರಾಜ ದ್ರೋಹದ ವಿಷವಾಯು ಉಸಿರಾಟ ಪ್ರಾರಂಭವಾದದ್ದಕ್ಕೆ ಹಿನ್ನೆಲೆಯಿದೆ. ಮಗ ವೀರರಾಜನ ದುಷ್ಟ ನಡವಳಿಕೆಗೆ ಹೋಲಿಸಿ ಇವನನ್ನು ಮಾವ ಲಿಂಗರಾಜ ಹೊಗಳಿದ್ದೇ ಇವನ ಎಲ್ಲ ಭ್ರಮೆಗಳ ಮೂಲವಾಗುತ್ತದೆ. ಈ ಹೊಗಳಿಕೆ ಇವನ ಮುಗ್ಧಭಾವದಲ್ಲಿ ದುರಾಸೆಯಾಗಿ ಬೆಳೆಯುವುದಕ್ಕೆ ಕಾರಣವಾಗುತ್ತದೆ ಪರಿಣಾಮ ತಲೆ ತಿರುಗಿ ಬದುಕಿನುದ್ದಕ್ಕೂ ಗೋಳನ್ನು ಉಣ್ಣುವಂತಾಯಿತು.

ದೇವಮ್ಮಾಜಿ ಅರಮನೆಯಿಂದ ಬಿಡುಗಡೆಗೊಂಡು ಬಂದಾಗ ಇವನು ಬ್ರಿಟಿಷರಿಗೆ ತಾನು ಬರೆದಿದ್ದ ಪತ್ರದ ಬಗ್ಗೆ ಹೇಳುವಾಗ ಆಡುವ ಮಾತುಗಳು(ಪುಟ-204) ಇವನ ಕುಸಂಸ್ಕೃತಿಯನ್ನು ಅನಾವರಣ ಮಾಡುತ್ತವೆ. “ಉಪ್ಪಿಲ್ಲ ಗಂಜಿ ಉಂಡು ತೆಪ್ಪಗಿದ್ದ ಮನೆಮಗ ತುಪ್ಪ ಬೋನ ಉಂಡು ತಿಪ್ಪೆ ಏರಿ ಬೊಗಳಿದ ಅಳಿಯ” ಎನ್ನುವ ವೀರರಾಜನ ಮಾತು ದ್ವೇಷ ಮೂಲದಿಂದ ಬಂದದ್ದಾದರೂ ಚೆನ್ನ ಬಸವನ ನಿಜವಾದ ಮನೋಧರ್ಮವನ್ನೇ ಹೇಳುತ್ತದೆ.

ಕೃತಿಯಲ್ಲಿ ಬರುವ ಎಲ್ಲ ಪಾತ್ರಗಳು ಒಂದಲ್ಲೊಂದು ದೌರ್ಬಲ್ಯ ವಶದಲ್ಲಿ ಮನುಷ್ಯ ಮಾತ್ರದವುಗಳಾಗಿ ಅರಳಿವೆ. ವೀರರಾಜನಂಥ ಪಾತ್ರ ದೌರ್ಬಲ್ಯದ ಅಧಃ ಪಾತಾಳಕ್ಕೆ ಬಿದ್ದು ದುಷ್ಟತನವನ್ನೇ ಶಕ್ತಿಯೆಂದು ನಮ್ಮಿ ಅಂತಃಕರಣ ಕುರುಡನಾಗಿ ಕೆಡುಕಿನ ಕುಂಡಕ್ಕೆ ದೌಡಾಹಿಸುತ್ತದೆ. ಇದರಿಂದ ಸುತ್ತಲನ್ನು ರಕ್ಷಿಸುವ ಹೋರಾಟ ಶಕ್ತಿಗಳಾಗಿ ಗೌರಮ್ಮಾಜಿ, ಲಕ್ಷ್ಮೀನಾರಾಯಣಯ್ಯ, ಬೋಪಣ್ಣ, ದೀಕ್ಷಿತ ಇತ್ಯಾದಿ ಪಾತ್ರಗಳು ಮಿತಿಯ ಅಸಹಾಯಕ ಲಕ್ಷಣವನ್ನು ಹೋಲುತ್ತವೆ. ಈ ಎರಡು ಶಕ್ತಿಗಳ ನಡುವಿನ ಹೋರಾಟವೇ ಇಡೀ ಕೃತಿಯ ಜೀವ ದ್ರವ್ಯವಾಗಿ ಮಿಡಿದಿದೆ.

ಕೊಡವ ಸಾಹಿತ್ಯವು ಕೊಡಗರು ಕೊಡಗು ದೇಶಕ್ಕೆ ಬಂದು ನೆಲೆಸಿದ ಸ್ವಲ್ಪ ಕಾಲದ ತರುವಾಯ ಉಂಟಾಗಿದೆಯೆಂದು ಹೇಳಲಾಗುವುದು. ಆದಿಯಲ್ಲಿ ಅವರು ಅನಕ್ಷರಸ್ಥರೆಂದೇ ನಂಬಲಾಗಿದೆ ಜಾನಪದ ಹಾಡುಗಳು ವಿಪುಲವಾಗಿದೆ ಅವನ್ನು ಪೂರ್ವಜರು ಬಾಯಿಂದ ಬಾಯಿಗೆ ಹೇಳಿಯೇ ಬೆಳೆದು ಬಂದಿದೆ ಎಂದೇ ಗ್ರಹಿಸತಕ್ಕದ್ದು. ಈ ಹಾಡುಗಳಲ್ಲಿ ದೇವರ ಸ್ತುತಿಗಳೇ ಹೆಚ್ಚಾಗಿವೆ ಅದಲ್ಲದೆ ವಿವಾಹ ಸಮಾರಂಭಗಳಲ್ಲಿಯೂ, ಮರಣ ಕಾಲದಲ್ಲಿಯೂ,ತಿಥಿ ಕರ್ಮಾಂತರಗಳಲ್ಲಿಯೂ, ಹುತ್ತರಿ ಹಬ್ಬಗಳಲ್ಲಿಯೂ ಹಾಡುವ ಇತರ ಕೆಲವು ಹಾಡುಗಳಿವೆ. ಇವುಗಳು ಅರ್ಥಗರ್ಭಿತವಾಗಿವೆ. ಇವುಗಳನ್ನೆಲ್ಲಾ ಜರ್ಮನರೂ, ಆಂಗ್ಲೇಯರೂ ಪದ್ಯ ರೂಪದಲ್ಲಿ ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ ಅವುಗಳಲ್ಲಿ ಉಪಮಾಲಂಕಾರದ ಎಷ್ಟೋ ಸಂಗತಿಗಳು ತುಂಬಾ ಇವೆ. ಇವುಗಳನ್ನು ಓದ್ದಿದ್ದೇ ಆದರೆ ಇಂಗ್ಲೀಷ್, ಕನ್ನಡ ಮೊದಲಾದ ಭಾಷೆಗಳ ಉತ್ತಮ ಮಟ್ಟದಲ್ಲಿ ಕಾಣಬರುವ ಉಪಮಾಲಂಕಾರಗಳಿಗೆ ಇವುಗಳನ್ನು ಹೋಲಿಸಬಹುದು. ಇಪ್ಪತ್ತನೇಯ ಶತಮಾನದ ಆದಿ ಭಾಗದಲ್ಲಿ ಕೊಡವ ಸಾಹಿತ್ಯಕ್ಕೆ ಒಂದು ನವಚೇತನ ಉಂಟಾಯಿತು ಆದರಿಂದ ಕೊಡವ ಭಾಷೆಯ ಸಾಹಿತ್ಯವು ಉಚ್ಛ ಮಟ್ಟವನ್ನೇರಿತು. ನಡಿಕೇರಿಯಂಡ ಚಿಣ್ಣಪ್ಪನವರು “ಭಗವಂತಂಡ ಪಾಟ್” ಎಂಬ ಅನಕ್ಷರಸ್ಥರು ಸಹ ತಿಳಿಯಲು ಅವಕಾಶವಿದೆ.(ಜಗತ್ತಿಗೊಂದು ಕೊಡಗು ಪುಟ- 215-216).

ಪುಸ್ತಕವನ್ನು ಜಾನಪದ ಹಾಡುಗಳ ರೀತಿಯಲ್ಲಿ ಕೊಡಗು ಭಾಷೆಯಲ್ಲಿ ಬರೆದಿರುತ್ತಾರೆ. ಇದನ್ನು ಕೊಡವ ಭಾಷೆಯ ಹುಟ್ಟು ಬೆಳವಣಿಗೆ ಮೊದಲಾದ ವಿಚಾರಗಳನ್ನು ತಿಳಿಯಪಡಿಸುವಾಗ ಕೊಡವ ಭಾಷೆಯು

ಮನೆಮಾತಿಂದ ಕೊಡವ ಜನಾಂಗದ ಇತಿಹಾಸವನ್ನು ಸೂಕ್ಷ್ಮವಾಗಿ ಉಲ್ಲೇಖಿಸಿದೆ. ನಿಸರ್ಗದ ಚೆಲುವಿನ ಆಗರವಾದ ಕೊಡಗಿನಲ್ಲಿ ಅತಿ ಹಿಂದಿನ ಕಾಲದಿಂದಲೂ, ಸಾಹಿತಿಗಳೂ, ಕವಿಗಳೂ, ದಾರ್ಶನಿಕರೂ ಜನಿಸಿ ವಿವಿಧ ರೀತಿಯಲ್ಲಿ ಸಾಹಿತ್ಯೋಪಾಸನೆ ಮಾಡಿರುತ್ತಾರೆ. ಸಂಸ್ಕೃತ, ಕನ್ನಡ, ಕೊಡಗು, ಇಂಗ್ಲೀಷ್ ಈ ನಾಲ್ಕು ಭಾಷೆಗಳಲ್ಲೂ ಸಾಹಿತಿಗಳು ತಮ್ಮ ಅಪೂರ್ವವಾದ ಕೊಡುಗೆಯನ್ನು ಕೊಡಗಿಗೆ ಕೊಟ್ಟಿರುವರೆಂಬುದು ಅಭಿಮಾನದ ವಿಚಾರ.

ನಿಜಗುಣ ಶಿವಯೋಗಿಗಳು ಕನ್ನಡದಲ್ಲಿ ಬರೆದ "ವಿವೇಕ ಚಿಂತಾಮಣಿ"ಯೆಂಬ ಗ್ರಂಥವನ್ನು ಲಿಂಗರಾಜೇಂದ್ರ ಒಡೆಯನು ಸಂಸ್ಕೃತಕ್ಕೆ ಭಾಷಾಂತರಿಸಿದನೆಂದೂ, ಈ ಗ್ರಂಥವೂ ಕನ್ನಡದಲ್ಲಿರುವ ಗ್ರಂಥಕ್ಕಿಂತಲೂ ಶ್ರೇಷ್ಟವಾದುದೆಂದೂ ಹೇಳಬಹುದು. ಅತ್ಯಂತ ಪ್ರಾಚೀನ ಕಾಲದ ತಪೋಜೀವಿಗಳಾದ ಋಷಿಮುನಿಗಳ ತಪ: ಪ್ರಭಾವದ ಕಥೆಯನ್ನು ಸಂಸ್ಕೃತದ "ಕಾವೇರಿ ಮಹಾತ್ಮೆ" ಯಲ್ಲಿ ಸಾರವತ್ತಾಗಿ ನಿರೂಪಿಸಲಾಗಿದೆ. ಇದರ ಕನ್ನಡಾನುವಾದವನ್ನು ಮಾಡಿರುವ ಶ್ರೀ ಬಿ.ಪಿ.ನಾರಾಯಣಾಚಾರ್ಯರು ಸಂಸ್ಕೃತದಲ್ಲಿ "ಶ್ರೀ ಕಾವೇರಿ ಸುಪ್ರಭಾತ" ವನ್ನೂ ರಚಿಸಿ ಶ್ರೀ ಮಾತೆಯ ಸೇವೆ ಸಲ್ಲಿಸಿರುತ್ತಾರೆ. ಕೊಡಗು ಇತಿಹಾಸಿಕ ಕಾಲದಿಂದಲೂ ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳೆವಣಿಗೆಗೆ ಫಲಪ್ರದ ಕ್ಷೇತ್ರ. ಕೊಡಗಿನ ಬಹುತೇಕ ಐತಿಹಾಸಿಕ ಶಾಸನಗಳು ಕನ್ನಡ ಭಾಷೆಯಲ್ಲಿವೆ. ಕೊಡಗಿನಲ್ಲಿ ಸುಮಾರು 75 ಶಿಲಾಶಾಸನಗಳು, ತಾಮ್ರ ಶಾಸನಗಳೂ ಇದ್ದು ಇವುಗಳಲ್ಲಿ ಒಂದೆರಡು ಶಾಸನಗಳು ಸಂಸ್ಕೃತದಲ್ಲೂ, ತಮಿಳು ಭಾಷೆಯಲ್ಲೂ ಉಳಿದುವೆಲ್ಲ ಕನ್ನಡದಲ್ಲೂ ಬರೆಯಲ್ಪಟ್ಟಿವೆ. ಲಿಂಗಾಯಿತ ಅರಸರು ಕೊಡಗನ್ನು ಆಳುತ್ತಿದ್ದ ಕಾಲದಿಂದಲೇ ಕನ್ನಡವು ಆಡುವ ಭಾಷೆಯಾಗಿಯೂ, ಅಧಿಕೃತ ರಾಜ ಭಾಷೆಯಾಗಿಯೂ ಅಂಗೀಕರಿಸಲ್ಪಟ್ಟಿದ್ದಿತೆಂದು ಹಿಂದೆಯೇ ಹೇಳಲಾಗಿದೆ.

ಗುಣವರ್ಮನೆಂಬ ಕನ್ನಡ ಕವಿಯು ಕ್ರಿ.ಶ. ಸುಮಾರು 1050 ರಲ್ಲಿ ಉತ್ತರ ಕೊಡಗಿನ ಮುಳ್ಳೂರಿನಲ್ಲಿ ವಾಸವಿದ್ದನೆಂದೂ ಈತನು ಗಂಗಾರಸರ ಆಸ್ಥಾನ ಕವಿಯಾಗಿದ್ದು 'ಶೂದ್ರಕ' ಎಂಬ ಕಾವ್ಯವನ್ನು ರಚಿಸಿದನೆಂದೂ ತಿಳಿದು ಬಂದಿದೆ. 12 ನೇಯ ಶತಮಾನದಲ್ಲಿ ನಾಗವರ್ಮನೆಂಬ ಕವಿಯೂ ಕೊಡಗಿನಲ್ಲಿ ವಾಸವಿದ್ದನೆಂದೂ ಕೆಲವು ತಜ್ಞರ ಮೂಲಕ ತಿಳಿಯಬಹುದು. ಕೊಡಗಿನ ರಾಜನಾಗಿದ್ದ ದೊಡ್ಡ ವೀರ ರಾಜೇಂದ್ರನು 'ರಾಜೇಂದ್ರ ನಾಮೆ' ಎಂಬ ಪುಸ್ತಕವನ್ನು ಬರೆಯಿಸಿದನೆಂದು ಈಗಾಗಲೇ ಹೇಳಲಾಗಿದೆ. ಈ ಪುಸ್ತಕದಲ್ಲಿ ಕ್ರಿ.ಶ. 1622 ರಿಂದ 1807 ರವರೆಗೆ 175 ವರ್ಷ ಕಾಲದ ಕೊಡಗಿನ ಚರಿತ್ರೆ ಅಡಕವಾಗಿದೆ, ಮಾತ್ರವಲ್ಲ ಮೈಸೂರು ಯುದ್ಧಗಳ ವಿವರಣೆ ಹಾಗೂ ಕೊಡಗಿಗೂ ಈಸ್ಟ್ ಇಂಡಿಯಾ ಕಂಪನಿಗೂ ಇದ್ದ ಬಾಂದವ್ಯವನ್ನು ಇತರ ಐತಿಹಾಸಿಕ ಘಟನೆಗಳನ್ನೂ ವಿವರಿಸಲಾಗಿದೆ. ಎರಡನೆ ಲಿಂಗರಾಜನು ಆಡಳಿತದ ನಿಯಮಗಳನ್ನೊಳಗೊಂಡ "ಹುಕುಂ

ನಾಮೆ" ಎಂಬ ಪುಸ್ತಕವನ್ನು ಪ್ರಚರ ಪಡಿಸಿದನು. ಅಲ್ಲದೆ 'ಬಸವರಾಜ ವಿಜಯ' ಎಂಬ ಗ್ರಂಥವನ್ನು ರಚಿಸಿದನೆಂದೂ ಹೇಳಬಹುದು. ಕೊಡಗಿನ ಚರಿತ್ರೆಯನ್ನು ಈ ಗ್ರಂಥಗಳ ಆಧಾರದಿಂದಲೂ, ರೆವರೆಂಡ್ ಮೇಫಲಿಂಗ್ ಅವರ "ಕೂರ್ಗ್ ಮಮಾರ್ಸ್" ಎಂಬ ಪುಸ್ತಕವನ್ನು ಬರೆದಿದ್ದಾನೆಂದು ತಿಳಿಯುತ್ತದೆ.

19 ನೇಯ ಶತಮಾನದ ಕೊನೆಯ ಭಾಗದಿಂದ 20 ನೇಯ ಶತಮಾನದ ಮೊದಲ ದಶಕಗಳ ಸಾಹಿತ್ಯೋಪಾಸಕರಲ್ಲೆಲ್ಲಾ ಹರಿದಾಸ ಅಚ್ಚಪ್ಪ ಕವಿ ಪ್ರಮುಖರು ಇವರನ್ನು ಕೊಡಗಿನ "ಶೇಕ್ಸ್ ಪಿಯರ್", 'ಕಾಳಿದಾಸ' ಎಂಬ ಬಿರುದುಗಳಿದ್ದವು. ಬಿ.ಟಿ.ಗೌರಮ್ಮರವರು ಕೊಡಗಿನ ಬರಹಗಾರರಲ್ಲಿ ಸುಪ್ರಸಿದ್ಧರು 'ಕಂಬನಿ', 'ಚಿಗುರು' ಕಥೆಗಳನ್ನು ಜನಪ್ರಿಯಗೊಳಿಸಿದ್ದಾರೆ. ನಡಕೇರಿಯಂಡ ಚಿಣ್ಣಪ್ಪ ಕೊಡಗು ಭಾಷೆಯಲ್ಲಿ 'ಪಟ್ಟೋಲೆ ಪಳಮೆ' ಎಂಬ ಗ್ರಂಥವನ್ನು ಭಗವದ್ಗೀತೆಯ ಕೊಡಗು ಭಾಷಾತಂರವನ್ನು ಮಾಡಿ ಪ್ರಸಿದ್ಧರಾಗಿದ್ದಾರೆ.

ಕೊಡಗಿನ ಹಿರಿಯ ಸಾಹಿತಿಗಳಲ್ಲೆಲ್ಲಾ 'ಕವಿಶಿಷ್ಯ' ಎಂಬ ಕಾವ್ಯ ನಾಮಂಕಿತದಿಂದ ಸಾಹಿತ್ಯ ದೇವಿಯನ್ನು ಪೂಜಿಸುವ ಪಂಜೆಮಂಗೇಶರಾಯರು ಉನ್ನತ ಸ್ಥಾನವನ್ನು ಪಡೆದಿದ್ದಾರೆ. ಇವರು 'ದುರ್ಗಾವತಿ, ಶೈಲಿನಿ' ಮುಂತಾದ ಐತಿಹಾಸಿಕ ಕಾದಂಬರಿಗಳನ್ನು ಬರೆದಿದ್ದಾರೆ. ಸಾಹಿತ್ಯ, ಭಾಷೆ, ವ್ಯವಹಾರಿಕ ಜೀವನ ಹಾಗೂ ರಾಜಕೀಯಗಳಿಗೆ ನಿಕಟ ಸಂಬಂಧಗಳನ್ನು ಏರ್ಪಡಿಸಿ ಸಾಮರಸ್ಯಗೊಳಿಸುವ ಶಕ್ತಿ ಪತ್ರಿಕೋದ್ಯಮಯಲ್ಲಿ ಅಡಕವಾಗಿದೆ. ಹೀಗೆ ಹಿಂದೆ ಹಲವಾರು ಕವಿಗಳು ಕೊಡಗಿನಲ್ಲಿ ನೆಲೆಸಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಭಾಷೆಯ ಬಳಕೆಯಲ್ಲಿ ಅಮುಖ್ಯ ಎಂದು ತೋರಿಸಬಹುದ್ದಾದ ಅಂಶಗಳನ್ನು ಶ್ರೀನಿವಾಸರು ಹೇಗೆ ಬಳಸುತ್ತಾರೆ ಎಂಬುವುದಕ್ಕೆ ಒಂದು ಉದಾಹರಣೆ. ತಂದೆಯಿಂದ ಚಿಕ್ಕಂದಿನಲ್ಲೇ ದೂರಳಾದ ಶಾಂತವ್ವನಿಗೆ ನೇಮಯ್ಯನೇ ತಂದೆ ತಾಯಿ ಎಲ್ಲ, ನೇಮಯ್ಯನಿಗೆ ಅವಳೇ ಪ್ರಾಣ ಆದರೆ ರಾಣಿಗೆ ಅವರಿಬ್ಬರ ವಿಷಯದಲ್ಲಿಯೂ ವಿರೋಧ. ಹೀಗಾಗಿ ನೇಮಯ್ಯನೇ ಮನೆಗೆ ಬಂದ ಮಗಳಿಗೆ ಈ ಒಂದು ದಿನಾನೆ ಶಾಂತವ್ವ ನಿನ್ನ ಬರಮಾಡಿಕೊಳ್ಳಬಹುದು. ಇನ್ನೂ ಮೇಲೆ ನೀನು ಈ ಮನೆಗೆ ಬರದೆ ಇರೋದೆ ಎಲ್ಲರಿಗೂ ಸಮ ಎಂದಿದ್ದಾನೆ. ಮಗಳು ಹೊರಟಿದ್ದಾಳೆ ತಂದೆಗೆ ನಮಸ್ಕರಿಸಿ ನಾ ಬರುತ್ತೇನೆ ಅಣ್ಣಯ್ಯ ಎನ್ನುತ್ತಾಳೆ. ಸಂಪ್ರದಾಯದಂತೆ ಹೋಗುತ್ತೇನೆ ಎನ್ನುವುದು ಅಶುಭ ಆದುದರಿಂದ ಹೊರಡುವಾಗಲೂ ಬರುತ್ತೇನೆ ಎನ್ನುವುದು ವಾಡಿಕೆ. ಸಾಮಾನ್ಯವಾಗಿ ಈ ಮಾತಿಗೆ ಇಷ್ಟೇ ಅರ್ಥ ಆದರೆ ಈ ಸನ್ನಿವೇಶದಲ್ಲಿ ಬರುತ್ತೇನೆ ಎನ್ನುವ ಮಗಳಿಗೆ ತಾನು ಮತ್ತೆ ಬರುವಂತಿಲ್ಲ ಎಂದು ಗೊತ್ತು. ಆ ಮಾತನ್ನು ಕೇಳುವ ತಂದೆಗೆ ತಾನೇ ಅವಳಿಗೆ ಬರದಿರುವುದು ಒಳಿತು ಎಂದಿದ್ದೇನೆ ಅವಳು ಬರುವುದಿಲ್ಲ ಎಂದು ಗೊತ್ತು. ಹಿಂದೆ ಒಂದು ಸಾಮಾನ್ಯ ಶಬ್ದಕ್ಕೆ ವಿಶೇಷ ಅರ್ಥ ಈ ಸನ್ನಿವೇಶದಲ್ಲಿ ಬರುತ್ತದೆ.

ಹೀಗೆ ಶ್ರೀನಿವಾಸರು ಭವ್ಯ, ಸ್ಮರಣೀಯ ಎನ್ನಿಸುವ ದೃಶ್ಯಗಳನ್ನು ಬಳಸದೆಯೇ ಭಾಷೆಯ ಬಳಕೆಯಿಂದ ಒಂದು ವಿಶಿಷ್ಟ ಜಗತ್ತನ್ನು ಸೃಷ್ಟಿಸುತ್ತಾರೆ. ಕಾದಂಬರಿಯ ಒಟ್ಟಾರೆ ಅವಲೋಕನ ಎಂದರೆ ಕಾದಂಬರಿಯ ಒಪ್ಪಂದದ ಪರಿಶೀಲನೆಯೊಡನೆ ಒಂದೊಂದು ಕಥಾ ಭಾಗದ ವಿವರಗಳೂ ದಟ್ಟಣೆಯಿಂದ ಪರಿಣಾಮದ ತೀವ್ರತೆಯನ್ನು ಹೆಚ್ಚಿಸುವುದರ ಪರಿಶೀಲನೆಯೂ ಅಗತ್ಯ. ಒಂದೊಂದು ಸಂಗತಿಗೂ ಹಿಂದಿನಿಂದ ಸಿದ್ಧತೆ ರಾಜ ಬಸವನನ್ನು ಕೋವಿಯಿಂದ ಸುಡುವ ಪ್ರಸಂಗವನ್ನು ಉದಾಹರಣೆಗೆ ತೆಗೆದು ಕೊಂಡರೆ ಮಹಾಸ್ವಾಮಿ, ಪಿಸ್ತೂಲಿನ ಗೊಡವೆಗೆ ಹೋಗಬಾರದು ಎಂದು ಎಚ್ಚರಿಸುವ ಆಂಗ್ಲ ದಳಪತಿಯ ಮಾತು ಹಿಂದೆ ಬಂದಿದ್ದುದೆ ಅಲ್ಲದೆ ಕಂಪನಿಯವರಿಗೆ ಔತಣ ಕೊಟ್ಟ ಕಾಲದಲ್ಲಿ ತನ್ನ ಕೋವಿಯ ಕಲೆಯನ್ನು ರಾಜ ಪ್ರದರ್ಶಿಸಿದುದೂ ನೆನಪಿಗೆ ಬರುತ್ತದೆ. ಭಗವತಿ ಮತ್ತು ದೊಡ್ಡಮ್ಮ ಎನ್ನುವ ಅವಳ ಅಕ್ಕ ನಡೆಸುವ ಗುಪ್ತ ಸಂಭಾಷಣೆ ಅವನ ಕಿವಿಗೆ ಬಿದ್ದಿರುವುದು ಸುರಂಗದ ಮೂಲಕ ತಪ್ಪಿಸಿಕೊಳ್ಳ ಹೇಳಿದವನು ಬಸವ ಎನ್ನುವುದು ಅವನ ಅವಿಚಾರಿ ಸ್ವಭಾವ, ಅವನಿರುವ ವಿಷಮ ಪರಿಸ್ಥಿತಿ ಇವೂ ಪ್ರಭಾವ ಬೀರುತ್ತವೆ. ಬಸವನನ್ನು ಕೊಂದ ಮೇಲೂ ಕೂಡಲೆ ಅವನಿಗೆ ಪಶ್ಚಾತ್ತಾಪವಾಗುವುದಿಲ್ಲ.

ಬಸವ ತಾನು ನಿಷ್ಠೆಯಿಂದ ಸೇವಿಸಿದ ಒಡೆಯನ ಕೈಯಿಂದಲೇ ತಾನು ಸಾಯುತ್ತಿರುವುದನ್ನು ಅರಿತಾಗ ತೋರುವ ವಿಸ್ಮಯದ ಚಿತ್ರ ಕಾದಂಬರಿಯ ಅತ್ಯಂತ ಮಾರ್ಮಿಕ ಸನ್ನಿವೇಶಗಳಲ್ಲೊಂದು ಕಾದಂಬರಿಯ ಕಲಾವಂತಿಕೆಯ ಇನ್ನೊಂದು ನಿದರ್ಶನ ರಾಜನಿಂದಾಗುವ ಅಮಾನುಷ ಶಿಶುಹತ್ಯೆಯ ನಿರೂಪಣೆ ಕಾದಂಬರಿಯ ಆರಂಭದಿಂದಲೂ ಸೂಚಿತವಾಗುವ ಈ ಘೋರ ಪ್ರಸಂಗ ಇಷ್ಟು ಪರಿಣಾಮಕಾರಿಯಾಗಿ ಚಿತ್ರಿತವಾಗಿರುವುದಕ್ಕೆ ಅದಕ್ಕೆ ಕೂಡಲೇ ಹಿಂದೆ ನಡೆಯುವ ಸಂಗತಿಗಳು, ಮಗುವನ್ನು ತಂದೆ–ತಾಯಿಯರಿಗೆ ಒಪ್ಪಿಸೆಂದು ಹಿರಿಯರು ಹೇಳುವ ಆದರೆ ಅವನನ್ನು ಇನ್ನಷ್ಟು ಕೆರಳಿಸುವ ಹಿತೋಕ್ತಿಗಳು, ಮುದುಕಿ ಸಾವಿತ್ರಮ್ಮನ ಮೇಲೂ ಕಡೆಗೆ ತಾನು ಪ್ರೀತಿಸುವ ಒಂದೇ ವ್ಯಕ್ತಿ ತನ್ನ ಮಗಳ ಮೇಲೂ ಕ್ರುದ್ಧನಾಗಿ ಅವನು ಹೊಡೆಯಲು ಹೋಗುವವರೆಗೂ ಉಕ್ಕುವ ಅವನ ರೋಷ ಮಗುವು ಮುಂದೆ ಕಿರೀಟ ಧಾರಣೆ ಮಾಡುವಂತೆ ಅವನಿಗಾಗುವ ಭ್ರಾಂತಿ ಇವುಗಳೆಲ್ಲ ಕಾರಣವಾಗುತ್ತವೆ. ಹಾಗೇಯೇ ಈ ಕೃತ್ಯ ಮುಗಿದ ಮೇಲೆ ಅವನ ಚೈತನ್ಯವೇ ಉಡುಗಿದಂತಾಗಿ ಅವನು ಬುದ್ಧಿಭ್ರಮಣೆಗೆ ಒಳಗಾಗುತ್ತಾನೆ ಈ ಮುಖ್ಯ ದೃಶ್ಯದ ಶಿಲ್ಪ ಬೆರಗುಪಡಿಸುವಂತಹದು. ಮನುಷ್ಯ ಪ್ರಯತ್ನ ಮುಖ್ಯವಾದರೂ ಕಡೆಯಲ್ಲಿ ಎಲ್ಲವನ್ನೂ ಮೀರಿದ ಶಕ್ತಿಯೊಂದರ ಕೈವಾಡ ಈ ಜಗತ್ತಿನಲ್ಲಿ ಬದುಕನ್ನು ನಡೆಸುತ್ತದೆ ಎಂಬ ದರ್ಶನ ಈ ಕಾದಂಬರಿಯ ಪ್ರಬಂಧ ಧ್ವನಿಯಿಂದ ಹೊಮ್ಮುತ್ತದೆ. ಇದನ್ನು ಗ್ರಹಚಾರವೆನ್ನಬಹುದು, ವಿಧಿಲಿಖಿತವೆನ್ನಲೂಬಹುದು, ರಾಜನಿಗೆ ಕಂಸಯೋಗವೆಂದು ದೀಕ್ಷಿತರು ಎಷ್ಟು ಎಚ್ಚರಿಸಿದರೂ ನಡೆಯಬೇಕಾದುದು ನಡೆದೇ ನಡೆಯುತ್ತದೆ. ದುರಂತ ನಾಟಕಗಳಲ್ಲಿ ವಿಶೇಷವಾಗಿ ಕಂಡು Tragic Irony

ದುರಂತ ವ್ಯಂಗ್ಯ ಕಾದಂಬರಿಯ ಮುಕ್ಕಾಲು ಪಾಲು ಎಲ್ಲ ಸಂಗತಿಗಳಲ್ಲಿಯೂ ಧ್ವನಿತವಾಗುತ್ತದೆ. ತನ್ನ ಬೆಂಬಲಕ್ಕೆ ಕಂಪನಿಯವರನ್ನು ಇಟ್ಟುಕೊಳ್ಳಬೇಕೆಂದು ಚಿಕವೀರರಾಜೇಂದ್ರ ಅವರ ಅಧಿಕಾರಿಗಳಿಗೆ ಕೊಡುವ ಔತಣ ಬೇರೆಯೇ ಫಲವನ್ನು ನೀಡುತ್ತದೆ. ಗೌರಮ್ಮಾಜಿಯ ಪತಿನಿಷ್ಠೆ, ರಾಜಕುಮಾರರಿಗೆ ತಂದೆಯಲ್ಲಿರುವ ಪ್ರೇಮ ಇವೇ ಅವರು ಸಿಂಹಾಸನವನ್ನೇರದಂತೆ ತಡೆಯುತ್ತದೆ. ಬೋಪಣ್ಣನಾದರೂ ಗಾದಿ ಏರಿ ಇದು ತಪ್ಪಲಿ ಎಂದು ಯತ್ನಿಸುವ ಲಕ್ಷ್ಮೀನಾರಾಯಣಯ್ಯ ಕಡೆಗೆ "ನೀವು ತಿಳಿದಿದ್ದೀರಿ ಕೊಡಗು ಅರಸರದು ಅಂತ ನಾನು ಹೇಳೋದು ಕೊಡಗು ನಮ್ಮದು ಅಂತ" ಎಂದು ಹಿಂದೆ ತನಗೆ ಹೇಳಿದ್ದ ಬೋಪಣ್ಣನಿಗೆ "ಕೊಡಗು ನಿಮ್ಮದು ಬೋಪಣ್ಣನವರೇ, ನೀವು ಅದನ್ನು ಹೆರವರಿಗೆ ಕೊಡಬಹುದು" ಎಂದು ಹೇಳುವಂತಾಗುತ್ತದೆ. ಈ ಮಾತುಗಳಲ್ಲಿಯೂ ಈ Irony ವ್ಯಂಗ್ಯವನ್ನು ಕಾಣುತ್ತೇವೆ. ಚೋಮನನ್ನು ಶೂಲಕ್ಕೇರಿಸಿದ ಸಂಗತಿ ಕಿವಿಗೆ ಬಿದ್ದಾಗ ರಾಣಿ "ಒಂದು ಪ್ರಾಣ ಹೋಯಿತು ಇನ್ನೂ ಯಾವುದೂ ಹೋಗದಂತೆ ಮನೆಯ ದೇವರು ಕಾಯಬೇಕು ಎಂದು ಪ್ರಾರ್ಥಿಸಿ ದೇವಮ್ಮಾಜಿಯ ಎಳೆಯ ಕಂದನ ಕಡೆಗೆ ತಿರುಗುತ್ತಾಳೆ."[28] (ಪುಟ-596-97 ಚಿಕವೀರರಾಜೇಂದ್ರ ಕಾದಂಬರಿಯ ಶಿಲ್ಪ ಕೆ. ನರಸಿಂಹಮೂರ್ತಿ)

ಕಡೆಯದಾಗಿ ಒಂದು ಮಾತು ಕಾದಂಬರಿಯ 'ಕಥಾಶೇಷ'ವೂ ಮುಗಿದ ಮೇಲೆ 'ಸಮಾರೋಪಕ' ಎಂಬ ಭಾಗ ಬಂದಿರುವುದರ ಔಚಿತ್ಯವನ್ನು ಕೆಲವರು ಪ್ರಶ್ನಿಸಬಹುದು. ಆದರೆ 'ಸಮಾರೋಪಕ' ಕಥಾಭಾಗವೂ ರಾಜಕುಮಾರಿಯೂ ಕೊನೆಯವರೆಗೂ ಉತ್ತಯ್ಯ ನನ್ನ ಪ್ರೀತಿಸುತ್ತಿದ್ದಳೆಂಬುದನ್ನೂ ಕ್ರಿಶ್ಚಿಯನ್ನಳಾದ ಮೇಲೂ ತನ್ನ ಮನೆತನದ ರಾಜ್ಯದ ದೈವವಾದ ಓಂಕಾರೇಶ್ವರನಲ್ಲಿ ಭಕ್ತಿಯಿಟ್ಟು ಒಂದು ವಜ್ರವನ್ನ ಅರ್ಪಿಸಬೇಕೆಂದಿದ್ದಳೆಂದೂ ಅವಳ ಬಗ್ಗೆ ತಿಳಿಸುತ್ತದೆ. ರಾಜಕುಮಾರಿಯ ಮಗಳೂ ಎಲಿಜಬೆತ್ ಅಂತೆಯೇ ಸಾತು ಎಂದು ಹೆಸರಿಟ್ಟುಕೊಂಡು ಕೊಡಗಿನ ಸಮೀಪದವರು ಯಾರು ಬಂದರು ಆತ್ಮೀಯತೆಯಿಂದ ಮನೆಗೆ ಅವರನ್ನು ಆಹ್ವಾನಿಸುವಳೆಂದು ಅರಿಯುವುದರ ಜೊತೆಗೆ ಹಾಲೇರಿ ರಾಜಮನೆತನದ ಕೊನೆಯ ಕುಡಿಯಾದ ಅವಳ ಮಗನೂ ಅಳಿದು ಕಾದಂಬರಿಯ ದುರಂತ ಪೂರ್ಣವಾದುದನ್ನೂ ನಾವು ಅರಿಯುತ್ತೇವೆ. ಅಲ್ಲದೆ ಕೊಡಗು ಒಂದು ಭಾಗವಾದ ವಿಶಾಲ ಭಾರತದ ಸ್ವಾತಂತ್ರ್ಯದ ಹೋರಾಟದ ವಿವರವನ್ನು ಕೊಡುವುದರಿಂದ ಇತಿಹಾಸ ಮುಂದುವರಿಯುತ್ತಲೇ ಇರುವುದನ್ನು ಈ ಭಾಗ ಧ್ವನಿಸುತ್ತದೆ. ಅಲ್ಲದೆ ಕಾದಂಬರಿಕಾರರ ಮಿತ್ರರು ರಾಜಕುಮಾರಿಯ ಮಗಳನ್ನು ಮುಲಾತ: ಕಂಡು ಅವಳೊಡನೆ ಮಾತಾಡಿ ಅವರಿಗೆ ವಿಷಯ ತಿಳಿಸಿದರೆನ್ನುವುದು ಐತಿಹಾಸಿಕ ಸಂಗತಿಗಳ ವಾಸ್ತವಿಕತೆಯನ್ನು, ವಿಶ್ವಾಸನೀಯತೆಯನ್ನೂ ಒತ್ತಿ ಹೇಳುವುದರೊಂದಿಗೆ ಐತಿಹಾಸಿಕ ಕಾಲವನ್ನು ಕಾದಂಬರಿಕಾರರ ಕಾಲದವರೆಗೆ ಸೆಳೆದು ತಂದು ಐತಿಹಾಸಿಕ ಮತ್ತು ವರ್ತಮಾನಗಳನ್ನು

ಬೆಸೆಯುತ್ತದೆ. ಕಾದಂಬರಿ ಅದರ ರಚನೆಯ ಪ್ರೇರಣೆಯ ಸಂಗತಿಯಲ್ಲಿಯೇ ಕೊನೆಗೊಂಡು ಅವರ ಕಲೆಯ ವರ್ತುಲ ಪೂರ್ಣವಾಗುತ್ತದೆ. ರಾಜಕೀಯ ಚದುರಂಗದಾಟಕ್ಕೆ ಪಣವಾದ ಕೊಡಗಿನ ಪ್ರಾಕೃತಿಕ ಸೌಂದರ್ಯ, ಸಂಪತ್ತುಗಳ ವರ್ಣನೆಯ 'ಪ್ರಾಸ್ತಾವಿಕ'ದಿಂದ ಆರಂಭಿಸಿ 'ಸಮಾರೋಪಕ'ದಲ್ಲಿ ಮುಕ್ತಾಯವಾಗುವ ಕಾದಂಬರಿ ಸಾವಯವ ಏಕತೆಯಿಂದ ಕೂಡಿದ ಸ್ವಸಂಪೂರ್ಣ ಕಲಾಕೃತಿಯಾಗಿದೆ.

ಕೊನೆ ಟಿಪ್ಪಣಿಗಳು :

1. ಚಿಕವೀರ ರಾಜೇಂದ್ರ ಒಂದು ವಿಮರ್ಶಾತ್ಮಕ ಟಿಪ್ಪಣಿ	ಪುಟ 600–601
2. ಯುಗಧರ್ಮ ಮತ್ತು ಸ್ಯಾಹಿತ್ಯ ದರ್ಶನ	ಪುಟ 219–225
3. ಯುಗಧರ್ಮ ಮತ್ತು ಸ್ಯಾಹಿತ್ಯ ದರ್ಶನ	ಪುಟ 227–228
4. ಜಗತ್ತೀಗೊಂದು ಕೊಡಗು	ಪುಟ 230–235
5. ಅದೇ	ಪುಟ 240–242
6. ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ	ಪುಟ 62–67
7. ಚಿಕವೀರ ರಾಜೇಂದ್ರ ಪಾತ್ರ ಚಿತ್ರಣ	ಪುಟ 618–619
8. ಚಿಕವೀರರಾಜೇಂದ್ರ ಕಾದಂರಿಯಲ್ಲಿ ಕಾಥಗರ್ಭ	ಪುಟ 200–242
9. ಕೊಡಗಿನ ಅರಸರು	ಪುಟ 233
10. ಚಿಕವೀರರಾಜೇಂದ್ರ ಕಾದಂರಿಯಲ್ಲಿ ಕಥಾಪೂರಣ	ಪುಟ 279–284
11. ಅದೇ	ಪುಟ 300
12. ಅದೇ	ಪುಟ 306
13. ಚಿಕವೀರರಾಜೇಂದ್ರ ಕಾದಂರಿಯ ಶಿಲ್ಪ	ಪುಟ 590–91
14. ಮ್ಯಾಕ್‌ಬೆತ್ ನಾಟಕ	ಪುಟ 71–72
15. ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ	ಪುಟ 57–60
16. ಕುವೆಂಪು ಕಾದಂಬರಿ ಮಲೆಗಳಲ್ಲಿ ಮದುಮಗಳು	ಪುಟ 538

ಉಪಸಂಹಾರ :- ಕನ್ನಡ ಸಾಹಿತ್ಯದಲ್ಲಿ ಪ್ರಾದೇಶಿಕ ಸತ್ವಗಳನ್ನೊಳಗೊಂಡ ಕಾದಂಬರಿ ಇದಾಗಿದೆ. ಅವುಗಳಲ್ಲಿ ನೂರಾರು ಪಾತ್ರಗಳು ಪ್ರಮುಖವಾಗಿವೆ ಈ ಕಾದಂಬರಿ ಆಕಾರದಲ್ಲಿ ದೊಡ್ಡದಾಗಿರುವಂತೆಯೇ ಸತ್ವದಲ್ಲಿಯೂ ದೊಡ್ಡದಾಗಿದೆ. ಈ ಹಲವಾರು ಪಾತ್ರಗಳಲ್ಲಿ 'ಚಿಕವೀರ ರಾಜೇಂದ್ರ' ಕಾದಂಬರಿಯನ್ನು ಒಂದು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐತಿಹಾಸಿಕ ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಂಡು ಬರೆಯುವವರು ಪ್ರಮಾಣೀಯ ವಿಷಯದಂತೆ ಕಲ್ಪನೆಯನ್ನು ವಿಶ್ಲೇಷಣೆಗೆ ಅವಲಂಭಿಸಿರುತ್ತಾರೆ. ಇದೂ ಅನಿವಾರ್ಯವೂ, ಅಗತ್ಯವೂ ಆಗಿದೆ ಆ ಮಾತು ಮಾಸ್ತಿ ಮತ್ತು ಇತರ ಕವಿಗಳ ದೃಷ್ಟಿಯಲ್ಲಿಯೂ ನಿಜವೆನಿಸುತ್ತದೆ. ಕಲಾ ವಿಧಾನ ಮತ್ತು ಕಲೆಯ ಸ್ವಾತಂತ್ರ್ಯ ಕಾಪಾಡಿಕೊಳ್ಳಬೇಕಾದುದು ಬಹಳ ಮಹತ್ವದ ಸಂಗತಿ. ಡಾ ಜಿ. ಎಚ್.ನಾಯಕರು ಹೇಳುವಂತೆ ಇತಿಹಾಸದ ಎಲುಬಿಗೆ ಕಲ್ಪನೆಯ ರಕ್ತದಾನವಾಗಬೇಕಾದದ್ದು ಅಗತ್ಯ. ವಸ್ತುನಿಷ್ಟ ಬರವಣಿಗೆಗೆ ಅದು ಸೀಮಿತವಾದರೆ ವರದಿಯಾಗುತ್ತದೆ. ಇತಿಹಾಸ ವಸ್ತುವಾಗಲೀ, ರಾಜಕೀಯ ವಸ್ತುವಾಗಲೀ, ಸಾಮಾಜಿಕ ವಸ್ತುವಾಗಲೀ ಕಲಾವಿದನ ಬರವಣಿಗೆಗೆ ಒಳಪಟ್ಟು ಸಹಜವಾಗಿಯೇ ಕಲಾಲಕ್ಷಣದ ಚೌಕಟ್ಟಿಗೆ ಒಳಗಾಗುತ್ತದೆ. ಈ ಕಲಾತತ್ವ ಸಾಧಿಸದೆ ಯಾವ ಕೃತಿ ರಚನೆಯೂ ಇರಲಾರದು. ಹಾಗೆಯೇ ಪ್ರಸ್ತುತ ಕವಿ ತಮ್ಮ ಕಾದಂಬರಿಗಳನ್ನು ಬರೆಯುವಲ್ಲಿ ವಸ್ತುನಿಷ್ಟ ತತ್ವದೊಂದಿಗೆ, ವ್ಯಕ್ತಿನಿಷ್ಟ ತತ್ವಗಳಿಗೂ ಇಲ್ಲಿ ಸ್ಥಾನ ಕೊಟ್ಟಿದ್ದಾರೆ. ಈ ವಿಮರ್ಶಾತ್ಮಕ ಅಧ್ಯಯನದಿಂದ ಪಡೆದುಕೊಂಡ ಫಲಿತವನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

ಈ ಪ್ರಬಂಧದಲ್ಲಿ ಎಲ್ಲಾ ಭಾಗಗಳು ನಮಗೆ ಮುಖ್ಯವೆನಿಸಿದರೂ 'ಪ್ರಾಸ್ತವಿಕದಲ್ಲಿ ಕೊಡಗಿನ ಭೌಗೋಳಿಕತೆ ಏನು ಎಂಬುದನ್ನು, ಕೊಡಗು ಒಂದು ಪ್ರದೇಶದ ಕಾಲಘಟ್ಟದ ಬಗ್ಗೆ ಸಂಪೂರ್ಣವಾಗಿ ವಿವರಿಸಿದ್ದೇನೆ. ಭಾರತ ಹೇಗೆ ಪ್ರಾಕೃತಿಕ ಅಂಶಗಳಿಂದ ಕೂಡಿದೆ, ಅದರ ವಿಸ್ತೀರ್ಣ, ಕ್ಷೇತ್ರದ ಬಗ್ಗೆ ತಿಳಿಸುವ ಹಾಗೇ, ಕರ್ನಾಟಕದ ಪ್ರಾಕೃತಿಕ ಅಂಶಗಳು, ಅದರ ವಿಸ್ತೀರ್ಣ, ಕ್ಷೇತ್ರದ ಬಗ್ಗೆ ತಿಳಿಸುವ ಹಾಗೇ ಕರ್ನಾಟಕದಲ್ಲಿ ಮೈಸೂರು- ಕೊಡಗು ಹೇಗೆ ವಿಶಾಲ ರಾಜ್ಯ ಎಂಬುದನ್ನು ತಿಳಿಸಲಾಗಿದೆ. 'ಕಥಾಮುಖ' ಮತ್ತು ಕಥಾಗರ್ಭದಲ್ಲಿ ಚಿಕವೀರರಾಜನ ವ್ಯಕ್ತಿತ್ವ ಮತ್ತು ಆಡಳಿತ, ದುರಾಡಳಿತ, ಅಂದರೆ ಅಲ್ಲಿಯ ಜನರನ್ನು ಹೇಗೆ ಹಿಂಸಿಸುತ್ತಿದ್ದ, ಅಷ್ಟೆ ಅಲ್ಲದೆ ತನ್ನ ತಂಗಿಗೆ ಕೊಟ್ಟ ಹಿಂಸೆ ಮುಂತಾದ ವಿಷಯಗಳ ಬಗ್ಗೆ ವಿವರಿಸಲಾಗಿದೆ. 'ಕಥಾಮೂರಣ'ದಲ್ಲಿ ತಂಗಿ ಗಂಡು ಮಗುವಿಗೆ ಜನ್ಮವಿತ್ತ ವಿಷಯ ತಿಳಿದು ಆ ಮಗುವನ್ನು ಮತ್ತು ತಂದೆ-ತಾಯಿಯನ್ನು ಬಂಧಿಸಬೇಕೆಂದು ಪ್ರಯತ್ನ ಮಾಡಿ, ಕೊನೆಗೆ ತಂಗಿ-ತಂಗಿಯ ಗಂಡ ತಪ್ಪಿಸಿಕೊಂಡು ಹೋಗುವಾಗ ಮಗು ಕೈತಪ್ಪಿ ಜಾರಿ ಬಿದ್ದು,ಅದುರಾಜನಿಗೆ ಸಿಕ್ಕಿ ಅದನ್ನು ಅರಮನೆಗೆ ತಂದು ಸ್ವಲ್ಪ ದಿವಸದ

ನಂತರ ಮಗುವನ್ನು ಕೊಂದುಹಾಕುತ್ತಾನೆ. ರಾಜ ಎಷ್ಟು ಕ್ರೂರ ಎಂಬುವುದಕ್ಕಿಂತ ಮನುಷ್ಯರು ಎಷ್ಟು ಕ್ರೂರರು ಎಂಬುದನ್ನು ಈ ಕಾದಂರಿಯ ಮೂಲಕ ತಿಳಿದುಕೊಳ್ಳಬಹುದು.

ಇನ್ನೂ 'ಕಥಾಶೇಷ'ದಲ್ಲಿ ರಾಜ ತನ್ನ ಮಗಳನ್ನು ಕ್ರೈಸ್ತಮತಕ್ಕೆ ಮತಾಂತರಿಸಿ, ಕ್ರೈಸ್ತಮತಕ್ಕೆ ಕೊಟ್ಟು ವಿವಾಹ ಮಾಡುತ್ತಾನೆ. ವಿಮರ್ಶಾತ್ಮಕ ದೃಷ್ಟಿಯಿಂದ ಪ್ರಬಂಧದ ಭಾಗದಲ್ಲಿ 'ಚಿಕವೀರ ರಾಜೇಂದ್ರ'ನ ಬಗೆಗೆ ಕವಿಯ ನಡುವಿನ ಪಾತ್ರ ಚಿತ್ರಣದ ಒಂದು ಸಂಶೋಧನಾ ಅಧ್ಯಯನದ ಭಾಗವಾಗಿದೆ. ಸಂರಚನೆಯ ದೃಷ್ಟಿಯಿಂದಲೂ ಕಾದಂಬರಿ ಅತ್ಯಂತ ಗಮನಾರ್ಹವಾಗಿದೆ. ಕಥೆ ಒಂದು ಪ್ರಸ್ತುತ ನಿರ್ದಿಷ್ಟ ಸಂದರ್ಭದೊಂದಿಗೆ ಪ್ರಾರಂಭವಾಗುತ್ತದೆ ಅನಂತರ ಕ್ರಮೇಣ ಗತಕಾಲಕ್ಕೆ ಸರಿಯುತ್ತದೆ. ಆ ಬಳಿಕ ಪುನಃ ಪ್ರಸ್ತುತಕ್ಕೆ ಬರುತ್ತದೆ ಮುಂದೆ ದುರಂತದ ಅನಿವಾರ್ಯತೆಯತ್ತ ಭವಿಷ್ಯದಲ್ಲಿ ಮುನ್ನುಗ್ಗಿ ಹೋಗುತ್ತದೆ.

ಕಾದಂಬರಿಯ ನಾಟ್ಯಪೂರ್ಣ ಕ್ರಿಯೆಯು ಸರ್ವ ಸಾಮಾನ್ಯವಾಗಿ ಕೊನೆಯ ದುರಂತ ಸಂಭವಿಸುವವರೆಗೆ, ಕೊಡಗಿನ ಸಂಸ್ಥಾನದಲ್ಲೇ ಅರಮನೆಯ ಒಳ ಹೊರಗೆ ನಡೆಯುತ್ತದೆ. ತರುವಾಯ ಅಂದರೆ ಕೊಡಗಿನ ಸಂಸ್ಥಾನದಲ್ಲೇ ಅರಮನೆಯ ಒಳಹೊರಗೆ ನಡೆಯುತ್ತದೆ. ತರುವಾಯ ಅಂದರೆ ಕೊಡಗಿನ ದುರಂತದ ಅನಂತರ ಕಥೆಯ ಕ್ರಿಯೆ ಕೊಡಗಿನಿಂದ ಹೊರಹರಿದು ಭಾರತೀಯ ಪಾತಳಿಯನ್ನು ಕ್ರಮಿಸಿ ಕೊನೆಗೆ ಇನ್ನೊಂದು ಗೋಳದಲ್ಲಿರುವ ಇಂಗ್ಲೇಂಡಿಗೂ ವ್ಯಾಪಿಸುತ್ತದೆ. ನಿಜವಾಗಿಯೂ ಈ ಕೃತಿ ಅತ್ಯಂತ ಮಹತ್ವದ ಐತಿಹಾಸಿಕ ಯುಗವನ್ನು ಯಶಸ್ವಿಯಾಗಿ ರೂಪಿಸುವ ಗದ್ಯ ರೂಪದ ಮಹಾಕಾವ್ಯವಾಗಿದೆ. ಈ ಕಾರಣದಿಂದಾಗಿ ಭಾರತೀಯ ಸಾಹಿತ್ಯಕ್ಕೆ ಇದೊಂದು ಅತ್ಯಂತ ಮೌಲಿಕವಾದ ಕಾಣಿಕೆಯಾಗಿದೆ. ಒಟ್ಟಾರೆಯಲ್ಲಿ ಈ ಅಧ್ಯಯನದ ಫಲಶ್ರುತಿಯ ಬಗೆ ವಿಸ್ತೃತ ವಿವರಣೆಯನ್ನು ನೀಡಲಾಗಿದೆ.

ಗ್ರಂಥಋಣ

ಪ್ರಧಾನ ಗ್ರಂಥಗಳು

1) ಕೊಡಗಿನ ಇತಿಹಾಸ – ಸಂಪಾದಕರು : ಡಿ.ಎನ್.ಕೃಷ್ಣಯ್ಯ
ಪ್ರಕಾಶಕರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
ವರ್ಷ : 1974

2) ಇತಿಹಾಸ ದರ್ಶನ – ಸಂಪಾದಕರು : ಎಂ.ಜಿ.ನಾಗರಾಜ್ ಮತ್ತು ಡಾ. ಪಿ.ವಿ.ಕೃಷ್ಣಮೂರ್ತಿ
ಪ್ರಕಾಶಕರು : ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.
ವರ್ಷ : 2000

3) 'ಕೊಡಗಿನ ಇತಿಹಾಸ' – ಸಂಪಾದಕರು : ಎಚ್.ಪಿ.ಶಶಿಧರಮೂರ್ತಿ ಮತ್ತು ಡಾ. ಸೂರ್ಯನಾಥ ಕಾಮತ್
ಪ್ರಕಾಶಕರು : ಕರ್ನಾಟಕ ಸಂಘ, ವೀರರಾಜೇಂದ್ರ ಪೇಟೆ.
ವರ್ಷ : 1980

4) ಯುಗಧರ್ಮ ಹಾಗೂ ಸಾಹಿತ್ಯ ದರ್ಶನ : ಕೀರ್ತಿನಾಥ ಕುರ್ತಕೋಟಿ.

5) ಕನ್ನಡ ಸಾಹಿತ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತರು: ಡಾ. ಎಸ್.ಎಮ್.ಹಿರೇಮಠ.

6) ಕೊಡಗಿನ ರಾಜಪುತ್ರಿ ವಿಕ್ಟೋರಿಯ ಗೌರಮ್ಮ : ಡಾ. ಎಮ್.ವಿ.ಶ್ರೀಮಸ್.

7) ಪ್ರಬುದ್ಧ ಕರ್ನಾಟಕ ಮಾಸ್ತಿ ಸಂಚಿಕೆ ಪ್ರಕಟಣೆ : 1985.

8) ಮಾಸ್ತಿಯವರ ಚಿಕವೀರರಾಜೇಂದ್ರ ಒಂದು ಅಧ್ಯಯ : ಡಾ. ಸಿ.ಎನ್.ರಾಮಚಂದ್ರನ್.

9) ಚಿಕವೀರರಾಜೇಂದ್ರದಲ್ಲಿ ದುರಂತ : ಎಡ್ವರ್ಡ್ ನೊರೋನ.

ಪರಾಮರ್ಶನ ಗ್ರಂಥಗಳು

1) ಬೆಡಗಿನ ಕೊಡಗು – (ವಿ.ಎಸ್.ರಾಮಕೃಷ್ಣ)	ಪ್ರಕಾಶಕರು	:	ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಾಲದಲ್ಲಿ ಬೆಳಕು ಕಂಡದು.
2) ಕೊಡಗಿನ ಅರಸರು – (ಶ್ರೀ ಎಂ.ಜಿ.ನಾಗರಾಜ್)	ಪ್ರಕಾಶಕರು	:	ಶ್ರೀ ಎಂ.ಜಿ.ನಾಗರಾಜ್, ಜೆ.ಎಸ್.ಎಸ್.ಮಹಾವಿದ್ಯಾಪೀಠ, ಮೈಸೂರು.
	ವರ್ಷ	:	2003
3) ಶ್ರೀನಿವಾಸರ ಕಾದಂಬರಿಗಳಲ್ಲಿ – ಜೀವನ ದರ್ಶನ (ವಿ.ಎಂ.ಇನಾಂದಾರ್)	ಪ್ರಕಾಶಕರು	:	ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು– 560056.
	ವರ್ಷ	:	1980
4) ಜಗತ್ತಿಗೊಂದೇ ಕೊಡಗು – (ಕೆ.ಪಿ.ಮುತ್ತಣ)	ಪ್ರಕಾಶಕರು	:	ಕೊಡಗು.
	ವರ್ಷ	:	1969
5) ಕೊಡಗು ಜಿಲ್ಲೆಯ ಗ್ಯಾಜೆಟಿಯರ್ – (ಡಾ. ಸೂರ್ಯನಾಥ ಕಾಮತ್)	ಪ್ರಕಾಶಕರು	:	ಪರಿಷ್ಕೃತ ಆವೃತಿ.
6) ಸುಂದರ ನಾಡು ಕೊಡಗು – (ಡಿ.ಎಸ್.ಕೃಷ್ಣಯ್ಯ)	ಪ್ರಕಾಶಕರು	:	ಜೈನರ ಬೀದಿ, ಕೊಡಗು.
	ವರ್ಷ	:	1967
7) ಕೊಡವರು – (ಪಿ.ಎಸ್. ರಾಮಾನುಜಂ)	ಪ್ರಕಾಶಕರು	:	ಗೃಹ ಸರಸ್ವತೀ ಗ್ರಂಥಮಾಲೆ, ಮೈಸೂರು ವಿಶ್ವವಿದ್ಯಾಲಯ.
	ವರ್ಷ	:	1975